# ಜ್ಞಾನ-ಯೋಗ-ಪವಿತ್ರತೆ-ಶಾಂತಿಯ ಪಥ-ಪ್ರದರ್ಶನ




ಪ್ರಜಾಪಿತ ಬ್ರಹ್ಮಾಕುಮಾರೀಸ್ ಈಶ್ವರೀಯ ವಿಶ್ವವಿದ್ಯಾಲಯ
ಪಾಂಡವಭವನ, ಅಬುಪರ್ವತ, (ರಾಜಾಸ್ಥಾನ)




ಮಾನವನು ತನ್ನ ಜೀವನದಲ್ಲಿ ಅನೇಕ ರಹಸ್ಯಗಳನ್ನು ಬಿಡಿಸಿದ್ದಾನೆ .ಮತ್ತು ಅದಕ್ಕೆ ಬಹುಮಾನಗಳನ್ನು ಪಡೆದುಕೊಂಡಿದ್ದಾನೆ. ಆದರೆ ಈ ಒಂದು ಪುಟ್ಟದಾದ 'ನಾನು ಯಾರು?' ಎಂಬ ಈ ರಹಸ್ಯವನ್ನು ಯಾರು ಬಿಡಿಸಲಾಗಲಿಲ್ಲ. ಪ್ರತಿಯೊಬ್ಬರೂ ಇಡೀ ದಿನ 'ನಾನು, ನಾನು' ಎಂದು ಹೇಳುತ್ತಿರುತ್ತಾರೆ. ಆದರೆ ನಾನು ಎಂದು ಹೇಳುವವರು....... ಯಾರು? ಎಂದು ಕೇಳಿದರೆ, ಆಗ ಅವನು ನಾನು ಕೃಷ್ಣ, ನಾನು ರಾಮ, ನಾನು ಕರೀಂ, ನಾನು ಡೇವಿಡ್ ಎಂದು ಹೇಳುತ್ತಾನೆ. ಆದರೆ ವಾಸ್ತವಿಕವಾಗಿ ಯೋಚಿಸಿದರೆ ಅದು ಅವನ ಶರೀರದ ಹೆಸರು. ಶರೀರ ನನ್ನದು. ನಾನು ಈ ಶರೀರದಿಂದ ಬೇರೆಯಾಗಿದ್ದೇನೆ. ಇಷ್ಟೇ.......ಈ ಪುಟ್ಟದಾದ ರಹಸ್ಯವನ್ನು ಅರ್ಥ ಮಾಡಿ ಕೊಳ್ಳದಿರುವುದರಿಂದ, ಅಂದರೆ ತನ್ನನ್ನು ತಾನು ಅರಿಯದಿರುವುದರಿಂದ, ಇಂದು ಎಲ್ಲಾ ಮನುಷ್ಯರು ದೇಹಾಭಿಮಾನದಲ್ಲಿದ್ದಾರೆ., ಎಲ್ಲರೂ ಕಾಮ-ಕ್ರೋಧಾದಿ ವಿಕಾರಗಳಿಗೊಳಗಾಗಿ ದುಃಖಿಗಳಾಗಿದ್ದಾರೆ.

ಈಗ ನಾನು ಅಧಿಕಾರಿ, ನಾನು ರೈತ, ನಾನು ಪಂಡಿತ, ನಾನು ಬುದ್ಧಿವಂತ, ನಾನು ಶ್ರೀಮಂತ ಎಂದು ಅಭಿಮಾನದಿಂದ ಹೇಳಿ ಕೊಳ್ಳುತ್ತಾನೆ. ಇದೂ ಕೂಡ ಒಂದು ರೀತಿಯ ಅಜ್ಞಾನ. ನಾನು ಯಾರು? ಈ ಸೃಷ್ಟಿ ನಾಟಕವು ಆದಿಯಿಂದ ಅಂತ್ಯದವರೆಗೆ ಹೇಗೆ ನಡೆಯುತ್ತದೆ? ನಾನು ಇದರಲ್ಲಿ ಪಾತ್ರಮಾಡಲು ಎಲ್ಲಿಂದ ಬಂದೆನು? ಯಾವಾಗ ಬಂದೆನು? ಹೇಗೆ ಸುಖ-ಶಾಂತಿಯ ರಾಜ್ಯವನ್ನು ಕಳೆದು ಕೊಂಡೆನು? ಹಾಗೂ ಪರಮಪಿತ ಪರಮಾತ್ಮನು ಯಾರು? ಎಂಬಿತ್ಯಾದಿ ರಹಸ್ಯಗಳನ್ನು ಈವರೆಗೂ ಯಾರೂ ಸ್ಪಷ್ಟಪಡಿಸಲಿಲ್ಲ. ಆದುದರಿಂದ ನಾವೀಗ ಜೀವನದ ಈ ರಹಸ್ಯವನ್ನು ಮತ್ತೆ ತಿಳಿದುಕೊಂಡಿದ್ದಾದರೆ, ಮತ್ತೆ ಮನುಷ್ಯನು ಆತ್ಮಾಭಿಮಾನಿಯಾಗುತ್ತಾನೆ, ಮತ್ತೆ ಅವನು ನರನಿಂದ ಶ್ರೀ ನಾರಾಯಣ ಮತ್ತು ನಾರಿಯಿಂದ ಶ್ರೀ ಲಕ್ಷ್ಮಿಯ ಪದವಿಯನ್ನು ಪಡೆದು ಕೊಳ್ಳ ಬಹುದು ಹಾಗೂ ಮಾನವಾತ್ಮರಿಗೆ ಮುಕ್ತಿ-ಜೀವನ ಮುಕ್ತಿಯು ಪ್ರಾಪ್ತಿಯಾಗುವುದು. ಇದರಿಂದ ಸಂಪೂರ್ಣ ಸುಖ-ಶಾಂತಿಯನ್ನು ಪಡೆದು ಕೊಳ್ಳ ಬಹುದು. ಓಂ ಶಾಂತಿ.......

# ಪಥ-ಪ್ರದರ್ಶಿನಿ

ಮಾನವನು ದುಃಖ-ಅಶಾಂತನಾದಾಗ 'ಹೇ ಪ್ರಭು, ದುಃಖ ಹರ್ತಾ-ಸುಖಕರ್ತಾ, ನಮಗೆ ಸುಖ-ಶಾಂತಿಯನ್ನು ಕರುಣಿಸು' ಎಂದು ಭಗವಂತನನ್ನು ಬೇಡಿಕೊಳ್ಳುತ್ತಾನೆ. ವಿಕಾರಗಳಿಗೆ ಅಧೀನನಾಗಿರುವಂತಹ ಮಾನವನು ಪವಿತ್ರತೆಗಾಗಿ - 'ವಿಷಯ-ವಿಕಾರಗಳನ್ನು ದೂರಗೊಳಸಿ, ಪಾಪ ಕರ್ಮಗಳಿಂದ ಬಿಡಿಸೋ ಪ್ರಭೂ' ಅಥವಾ 'ನಮ್ಮನ್ನು ಪಾವನಗೊಳಿಸಿ, ಸರ್ವ ಬಂಧನಗಳಿಂದ ಬಿಡಿಸೋ ದೇವ' ಎಂದು ಬೇಡಿಕೊಳ್ಳುತ್ತಾನೆ. ಆದರೆ ಪರಮಪಿತ ಪರಮಾತ್ಮನು ಈ ವಿಕಾರಗಳಿಂದ ಹಾಗೂ ಪಾಪ ಕರ್ಮಗಳಿಂದ ಮುಕ್ತರಾಗಲು ಯಾವ ಈಶ್ವರೀಯ ಜ್ಞಾನವನ್ನು ಕೊಡುತ್ತಿರುವನೋ ಹಾಗೂ ಸಹಜ ರಾಜಯೋಗವನ್ನು ಕಲಿಸುತ್ತಿರುವನೋ, ಬಹುಷಃ ಮಾನವನು ಇದನ್ನು ತಿಳಿದುಕೊಂಡಿಲ್ಲ. ಜೊತೆಗೆ ವ್ಯಾವಹಾರಿಕ ಜೀವನದಲ್ಲಿ ಹೇಗೆ ಅಳವಡಿಸಿಕೊಳ್ಳಬೇಕೆಂಬ ಯುಕ್ತಿಯೂ ಗೊತ್ತಿಲ್ಲ. ಆದುದರಿಂದ ಈಗ ಪರಮಪಿತ ಪರಮಾತ್ಮನು ನಮಗೆ ಮಾರ್ಗ-ದರ್ಶನವನ್ನು ನೀಡುತ್ತಿದ್ದಾನೆ ಹಾಗೂ ಸಹಕಾರವನ್ನೀಯುತ್ತಿದ್ದಾನೆ. ಆದರೆ ನಾವೇ ಪರುಷಾರ್ಥವನ್ನು ಮಾಡಬೇಕಾಗಿದೆ. ಆಗಲೇ ನಮ್ಮ ಜೀವನದಲ್ಲಿ ಸತ್ಯವಾದ ಸುಖ ಮತ್ತು ಸತ್ಯವಾದ ಶಾಂತಿಯನ್ನು ಪಡೆದುಕೊಳ್ಳ ಬಹುದು ಹಾಗೂ ಶ್ರೇಷ್ಠಾಚಾರಿಗಳೂ ಆಗಬಹುದು.

## ಅಂತರಂಗದಲ್ಲಿರುವ ಅಮೃತ ಸೂಚಿ


1. ಪಥ-ಪ್ರದರ್ಶನ ..... 03
2. ಆತ್ಮವೆಂದರೇನು ಮತ್ತು ಮನಸ್ಸು ಎಂದರೇನು? ..... 04
3. ತ್ರಿಲೋಕಗಳು ಯಾವುವು ಮತ್ತು ಶಿವನ ಧಾಮವು ಯಾವುದು? ..... 07
4. ಒಂದು ಅದ್ಭುತವಾದ ಸತ್ಯ ..... 08
5. ಸರ್ವ ಆತ್ಮಗಳ ತಂದೆ ಪರಮಾತ್ಮ ..... 11
6. ಪರಮಾತ್ಮ ಮತ್ತು ಅವನ ದಿವ್ಯ ಕರ್ತವ್ಯ ..... 12
7. ಪರಮಾತ್ಮ ಶಿವನ ದಿವ್ಯ ಅವತಾರ ..... 15
8. ಶಿವ ಮತ್ತು ಶಂಕರ- ವ್ಯತ್ಯಾಸ ..... 16
9. ಒಂದು ಮಹಾನ್ ದೋಷ ..... 19
10. ಸೃಷ್ಟಿಯೆಂಬ ತಲೆಕೆಳಗಾದ ವೃಕ್ಷ ..... 20
11. ಪ್ರಭು ಮಿಲನದ ಗುಪ್ತ ಯುಗ ..... 23
12. ಮನುಷ್ಯಾತ್ಮನ ೮೪ ಜನ್ಮಗಳ ಅದ್ಭುತವಾದ ಕಥೆ ..... 24
13. ಮನುಷ್ಯಾತ್ಮನು ೮೪ ಲಕ್ಷ ಜೀವರಾಶಿಗಳಲ್ಲಿ ಬರುವುದಿಲ್ಲ ..... 27
14. ಪ್ರಜಾಪಿತ ಬ್ರಹ್ಮಾ ಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ..... 28
15. ಪ್ರಜಾಪಿತ ಬ್ರಹ್ಮಾ ಮತ್ತು ಜಗದಂಬಾ ಸರಸ್ವತಿ ..... 29
16. ಸೃಷ್ಟಿ ನಾಟಕದ ರಚಯಿತ ಹಾಗೂ ನಿರ್ದೇಶಕರು ಯಾರು? ..... 30
17. ಕಲಿಯುಗವು ಮಗುವಲ್ಲ, ಈಗ ಮುದಿಯಾಗಿದೆ ..... 33
18. ರಾವಣನಿಗೆ ಹತ್ತು ತಲೆಗಳಿದ್ದವೇನು? ..... 34
19. ಮಾನವ ಜೀವನದ ಲಕ್ಷ್ಯವೇನು? ..... 37
20. ಭವಿಷ್ಯದಲ್ಲಿ ಶ್ರೀ ಕೃಷ್ಣನು ಬರಲಿದ್ದಾನೆ ..... 38
21. ಗೀತಾ-ಜ್ಞಾನ ದಾತನು ಯಾರು? ..... 41
22. ಗೀತಾ ಜ್ಞಾನದಿಂದ ಹಿಂಸಾತ್ಮಕವಾದ ಯುದ್ಧವಾಯಿತೇನು? ..... 42
23. ಜೀವನವನ್ನು ಕಮಲದ ಹೂವಿನಂತೆ ಮಾಡಿಕೊಳ್ಳುವುದು ಹೇಗೆ? ..... 45
24. ರಾಜಯೋಗದ ಆಧಾರ ಮತ್ತು ವಿಧಿ ..... 46
25. ರಾಜಯೋಗದ ಆಧಾರ ಸ್ಥಂಭ ..... 49
26. ರಾಜಯೋಗದಿಂದ ಅಷ್ಟ ಶಕ್ತಿಗಳ ಪ್ರಾಪ್ತಿ ..... 50
27. ರಾಜಯೋಗದ ಯಾತ್ರೆ-ಸ್ವರ್ಗದೆಡೆಗೆ ..... 53
28. ಕರ್ನಾಟಕ ರಾಜ್ಯದ ಮುಖ್ಯ ಸೇವಾ ಕೇಂದ್ರಗಳು ..... 54

# ಆತ್ಮವೆಂದರೇನು? ಮತ್ತು ಮನಸ್ಸು ಎಂದರೇನು?


ಸತ್ಯಾಂಶವೆಂದರೆ "ನಾನು" ಎಂದು ಬಳಸುವ ಪದವು ದೇಹದಿಂದ ಬೇರೆಯಾದ ಚೈತನ್ಯ ಶಕ್ತಿ ಆತ್ಮದ ಸಂಕೇತವಾಗಿದೆ. ಮನುಷ್ಯ ಅಂದರೆ ದೇಹ ಮತ್ತು ಆತ್ಮವನ್ನು ಸೇರಿಸಿ ಹೇಳುತ್ತಾರೆ. ದೇಹವು ಪಂಚತತ್ವ (ಭೂಮಿ,ಜಲ,ಅನಿಲ,ಬೆಂಕಿ,ಆಕಾಶ) ಗಳಿಂದಾಗಿದೆ. ಹಾಗೆಯೇ ಆತ್ಮವು ಮನಸ್ಸು, ಬುದ್ಧಿ ಮತ್ತು ಸಂಸ್ಕಾರಗಳಿಂದ ಕೂಡಿದೆ. ಆತ್ಮದಲ್ಲೇ ವಿಚಾರ ಮಾಡುವ, ನಿರ್ಣಯಿಸುವಂತಹ ಶಕ್ತಿ ಇದೆ. ಕರ್ಮವನ್ನು ಹೇಗೆ ಮಾಡುತ್ತಾರೋ ಹಾಗೆಯೇ ಸಂಸ್ಕಾರವಾಗುತ್ತದೆ.

ಆತ್ಮವು ಒಂದು ಚೈತನ್ಯ ಹಾಗೂ ಅವಿನಾಶಿಯಾದ 'ಜ್ಯೋತಿರ್‌ಬಿಂದು'ವಾಗಿದೆ. ಇದು ಎರಡು ಹುಬ್ಬುಗಳ ಮಧ್ಯದಲ್ಲಿ ವಾಸವಾಗಿದೆ. ರಾತ್ರಿ ವೇಳೆಯಲ್ಲಿ ನಕ್ಷತ್ರಗಳು ಹೊಳೆಯುತ್ತಿರುವುದನ್ನು ನೋಡಿದ್ದೇವೆ, ಹಾಗೆಯೇ ಆತ್ಮನು ನಕ್ಷತ್ರದಂತೆ ಹಣೆಯ ಮಧ್ಯದಲ್ಲಿ ಪ್ರಕಾಶಿಸುತ್ತಿರುವುದನ್ನು ದಿವ್ಯ ದೃಷ್ಟಿಯ ಮುಖಾಂತರ ನೋಡಬಹುದು. ಆದುದರಿಂದಲೇ 'ಭೃಕುಟಿಯ ನಡುವೆ ಅದ್ಭುತವಾದ ನಕ್ಷತ್ರವು ಹೊಳೆಯುತ್ತಿದೆ' ಎಂದು ಹಾಡಿದ್ದಾರೆ. ಹಣೆಯ ಮಧ್ಯದಲ್ಲೇ ಆತ್ಮವು ಇರುವುದರಿಂದ ಮನುಷ್ಯಾತ್ಮರು ಗಂಭೀರವಾಗಿ ಯೋಚಿಸುವಾಗ ಹಾಗೂ. ನನ್ನ ಅದೃಷ್ಟ ಅಥವಾ ನನ್ನ ಹಣೆಯ ಬರಹವೆಂದಾಗಲೂ ಹಣೆಯ ಮೇಲೆ ಕೈ ಇಡುತ್ತಾರೆ. ಆದುದರಿಂದಲೇ ಭಕ್ತರು ಹಣೆಯಲ್ಲೇ ತಿಲಕವನ್ನಿಡುತ್ತಾರೆ.. ಮೆದುಳಿನ ಕೆಳಭಾಗದಲ್ಲಿ ಹೈಪೋಥಲಾಮಸ್ ಎಂಬ ಸ್ಥಳವಿದೆ. ಅಲ್ಲಿಯೇ ಆತ್ಮವಿದೆ.. ಅಲ್ಲಿಂದ ನರಮಂಡಲದ ಮುಖಾಂತರ ಇಡೀ ದೇಹವನ್ನು ನಿಯಂತ್ರಿಸುತ್ತದೆ.


ಆತ್ಮದಲ್ಲಿ ಮೊದಲು ಸಂಕಲ್ಪ (ಯೋಚನೆ, ಭಾವನೆ)ವು ಉತ್ಪನ್ನವಾಗುತ್ತದೆ. ಅದನ್ನು ಮೆದುಳು ಹಾಗೂ ನರಮಂಡಲದ ಮೂಲಕ ಪ್ರಕಟಿಸುತ್ತದೆ. ಆತ್ಮನೇ ಶಾಂತಿ-ಅಶಾಂತಿಯ ಅನುಭವವನ್ನು ದೇಹದ ಮುಖಾಂತರ ಅನುಭವಿಸುತ್ತದೆ ಹಾಗೂ ನಿರ್ಣಯಿಸುತ್ತದೆ. ಮತ್ತು ಅದರಲ್ಲೇ ಸಂಸ್ಕಾರವು ತುಂಬಿಕೊಳ್ಳುತ್ತದೆ. ಆದುದರಿಂದ ಮನಸ್ಸು ಮತ್ತು ಬುದ್ಧಿಯು ಆತ್ಮದಿಂದ ಬೇರೆಯಲ್ಲ. ಆದರೆ ಆತ್ಮನು ತನ್ನನ್ನು ತಾನೇ ಮರೆತಿರುವುದರಿಂದ, ದೇಹದ ಅಭಿಮಾನದಲ್ಲಿ ಬಂದು ಸ್ತ್ರೀ-ಪುರುಷ, ಯುವಕ-ವೃದ್ಧ,ಅಧಿಕಾರಿ-ಭಿಖಾರಿ ಎಂಬ ಅಭಿಮಾನದಲ್ಲಿ ಸಿಲುಕಿಕೊಂಡಿದ್ದಾನೆ. ಈ ದೇಹದ ಅಭಿಮಾನವೇ ಎಲ್ಲಾ ಬಗೆಯ ಸಮಸ್ಯೆಗಳಿಗೂ ಹಾಗೂ ದು:ಖಕ್ಕೂ ಮೂಲ ಕಾರಣವಾಗಿದೆ.

ಈ ರಹಸ್ಯವನ್ನು ಕಾರಿನಲ್ಲಿ ಕುಳಿತಿರುವ ಚಾಲಕನಿಗೆ ಹೋಲಿಸಬಹುದು. ದೇಹವು ಕಾರಿನಂತೆ ಹಾಗೂ ಆತ್ಮವು ಚಾಲಕನಿದ್ದಂತೆ. ಚಾಲಕನು ವಾಹನವನ್ನು ನಿಯಂತ್ರಿಸುವಂತೆ, ಆತ್ಮನು ದೇಹವನ್ನು ನಿಯಂತ್ರಿಸುತ್ತದೆ. ಆತ್ಮವಿಲ್ಲವೆಂದರೆ ದೇಹವು ಹೆಣವಾಗುತ್ತದೆ. ಅಂದರೆ ಚಾಲಕನಿಲ್ಲದ ವಾಹನದಂತೆ. ಆದುದರಿಂದ ತನ್ನನ್ನು ತಾನು ಅರಿತಿದ್ದಾದರೆ ಈ ದೇಹವೆಂಬ ಕಾರನ್ನು ನಡೆಸಬಹುದು ಮತ್ತು ತನ್ನ ಗುರಿಯನ್ನು ಸರಿಯಾಗಿ ತಲುಪಬಹುದು ಎಂದು ಪರಮಪ್ರಿಯ ಪರಮಾತ್ಮನು ಸ್ಪಷ್ಟಪಡಿಸಿದ್ದಾನೆ.ಸರಿಯಾದ ತರಬೇತಿ ಇಲ್ಲದ ಚಾಲಕನು ಕಾರನ್ನು ಸರಿಯಾಗಿ ನಡೆಸದ ಕಾರಣ ಅದು ಅಪಘಾತಕ್ಕೊಳಗಾಗುತ್ತದೆ. ಪ್ರಯಾಣಿಕರಿಗೂ ತೊಂದರೆಯಾಗುತ್ತದೆ. ಇದೇ ರೀತಿಯಲ್ಲಿ ಮಾನವನು ತನ್ನನ್ನು ಆತ್ಮವೆಂದು ಅರಿಯದೇ ಇರುವುದರಿಂದ ತಾನೂ ದುಃಖಿ ಹಾಗೂ ಅಶಾಂತನಾಗಿದ್ದಾನೆ. ಜೊತೆಗೆ ಅವನ ಸಂಪರ್ಕದಲ್ಲಿ ಬರುವವರಿಗೂ ದುಃಖ-ಅಶಾಂತಿಯನ್ನು ನೀಡುತ್ತಾನೆ. ಆದುದರಿಂದ ಸತ್ಯವಾದ ಸುಖ-ಶಾಂತಿ ಬೇಕೆಂದರೆ ತನ್ನನ್ನು ತಾನು "ಆತ್ಮ" ವೆಂದು ಅರಿಯುವುದು ಅತಿ ಅಗತ್ಯವಾಗಿದೆ.

# ಆತ್ಮವೆಂದರೇನು? ಮತ್ತು ಮನಸ್ಸು ಎಂದರೇನು?



# ಮೂರು ಲೋಕಗಳು ಯಾವುವು ಹಾಗೂ ಪರಮಾತ್ಮ ಶಿವನ ಧಾಮ ಯಾವುದು?




**सर्वव्यापकता भावना है, सिद्धांत नहीं**

**OMNIPRESENCE OF GOD IS A FEELING, NOT A FACT.**

# ಮೂರು ಲೋಕಗಳು ಯಾವುವು
# ಹಾಗೂ
# ಪರಮಾತ್ಮ ಶಿವನ ಧಾಮ ಯಾವುದು?

ಮನುಷ್ಯಾತ್ಮರು ಮುಕ್ತಿ ಮತ್ತು ಪೂರ್ಣ ಶಾಂತಿ ಬೇಕೆಂದು ಆಶಿಸುತ್ತಾರೆ. ಆದರೆ ಅವರಿಗೆ ಮುಕ್ತಿಧಾಮ ಅಥವಾ ಶಾಂತಿಧಾಮವು ಎಲ್ಲಿದೆ? ಎಂದು ಗೊತ್ತೇ ಇಲ್ಲ. ಹಾಗೆಯೇ ಪರಮಪ್ರಿಯ ಪರಮಾತ್ಮ ಶಿವನನ್ನು ಮಿಲನ (ದರ್ಶನ) ಮಾಡಲು ಇಚ್ಛಿಸುತ್ತಾರೆ. ಅವನನ್ನು ನೆನೆಪು ಮಾಡುತ್ತಾರೆ ಆದರೆ ಆ ಪವಿತ್ರಧಾಮವು ಎಲ್ಲಿದೆ? ಏಕೆಂದರೆ ಅವನು ಈ ಸೃಷ್ಠಿಗೆ ಅವತರಿಸಿ ಅಲ್ಲಿಂದಲೇ ಬರುತ್ತಾನೆಂಬ ಸತ್ಯವೂ ಅವರಿಗೆ ಗೊತ್ತಿಲ್ಲ. ಆಶ್ಚರ್ಯದ ಸಂಗತಿ ಅಂದರೆ ನಾವು ಮನುಷ್ಯಾತ್ಮರು ಕೂಡ ಅಲ್ಲಿಂದಲೇ ಈ ಸೃಷ್ಟಿ ರಂಗ ಮಂಟಪಕ್ಕೆ ಪಾತ್ರ ಮಾಡಲು ಬಂದೆವು. ಆದರೆ ಇಂದು ಅಂತಹ ಪ್ರಿಯವಾದ ಮನೆಯನ್ನು ಮರೆತಿದ್ದೇವೆ. ಆದುದರಿಂದ ನಾವು ಅಲ್ಲಿಗೆ ಹಿಂದಿರುಗಿ ಹೋಗಲು ಆಗುತ್ತಿಲ್ಲ.

1. ಸಾಕಾರ ಮನುಷ್ಯ ಲೋಕಃ ಈ ಲೋಕದಲ್ಲಿ ಮೂಳೆ ಮಾಂಸದಿಂದ ಕೂಡಿದ ದೇಹವನ್ನು ಪಡೆದುಕೊಂಡು ಕರ್ಮವನ್ನು ಮಾಡುತ್ತಿದ್ದೇವೆ. ಸುಖ-ದುಃಖದ ಫಲವನ್ನು ಅನುಭವಿಸುತ್ತಾ, ಜನನ-ಮರಣದ ಚಕ್ರದಲ್ಲಿ ಬಂದು ಪಾತ್ರವನ್ನು ಮಾಡುತ್ತಿದ್ದೇವೆ. ಇಲ್ಲಿ ಸಂಕಲ್ಪ, ಮಾತು ಮತ್ತು ಕರ್ಮಗಳು ಇವೆ. ಇದನ್ನು 'ಪಂಚ ತತ್ವದ ಸೃಷ್ಟಿ'(ಕರ್ಮಕ್ಷೇತ್ರ) ಎನ್ನುತ್ತಾರೆ. ಈ ಸೃಷ್ಟಿಯು ಆಕಾಶ ತತ್ವದ ಅಂಶ ಮಾತ್ರವಾಗಿದೆ. ಇಲ್ಲಿ ತಲೆಕೆಳಗಾದ ವೃಕ್ಷದ ರೂಪವನ್ನು ತೋರಿಸಲಾಗಿದೆ. ಏಕೆಂದರೆ ಇದರ ಬೀಜ ಸ್ವರೂಪಿಯಾದ ಪರಮಾತ್ಮ ಶಿವನು ಮೇಲಿದ್ದಾನೆ.

2. ಸೂಕ್ಷ್ಮ ದೇವತೆಗಳ ಲೋಕಃ ಈ ಮನುಷ್ಯ ಲೋಕದ ಸೂರ್ಯ, ಚಂದ್ರ, ನಕ್ಷತ್ರಗಳಿಗಿಂತಲೂ ಮೇಲೆ ಅಂದಗ ಆಕಾಶ ತತ್ವಕ್ಕಿಂತಲೂ ಮೇಲೆ ಅತ್ಯಂತ ಪ್ರಕಾಶಮಯವಾದ 'ಸೂಕ್ಷ್ಮ ಲೋಕ' ಒಂದಿದೆ. ಇಲ್ಲಿ ಬ್ರಹ್ಮಾ, ವಿಷ್ಣು ಹಾಗೂ ಶಂಕರರ ಪ್ರತ್ಯೇಕವಾದ ಪುರಿಗಳಿವೆ. ಇವರಿಗೆ ಮೂಳೆ ಮಾಂಸಗಳಿಂದಾದ ದೇಹವಿಲ್ಲ, ಕೇವ ಪ್ರಕಾಶ ಸ್ವರೂಪದ ದೇಹವಿದೆ. ಅವರನ್ನು ದಿವ್ಯ ನೇತ್ರಗಳಿಂದ ಮಾತ್ರ ನೋಡಬಹುದು. ಅಲ್ಲಿ ದುಃ ಅಶಾಂತಿಯ ಮಾತೇ ಇಲ್ಲ. ಇಲ್ಲಿ ಸಂಕಲ್ಪ ಮತ್ತು ಕ್ರಿಯೆಗಳು ನಡೆಯುತ್ತವೆ, ಮಾತನಾಡುತ್ತೇವೆ. ಆದ ಶಬ್ದವಿಲ್ಲ.

3. ಬ್ರಹ್ಮ ಲೋಕ ಅಥವಾ ಪರಮಧಾಮಃ ಈ ಸೂಕ್ಷ್ಮಲೋಕಕ್ಕಿಂತಲೂ ಮೇಲೆ ಮತ್ತೊಂದು ಲೋಕವಿದೆ. ಇದನ್ನೇ ಶಾಂತಿಧಾಮ, ಪರಲೋಕ, ಮುಕ್ತಿಧಾಮ, ನಿರ್ವಾಣಧಾಮ, ಬ್ರಹ್ಮಾಂಡ, ಶಿವಲೋಕವೆಂಬ ಹೆಸರುಗಳಿಂದ ಕರೆಯುತ್ತಾರೆ. ಇಲ್ಲಿ ಸುವರ್ಣಮಯ ಕೆಂಪು ಬಣ್ಣದ ಪ್ರಕಾಶವು ವ್ಯಾಪಿಸಿದೆ. ಇದನ್ನು ಬ್ರಹ್ಮ ತತ್ವ, ಮಹಾ ತತ್ವ ಅಥವಾ ಆರನೇ ತತ್ವವೆಂದು ಕರೆಯುತ್ತಾರ. ಇದರ ಸ್ವಲ್ಪ ಭಾಗದಲ್ಲಿ ಜ್ಯೋತಿರ್ಬಿಂದು ಆತ್ಮಗಳು ಮುಕ್ತಿಯ ಸ್ಥಿತಿಯಲ್ಲಿವೆ. ಇಲ್ಲಿ ಪ್ರತಿಯೊಂದು ಧರ್ಮದ ವಿಭಾಗಗಳೂ ಇವೆ.

ಎಲ್ಲರಿಗಿಂತಲೂ ಮೇಲೆ ಸದಾ ಮುಕ್ತ, ಚೈತನ್ಯ, ಜ್ಯೋತಿರ್ಬಿಂದು ಪರಮಾತ್ಮ 'ಸದಾಶಿವ'ನ ನಿವಾಸಸ್ಥಾನವಿದೆ. ಈ ಸಾಕಾರ ಲೋಕದಲ್ಲಿ ಮನುಷ್ಯಾತ್ಮರು ಕಲ್ಪದ ಅಂತಿಮದಲ್ಲಿ, ಸೃಷ್ಟಿಯ ಮಹಾವಿನಾಶದ ನಂತರ ತಂತಮ್ಮ ಕರ್ಮಗಳಿಗೆ ಫಲವನ್ನು ಅನುಭವಿಸಿ ಪವಿತ್ರರಾಗಿ ಹಿಂದಿರುಗಿ ಹೋಗುತ್ತಾರೆ. ಇಲ್ಲಿ ಮನುಷ್ಯಾತ್ಮರು ದೇಹ-ಬಂಧನ, ಕರ್ಮ-ಬಂಧನ ಹಾಗೂ ಜನನ-ಮರಣ ರಹಿತರಾಗಿರುತ್ತಾರೆ. ಇಲ್ಲಿ ಸಂಕಲ್ಪ, ವಚನ ಹಾಗೂ ಕರ್ಮಗಳಾವುದೂ ಇರುವುದಿಲ್ಲ. ಈ ಲೋಕಕ್ಕೆ ನಾವೆಲ್ಲಾ ಆತ್ಮಗಳನ್ನು ಪರಮಪಿತ ಪರಮಾತ್ಮ ಶಿವನ ಹೊರತು ಬೇರೆ ಯಾವ 'ಗುರು'ಗಳೂ ಕರೆದುಕೊಂಡು ಹೋಗಲಾರರು. ಈ ಲೋಕಕ್ಕೆ ಹೋಗುವುದೇ ಸತ್ಯವಾದ ಅಮರನಾಥ (ವಿಶ್ವನಾಥ)ನ ಯಾತ್ರೆಯಾಗಿದೆ. ಏಕೆಂದರೆ ಅಮರನಾಥ ಶಿವ ಪರಮಾತ್ಮನು ಇಲ್ಲಿಯೇ ಇರುತ್ತಾನೆ.

# ಒಂದು ಅದ್ಭುತವಾದ ಸತ್ಯ...

ಎಲ್ಲಾ ಮನುಷ್ಯಾತ್ಮರು ಪರಮಾತ್ಮನನ್ನು 'ಹೇ ತಂದೆ', 'ಹೇ ದು:ಖ ಹರ್ತ, ಸುಖ ಕರ್ತ 'O! Heavenly, God Father! ಇತ್ಯಾದಿ ಸಂಬಂಧಗಳಿಂದ ಪ್ರಾರ್ಥಿಸುತ್ತಾರೆ. ಆದರೆ 'ತಂದೆ' ಎಂದು ಕರೆದರೂ ಅವನ ಸತ್ಯವಾದ ಹಾಗೂ ಸ್ಪಷ್ಟವಾದ ಪರಿಚಯವು ಯಾರಿಗೂ ಗೊತ್ತಿಲ್ಲದಿರುವುದು ಆಶ್ಚರ್ಯವಾಗಿದೆ.. ಜೊತೆಗೆ ಅವನ ಜೊತೆ ಸರಿಯಾದ ಸ್ನೇಹ ಹಾಗೂ ಸಂಬಂಧದ ಅರಿವೂ ಇಲ್ಲ. ಪರಿಚಯ ಮತ್ತು ಸ್ನೇಹದ ಅಭಾವದಿಂದ ಅವನನ್ನು ಸ್ಮರಿಸುವಾಗ ಮನಸ್ಸು ಅವನಲ್ಲಿ ನಿಲ್ಲುವುದಿಲ್ಲ. ಆದುದರಿಂದ ಪರಮಪಿತ ಪರಮಾತ್ಮನಿಂದ ಮನುಷ್ಯಾತ್ಮರ ಜನ್ಮಸಿದ್ಧಅಧಿಕಾರವಾಗಿರುವ ಸುಖ-ಶಾಂತಿಯೂ ಪ್ರಾಪ್ತಿಯಾಗುತ್ತಿಲ್ಲ. ಅವರು ಪರಮಾತ್ಮನ ಮಧುರ ಮಿಲನದ ಸುಖವನ್ನು ಅನುಭವ ಮಾಡಲಾಗುತ್ತಿಲ್ಲ. ಜೊತೆಗೆ ಅವನಿಂದ ಯಾವುದೇ ಪ್ರಕಾಶ (ಲೈಟ್) ಮತ್ತು ಶಕ್ತಿ (ಮೈಟ್) ಯನ್ನು ಪಡೆಯಲು ಆಗುತ್ತಿಲ್ಲ. ಅಷ್ಟೇಕೆ ಮಾನವನು ತನ್ನ ಸಂಸ್ಕಾರಗಳನ್ನು ಹಾಗೂ ಜೀವನದಲ್ಲಿ ಯಾವುದೇ ಪರಿವರ್ತನೆಯನ್ನು ಮಾಡಿಕೊಳ್ಳಲು ಆಗುತ್ತಿಲ್ಲ. ಆದುದರಿಂದ ನಾವು ಇಲ್ಲಿ ಆ ಪರಮಪ್ರಿಯ ಪರಮಾತ್ಮನ ಸಂಕ್ಷಿಪ್ತ ಪರಿಚಯವನ್ನು ನೀಡುತ್ತಿದ್ದೇವೆ. ಇದನ್ನು ಅವನೇ ಲೋಕ ಕಲ್ಯಾಣದ ದೃಷ್ಟಿಯಿಂದ ನಮಗೆ ತಿಳಿಸಿದ್ದಾನೆ ಹಾಗೂ ಅನುಭವ ಮಾಡಿಸಿದ್ದಾನೆ. ಅಷ್ಟೇ ಅಲ್ಲ ಇಂದಿಗೂ ಅನುಭವ ಮಾಡಿಸುತ್ತಿದ್ದಾನೆ.

## ಪರಮಾತ್ಮನ ದಿವ್ಯ ನಾಮ ಮತ್ತು ಮಹಿಮೆ

ಅವನನ್ನು "ಸದಾ ಶಿವ" ಎಂದು ಕರೆಯುತ್ತಾರೆ. 'ಶಿವ' ಅಂದರೆ ಸದಾ ಕಲ್ಯಾಣಕಾರಿ , ಶುಭಕಾರಿ ಎಂದರ್ಥ. ಅವನೇ ಜ್ಞಾನ ಸಾಗರ, ಶಾಂತ ಸಾಗರ, ಪ್ರೇಮ ಸಾಗರ, ಪವಿತ್ರ ಸಾಗರ, ಆನಂದ ಸಾಗರ, ಸುಖ ಸಾಗರ ಹಾಗೂ ಸರ್ವಶಕ್ತಿವಾನ್ ಆಗಿದ್ದಾನೆ. ಸರ್ವರನ್ನು ಪಾವನ ಮಾಡುವವನೂ ,ಶಾಂತಿಧಾಮ ಹಾಗೂ ಸುಖಧಾಮದ ದಾರಿ ತೋರಿಸುವವನೂ, ವಿಕಾರಗಳ ಹಾಗೂ ಕಾಲನ ಬಂಧನದಿಂದ ಬಿಡಿಸುವ ಮಹಾಕಾಲನೂ, ಸಕಲ ಜೀವ ಕೋಟಿಗಳ ಮೇಲೆ ದಯೆ ತೋರಿಸುವವನೂ ಅವನೆ ಆಗಿದ್ದಾನೆ. ಪರಮಾತ್ಮನಿಗೆ ಮುಕ್ತಿ(ಗತಿ) ಹಾಗೂ ಜೀವನ್ಮುಕ್ತಿ(ಸದ್ಗತಿ)ಯ ವರದಾತನೂ, ದಿವ್ಯಬುದ್ಧಿ ಹಾಗೂ ದಿವ್ಯ ದೃಷ್ಟಿಯ ವರದಾತನೂ ಅವನೇ ಆಗಿದ್ದಾನೆ. ಮನುಕುಲಕ್ಕೆ ಜ್ಞಾನವೆಂಬ ಸೋಮ ಅಥವಾ ಅಮೃತವನ್ನಿತ್ತು ಅಮರ ಪದವಿಯ ವರದಾನವನ್ನು ನೀಡುವ 'ಸೋಮನಾಥ' ಹಾಗೂ 'ಅಮರನಾಥ'ನೆಂಬ ಹೆಸರೂ ಅವನದ್ದೇ ಆಗಿದೆ. ಅಜನ್ಮನೂ, ಅಭೋಕ್ತನೂ, ಸದಾ ವರದಾತನೂ, ಸದಾ ಜಾಗೃತಜ್ಯೋತಿಯೂ, ಸದಾ ಶಿವನೂ, ನಮ್ಮೆಲ್ಲರ ತಂದೆಯೂ ಅವನೇ ಆಗಿದ್ದಾನೆ.


## ಅವನ ದಿವ್ಯ ರೂಪ

ಪರಮಾತ್ಮನ ದಿವ್ಯ ರೂಪ- ಜ್ಯೋತಿರ್ ಬಿಂದು ಅಂದರೆ ದೀಪದ ಬೆಳಕಿನಂತಿದ್ದಾನೆ. ಅದೂ ದಿವ್ಯ, ನಿರ್ಮಲ, ಸುವರ್ಣಮಯ ಹಾಗೂ ಮನಮೋಹಕವಾಗಿದೆ. ಆ ಮಹಾನ್ ಜ್ಯೋತಿಯನ್ನು ದಿವ್ಯ ನೇತ್ರಗಳಿಂದ ಮಾತ್ರ ನೋಡಬಹುದು ಹಾಗೂ ದಿವ್ಯ ಬುದ್ಧಿಯಿಂದ ಅನುಭವಿಸಬಹುದು. ಆ ಪರಮಜ್ಯೋತಿಯ ರೂಪದ ಪ್ರತಿಮೆಗಳನ್ನು ಭಾರತದಾದ್ಯಂತ 'ಶಿವಲಿಂಗ'ದ ಹೆಸರಿನಲ್ಲಿ ಪೂಜಿಸುತ್ತಾರೆ ಹಾಗೂ ಅವನು ಅವತರಿಸಿದುದರ ಸ್ಮಾರಕವಾಗಿ ಇಂದಿಗೂ 'ಶಿವರಾತ್ರಿ' ಯನ್ನು ಆಚರಿಸುತ್ತಾರೆ.


## 'ನಿರಾಕಾರ' ಎಂದರೆ

ದೇಹದ ರೂಪವಿಲ್ಲ. ಇದನ್ನೇ ಎಲ್ಲಾ ಧರ್ಮದವರೂ ಸ್ವೀಕರಿಸಿದ್ದಾರೆ. ಆದರೆ ಈ ಪದವನ್ನು ಕೆಲವರು ಅವನಿಗೆ ರೂಪವೇ ಇಲ್ಲವೆಂದು ಅರ್ಥಮಾಡಿ ಬಿಟ್ಟಿದ್ದಾರೆ. ಹೀಗೆ ಅರ್ಥೈಸುವುದೂ ಕೂಡ ತಪ್ಪು ಎಂದು ಪರಮಾತ್ಮನೇ ಸ್ಪಷ್ಟೀಕರಿಸಿದ್ದಾನೆ. ವಾಸ್ತವಿಕವಾಗಿ ನಿರಾಕಾರ ಅಂದರೆ ಪರಮ ಪಿತನಿಗೆ ಸಾಕಾರದ ರೂಪವಾಗಲಿ, ದೇವತೆಗಳಂತಹ ಸೂಕ್ಷ್ಮ ದೇಹದ ರೂಪವಾಗಲಿ ಇಲ್ಲ. ಆದರೆ ಅವನು ಅಶರೀರಿ ಮತ್ತು ಜ್ಯೋತಿರ್ ಬಿಂದುವಾಗಿದ್ದಾನೆ. 'ಬಿಂದು' ವನ್ನು 'ನಿರಾಕಾರ'ನೆಂದು ಕರೆಯುತ್ತಾರೆ. ಪರಮಾತ್ಮನು ತುಂಬಾ ಸೂಕ್ಷ್ಮವಾಗಿದ್ದಾನೆ. ಒಂದು ಜ್ಯೋತಿ ಕಣವಾಗಿದ್ದಾನೆ ಆದರೆ ಇದನ್ನು ಜನರು ಕಣಕಣದಲ್ಲಿದ್ದಾನೆಂದು ಹೇಳುವುದೂ ಕೂಡ ಒಂದು ಆಶ್ಚರ್ಯಕರವಾದ ಸಂಗತಿಯಾಗಿದೆ.

# ಒಂದು ಅದ್ಭುತವಾದ ಸತ್ಯ...



# ರಾಜಯೋಗದ ಆಧಾರ ಮತ್ತು ವಿಧಿ



# ಸರ್ವ ಆತ್ಮಗಳ ತಂದೆ ಪರಮಾತ್ಮನು ಒಬ್ಬ, ಆದರೆ ಅವನು ನಿರಾಕಾರ

ಬಹುಷಃ 'ಹಿಂದೂ, ಮುಸ್ಲಿಂ, ಸಿಖ್, ಈಸಾಯಿಗಳೆಲ್ಲರೂ ಪರಸ್ಪರ ಸಹೋದರರು' ಎಂದು ಘೋಷಿಸುತ್ತಾರೆ. ಆದರೆ ಅವರೆಲ್ಲರೂ ಪರಸ್ಪರ ಹೇಗೆ ಸಹೋದರರು? ಎಲ್ಲರೂ ಸಹೋದರರಾಗಿದ್ದರೆ, ಅವರೆಲ್ಲರ ತಂದೆ ಒಬ್ಬನೇ ಆಗಬೇಕಿತ್ತಲ್ಲವೇ? ಹಾಗಾದರೆ ಅವನು ಯಾರು? ಇದನ್ನು ಈವರೆಗೆ ಯಾರು ಅರ್ಥಮಾಡಿಕೊಳ್ಳಲಾಗಲಿಲ್ಲ, ದೇಹದ ದೃಷ್ಟಿಯಿಂದ ಪರಸ್ಪರ ಸಹೋದರರಂತೂ ಅಲ್ಲ. ಏಕೆಂದರೆ ಅವರೆಲ್ಲರ ಮಾತಾ-ಪಿತರು ಪ್ರತ್ಯೇಕವಾಗಿದ್ದಾರೆ. ಆತ್ಮದ ದೃಷ್ಟಿಯಿಂದ ಅವರೆಲ್ಲರೂ ಒಬ್ಬ ಪರಮಪಿತ ಪರಮಾತ್ಮನ ಸಂತಾನರು, ಪರಸ್ಪರ ಸಹೋದರರಾಗಿದ್ದಾರೆ. ಇಲ್ಲಿ ಎಲ್ಲಾ ಆತ್ಮಗಳಿಗೂ ತಂದೆಯಾದ ಪರಮಾತ್ಮನ ಪರಿಚಯವನ್ನು ನೀಡಲಾಗಿದೆ. ಇದನ್ನು ಸರಿಯಾಗಿ ಅರ್ಥ ಮಾಡಿಕೊಂಡಿದ್ದಾದರೆ 'ರಾಷ್ಟ್ರೀಯ ಏಕತೆ'ಯು ಈ ಕ್ಷಣದಲ್ಲೇ ಬರುತ್ತದೆ.

ಬಹುಷಃ ಎಲ್ಲಾ ಧರ್ಮದವರು 'ಪರಮಾತ್ಮನು ಒಬ್ಬ' ಮತ್ತು ನಾವೆಲ್ಲರೂ ಪರಸ್ಪರ ಸಹೋದರರಾಗಿದ್ದಾರೆಂದ ಮೇಲೆ, ಎಲ್ಲರೂ ಒಪ್ಪಿರುವಂತಹ ಆ ಪರಮಾತ್ಮನು ಯಾರು? ಧರ್ಮಸ್ಥಾಪಕರು ಬೇರೆ ಬೇರೆಯಾಗಿದ್ದರೂ ಕೂಡ, ಪ್ರತಿಯೊಂದು ಧರ್ಮದ ಅನುಯಾಯಿಗಳೂ ಕೂಡ ನಿರಾಕಾರಿ, ಜ್ಯೋತಿ ಸ್ವರೂಪಿ ಪರಮಾತ್ಮ ಶಿವನ ಪ್ರತಿಮೆ (ಶಿವಲಿಂಗ) ಯನ್ನು ಒಂದಲ್ಲಾ ಒಂದು ರೀತಿಯಲ್ಲಿ ಸ್ವೀಕರಿಸಿದ್ದಾರೆ. ಭಾರತ ದೇಶದ ಅನೇಕ ಸ್ಥಳಗಳಲ್ಲಿ ಶಿವಾಲಯಗಳಿವೆ ಮತ್ತು ಭಕ್ತರು 'ಓಂ ನಮಃ ಶಿವಾಯ' ಹಾಗೂ 'ನೀನೇ ನನ್ನ ಮಾತಾ-ಪಿತ' ಎಂದು ಮಹಿಮೆ ಮಾಡುತ್ತಾರೆ. ಶಿವನು ಶ್ರೀ ಕೃಷ್ಣ ಮತ್ತು ಶ್ರೀ ರಾಮ ಇತ್ಯಾದಿ ದೇವತೆಗಳಿಗೂ ದೇವ ಅಂದರೆ ಪರಮ ಪೂಜ್ಯನೆಂದೇ (ಗೋಪೇಶ್ವರ, ರಾಮೇಶ್ವರ) ಒಪ್ಪಿದ್ದಾರೆ. ಜೊತೆಗೆ ಬೇರೆ ದೇಶಗಳಲ್ಲಿರುವ ಧರ್ಮದವರೂ ಕೂಡ ಇದನ್ನೇ ಒಪ್ಪಿದ್ದಾರೆ. ಮುಂದಿನ ಚಿತ್ರದಲ್ಲಿ ಶಿವ ಪರಮಾತ್ಮನ ಸ್ಮೃತಿ-ಚಿಹ್ನೆಯು ಎಲ್ಲಾ ಧರ್ಮದವರಲ್ಲೂ ಒಂದೇ ರೀತಿ ಇರುವುದನ್ನು ಕಾಣುತ್ತೇವೆ.

ಅಮರನಾಥ, ವಿಶ್ವನಾಥ, ಸೋಮನಾಥ ಮತ್ತು ಪಶುಪತಿನಾಥ ಇತ್ಯಾದಿ ಶಿವಮಂದಿರಗಳಲ್ಲಿ ಪರಮಪಿತ ಪರಮಾತ್ಮ ಶಿವನ ಸ್ಮಾರಕದ ಚಿಹ್ನೆಗಳಿವೆ. ಭಾರತದಲ್ಲಿ ರಾಜಾ ವಿಕ್ರಮಾಧಿತ್ಯನು ಪ್ರಪ್ರಥಮವಾಗಿ ಶಿವನ ಪೂಜೆಯನ್ನು ಮಾಡಿದನು. ಮುಸಲ್ಮಾನರ ಮುಖ್ಯ ತೀರ್ಥ ಸ್ಥಳವಾದ ಮಕ್ಕಾದಲ್ಲೂ ಕೂಡ 'ಸಂಗ್-ಏ-ಅಸ್ವದ' ಎಂಬ ಕಪ್ಪು ಶಿಲೆಯನ್ನಿಟ್ಟಿದ್ದಾರೆ. ಇದನ್ನು ಮುಸಲ್ಮಾನರೆಲ್ಲರೂ ತುಂಬಾ ಪ್ರೀತಿಯಿಂದ ಹಾಗೂ ಗೌರವದಿಂದ ಮುತ್ತಿಡುತ್ತಾರೆ. ಇದು ಇಬ್ರಾಹಿಂ ಹಾಗೂ ಮುಹಮದ್‌ರ ಮುಖಾಂತರ ಸ್ಥಾಪಿಸಲ್ಪಟ್ಟಿತ್ತು. ಅವರಲ್ಲಿ ಮೂರ್ತಿ ಪೂಜೆ ಇಲ್ಲದಿದ್ದರೂ ಕೂಡ ಇಂತಹ ರೂಪದ ಶಿಲೆಯನ್ನು ಏಕೆ ಇಟ್ಟಿದ್ದಾರೆ ಹಾಗೂ ಅದನ್ನು ಪ್ರೀತಿಯಿಂದ ಹಾಗೂ ಗೌರವದಿಂದ ಏಕೆ ಮುತ್ತಿಡುತ್ತಾರೆಂಬ ರಹಸ್ಯವು ಯಾರಿಗೂ ಗೊತ್ತಿಲ್ಲ. ಇಟಲಿಯಲ್ಲಿ ಕೆಲವು ರೋಮನ್ ಕ್ಯಾಥೋಲಿಕ್ ಕ್ರಿಶ್ಚಿಯನ್ನರು ಇಂತದೇ ಪ್ರತಿಮೆಯನ್ನಿಟ್ಟು ಧ್ಯಾನಮಾಡುತ್ತಾರೆ. ಕ್ರಿಶ್ಚಿಯನ್ ಧರ್ಮ ಸ್ಥಾಪಕರಾದ ಏಸುಕ್ರಿಸ್ತ(Jesus Christ) ಹಾಗೂ ಸಿಖ್ ಧರ್ಮ ಸ್ಥಾಪಕನಾದ ಗುರು ನಾನಕ ರೂ ಕೂಡ ಪರಮಾತ್ಮನನ್ನು ಏಕ್ ಓಂಕಾರ್, ನಿರಾಕಾರ ಜ್ಯೋತಿ ಎಂದೇ ಒಪ್ಪಿದ್ದಾರೆ. ಯಹೂದಿಗಳು ಪರಮಾತ್ಮನನ್ನು ಜೆಹೋವ (Jehovah) ಎಂದು ಕರೆಯುತ್ತಾರೆ. ಈ ಪದವು 'ಶಿವ' ಪದದ ರೂಪಾಂತರವಾಗಿದೆ. ಜಪಾನ್ ದೇಶದಲ್ಲಿ ಬೌದ್ಧ ಧರ್ಮದ ಅನುಯಾಯಿಗಳೂ ಕೂಡ ಇಂತದೇ ಒಂದು(ಚಿನಕನ್‌ಸೇಕಿ) ಪ್ರತಿಮೆಯನ್ನು ತಮ್ಮ ಮುಂದಿಟ್ಟುಕೊಂಡು ಮನಸ್ಸನ್ನು ಏಕಾಗ್ರಗೊಳಿಸುತ್ತಾರೆ.

ಆದರೆ ಕಾಲ ಚಕ್ರವು ಉರುಳಿದಂತೆ ಎಲ್ಲಾ ಧರ್ಮದವರೂ ಶಿವಲಿಂಗವು ಎಲ್ಲಾ ಮನುಷ್ಯಾತ್ಮರ ಪರಮ ಪಿತನ ಸ್ಮಾರಕ ಚಿಹ್ನೆ ಎಂಬ ಮೂಲ ತತ್ವವನ್ನು ಮರೆತುಬಿಟ್ಟರು. ಈ ಸತ್ಯವು ಎಲ್ಲರಿಗೂ ಅರ್ಥವಾಗಿದ್ದರೆ ಎಲ್ಲಾ ಧರ್ಮಾನುಯಾಯಿಗಳು ಭಾರತವನ್ನು ಪರಮಪಿತ 'ಪರಮಾತ್ಮನ ಅವತಾರ ಭೂಮಿ' ಎಂದು ತಿಳಿದುಕೊಂಡು ಎಲ್ಲದಕ್ಕಿಂತ ಮುಖ್ಯವಾದ 'ತೀರ್ಥಸ್ಥಾನ' ಇದೇ ಎಂದು ಸ್ವೀಕರಿಸಿದ್ದರೆ ಈ ಜಗತ್ತಿನ ಇತಿಹಾಸವೇ ಬೇರೆಯಾಗಿಬಿಡುತ್ತಿತ್ತು. ಆದರೆ ಒಬ್ಬ ತಂದೆಯನ್ನು ಮರೆತಿದ್ದರಿಂದ ಜಗತ್ತಿನಲ್ಲಿ ಎಲ್ಲರೂ ಜಗಳ-ಯುದ್ಧ, ದುಃಖ ಹಾಗೂ ಕಲಹ-ಕ್ಲೇಶಗಳಿಂದ ಅನಾಥರು ಹಾಗೂ ನಿರ್ಗತಿಕರೂ ಆಗಿದ್ದಾರೆ.

# ಪರಮಪಿತ ಪರಮಾತ್ಮ ಮತ್ತು ಅವನ ದಿವ್ಯ ಕರ್ತವ್ಯ

ಪರಮಪಿತ ಪರಮಾತ್ಮ ಜ್ಯೋತಿರ್ಬಿಂದು ಶಿವನು ಈ ಕಲಿಯುಗದ ಅಂತ್ಯದಲ್ಲಿ ಧರ್ಮಗ್ಲಾನಿ ಅಥವಾ ಅಜ್ಞಾನದ ರಾತ್ರಿಯ ಸಮಯದಲ್ಲಿ ಸೃಷ್ಟಿಯ ಕಲ್ಯಾಣಕ್ಕಾಗಿ ಅವತರಿಸುತ್ತಾನೆ. ಅದಕ್ಕಾಗಿ ಪರಮಾತ್ಮ ಶಿವನು ಪ್ರಪ್ರಥಮವಾಗಿ ಸೂಕ್ಷ್ಮಲೋಕದಲ್ಲಿ ಸೂಕ್ಷ್ಮ ದೇವತೆಗಳಾದ ಬ್ರಹ್ಮಾ, ವಿಷ್ಣು ಹಾಗೂ ಶಂಕರರನ್ನು ರಚನೆ ಮಾಡುತ್ತಾನೆ. ಆದುದರಿಂದಲೇ ಪರಮಾತ್ಮನಿಗೆ 'ತ್ರಿಮೂರ್ತಿ ಶಿವ' ಎಂದು ಕರೆಯುತ್ತಾರೆ. ನಂತರ ಪರಮಾತ್ಮನು ತಾನೇ ಈ ಮನುಷ್ಯ ಲೋಕದಲ್ಲಿ ಸಾಧಾರಣ ಭಕ್ತ ಹಾಗೂ ವೃದ್ಧ ಮನುಷ್ಯನ ದೇಹದಲ್ಲಿ ಅವತರಿಸಿ ಅವರಿಗೆ 'ಪ್ರಜಾಪಿತ ಬ್ರಹ್ಮಾ' ಎಂದು ಹೆಸರಿಸುತ್ತಾನೆ.

ಪ್ರಜಾಪಿತ ಬ್ರಹ್ಮಾರವರ ಮುಖಾಂತರ ಪರಮಾತ್ಮ ಶಿವನು ಮನುಷ್ಯಾತ್ಮರಿಗೆ ತಂದೆ, ಶಿಕ್ಷಕ, ಸಖಾ ಹಾಗೂ ಸದ್ಗುರುವಿನ ರೂಪದಲ್ಲಿ ಸಹಜವಾದ ಜ್ಞಾನ ಹಾಗೂ ಸಹಜವಾದ ರಾಜಯೋಗದ ಶಿಕ್ಷಣವನ್ನು ಕಲಿಸಿ ಅವರಿಗೆ ಸದ್ಗತಿಯನ್ನು ನೀಡುತ್ತಾನೆ. ಅಂದರೆ ಜೀವನ್ಮುಕ್ತಿಯನ್ನು ಕರುಣಿಸುತ್ತಾನೆ.

## ಶಂಕರನ ಮೂಲಕ ಕಲಿಯುಗೀ ಸೃಷ್ಟಿಯ ಮಹಾವಿನಾಶ


ಈ ಕಲಿಯುಗದ ಅಂತಿಮ ಸಮಯದಲ್ಲಿ ಬ್ರಹ್ಮಾರವರ ಮುಖಾಂತರ ಸತಯುಗೀ ದೈವೀಸೃಷ್ಟಿಯ ಸ್ಥಾಪನೆಯ ಜೊತೆಗೆ ಹಳೆಯ ಆಸುರೀ ಸೃಷ್ಟಿಯ ಮಹಾವಿನಾಶದ ತಯಾರಿಯನ್ನು ಆರಂಭಿಸಿ ಬಿಡುತ್ತಾನೆ. ಒಂದೆಡೆ ವಿಜ್ಞಾನದ ಅಭಿಮಾನಿಗಳು ಹಾಗೂ ವಿಪರೀತ ಬುದ್ಧಿಯ ವಿದೇಶಿ(ಯಾದವರು)ಗಳು ಅಣ್ವಸ್ತ್ರಗಳನ್ನೂ ತಯಾರಿಸುತ್ತಾರೆ. (ಮಹಾ ಭಾರತದ ಆಗ್ನೇಯಾಸ್ತ್ರ ಹಾಗೂ ಬ್ರಹ್ಮಾಸ್ತ್ರ) ಇನ್ನೊಂದು ಕಡೆ ಭಾರತ ದೇಶದ ಕೆಲವರು ದೇಹಾಭಿಮಾನಕ್ಕೊಳಗಾಗಿ, ಧರ್ಮ ಭ್ರಷ್ಟರೂ, ಕರ್ಮ ಭ್ರಷ್ಟರೂ ಹಾಗೂ ವಿಪರೀತ ಬುದ್ಧಿಯವರಾಗಿ (ಮಹಾಭಾರತದ ಕೌರವರು) ಪರಸ್ಪರ ಆಂತರಿಕ ಜಗಳದಲ್ಲಿ ಮುಳುಗಿ ಪರಿವರ್ತನೆಗೆ ಕಾರಣರಾಗುತ್ತಾರೆ.

## ವಿಷ್ಣುವಿನ ಮೂಲಕ ಪಾಲನೆ

ಶ್ರೀ ವಿಷ್ಣುವಿನ ನಾಲ್ಕು ಭುಜಗಳೂ ಅಂದರೆ ಶ್ರೀ ನಾರಾಯಣನ ಎರಡು ಭುಜಗಳು ಹಾಗೂ ಶ್ರೀ ಲಕ್ಷ್ಮಿಯ ಎರಡು ಭುಜಗಳು. 'ಶಂಖು' ಪವಿತ್ರವಾದ ಜ್ಞಾನವನ್ನು ನೀಡುವುದರ ಸಂಕೇತವಾಗಿದೆ. 'ಸ್ವದರ್ಶನಚಕ್ರ'ವು ಆತ್ಮ (ಸ್ವ) ದ ಹಾಗೂ ಸೃಷ್ಟಿಚಕ್ರದ ಜ್ಞಾನದ ಚಿಹ್ನೆಯಾಗಿದೆ. 'ಕಮಲಪುಷ್ಪ'ವು ಸಂಸಾರದಲ್ಲಿದ್ದರೂ ನಿರ್ಲಿಪ್ತ ಹಾಗೂ ಪವಿತ್ರರಾಗಿರುವುದರ ಸಂಕೇತವಾಗಿದೆ. 'ಗದೆ'ಯು ಮಾಯೆ ಅಂದರೆ ಐದು ವಿಕಾರಗಳ ಮೇಲೆ ವಿಜಯವನ್ನು ಗಳಿಸುವುದರ ಸಂಕೇತವಾಗಿದೆ. ಆದ್ದರಿಂದ ಮನುಷ್ಯಾತ್ಮರ ಮುಂದೆ ವಿಷ್ಣು ಚತುರ್ಭುಜದ ಗುರಿಯನ್ನು ಮುಂದಿಟ್ಟುಕೊಂಡು ಈ ಅಲಂಕಾರಗಳ ರಹಸ್ಯವನ್ನು ಅರಿತು ಜೀವನದಲ್ಲಿ ಅಳವಡಿಸಿಕೊಂಡಿದ್ದಾದರೆ ಶ್ರೀ ಲಕ್ಷ್ಮಿ ಹಾಗೂ ಶ್ರೀ ನಾರಾಯಣರ ಪದವಿಯನ್ನು ಪ್ರಾಪ್ತಿ ಮಾಡಿಕೊಳ್ಳಬಹುದು. ಇಲ್ಲಿ ಡಬಲ್ ಕಿರೀಟ ಅಂದರೆ ಒಂದು ಪ್ರಕಾಶಮಯವಾದ ಪ್ರಭಾಮಂಡಲ ಅಂದರೆ ಪವಿತ್ರತೆ ಹಾಗೂ ಶಾಂತಿಯ ಸಂಕೇತವಾಗಿದೆ. ಮತ್ತೊಂದು ರತ್ನ ಖಚಿತವಾದ ಚಿನ್ನದ ಕಿರೀಟ ಅಂದರೆ ಸುಖ ಅಥವಾ ರಾಜ್ಯಭಾಗ್ಯದ ಸೂಚಕವಾಗಿದೆ.

ಹೀಗೆ ಪರಮಾತ್ಮ ಶಿವನು ಸತಯುಗ ಹಾಗೂ ತ್ರೇತಾಯುಗದ ಪವಿತ್ರ, ದೈವಿ ಸೃಷ್ಟಿಯ ಪಾಲನೆಯ ಸಂಸ್ಕಾರವನ್ನು ತುಂಬುತ್ತಾನೆ. ಇದರ ಫಲವೇ ಸತ್ಯಯುಗದ ಶ್ರೀ ಲಕ್ಷ್ಮಿ ಹಾಗೂ ಶ್ರೀ ನಾರಾಯಣ ಮತ್ತು ತ್ರೇತಾಯುಗದಲ್ಲಿ ಶ್ರೀ ಸೀತೆ ಹಾಗೂ ಶ್ರೀ ರಾಮ ಮತ್ತು ಅನ್ಯರು ರಾಜ್ಯಭಾರ ನಡೆಸುತ್ತಾರೆಂಬ ಸಂಕೇತ. ಪರಮಾತ್ಮ ಶಿವನು ಈ ಮೂರು ದೇವತೆಗಳ ಮುಖಾಂತರ ಈಗ ಮೂರು ಕರ್ತವ್ಯವನ್ನೂ ಮಾಡುತ್ತಿದ್ದಾನೆ. ಈಗ ನಾವು ಪರಮಾತ್ಮ ಶಿವ ಹಾಗೂ ಪ್ರಜಾಪಿತ ಬರಹ್ಮಾರವರ ಜೊತೆ ಆತ್ಮಿಕ ಸಂಬಂಧವನ್ನು ಬೆಳೆಸಿ ಪವಿತ್ರರಾಗುವಂತಹ ಪುರುಷಾರ್ಥವನ್ನು ಮಾಡಬೇಕಾಗಿದೆ. ಅಂದರೆ ಮುಕ್ತಿ ಹಾಗೂ ಜೀವನ್ಮುಕ್ತಿಯಾದ ಈಶ್ವರೀಯ ಜನ್ಮಸಿದ್ಧ ಅಧಿಕಾರವನ್ನು ಪ್ರಾಪ್ತಿ ಮಾಡಿಕೊಳ್ಳುವಂತಹ ಸಾಧನೆಯನ್ನು ಮಾಡಬೇಕಾಗಿದೆ.

# ಪರಮಪಿತ ಪರಮಾತ್ಮ ಮತ್ತು ಅವನ ದಿವ್ಯ ಕರ್ತವ್ಯ



# ಪರಮಾತ್ಮ ಶಿವನ ದಿವ್ಯ-ಅವತಾರ



# ಪರಮಾತ್ಮ ಶಿವನ ದಿವ್ಯ-ಅವತಾರ

ಶಿವ ಅಂದರೆ 'ಕಲ್ಯಾಣಕಾರಿ'. ಪರಮಾತ್ಮನು ಧರ್ಮಗ್ಲಾನಿಯ ಸಮಯ ಅಂದರೆ ಎಲ್ಲಾ ಮನುಷ್ಯಾತ್ಮರು ಮಾಯೆ(ಐದು ವಿಕಾರಗಳು)ಗೆ ವಶರಾಗಿ ದುಃಖಿಗಳು, ಅಶಾಂತರು, ಪತಿತರು ಹಾಗೂ ಭ್ರಷ್ಟಾಚಾರಿಗಳಾಗಿಬಿಡುತ್ತಾರೆ. ಆಗ ಅವರನ್ನು ಮತ್ತೆ ಪಾವನ ಹಾಗೂ ಸಂಪೂರ್ಣ ಸುಖಿಗಳನ್ನಾಗಿ ಮಾಡುವಂತಹ ಕಲ್ಯಾಣದ ಕರ್ತವ್ಯವನ್ನು ನಿರ್ವಹಿಸುತ್ತಾನೆ. ಶಿವನು ಬ್ರಹ್ಮಲೋಕದಿಂದ ಕೆಳಗಿಳಿದು ಮನುಷ್ಯನೊಬ್ಬನ ದೇಹವನ್ನು ಆಧಾರ ಮಾಡಿಕೊಳ್ಳುತ್ತಾನೆ. ಪರಮಾತ್ಮ ಶಿವನ ಈ ಅವತರಣೆಯ ಅಥವಾ ದಿವ್ಯ ಹಾಗೂ ಅಲೌಕಿಕ ಜನ್ಮದ ಪಾವನ ಸ್ಮೃತಿಯೇ 'ಮಹಾ ಶಿವರಾತ್ರಿ'. ಅಂದರೆ 'ತ್ರಿಮೂರ್ತಿ ಶಿವಜಯಂತಿ'ಯ ಹಬ್ಬವಾಗಿದೆ.

ಪರಮಾತ್ಮ ಶಿವನು ಸಾಧಾರಣ ಹಾಗೂ ವೃದ್ಧ ಮಾನವನ ದೇಹದಲ್ಲಿ ಅವತರಿಸಿ ಅವರನ್ನು ಪರಿವರ್ತಿಸಿದ ನಂತರ ಅವರಿಗೆ 'ಪ್ರಜಾಪಿತ ಬ್ರಹ್ಮಾ' ಎಂದು ಹೆಸರಿಟ್ಟನು. ಅವರ ಸ್ಮಾರಕವಾಗಿಯೇ ಶಿವನ ಪ್ರತಿಮೆಯ ಮುಂದೆ 'ನಂದಿಗಣ' (ಬಸವ)ವನ್ನು ತೋರಿಸುತ್ತಾರೆ. ಏಕೆಂದರೆ ಪರಮಾತ್ಮನು ಸರ್ವ ಆತ್ಮಗಳಿಗೂ ಮಾತಾ-ಪಿತನಾಗಿದ್ದಾನೆ. ಆದುದರಿಂದ ಪರಮಾತ್ಮನು ಯಾವುದೇ ಮಾತೆಯ ಗರ್ಭದಿಂದ ಜನ್ಮವನ್ನು ಪಡೆಯುವುದಿಲ್ಲ. ಆದರೆ ಬ್ರಹ್ಮಾರವರ ದೇಹದಲ್ಲಿ ಅವತರಿಸಿ ಅಂದರೆ ದಿವ್ಯ ಜನ್ಮವನ್ನು ಪಡೆಯುತ್ತಾನೆ.

**ಅಜನ್ಮನಾದ ಪರಮಾತ್ಮ ಶಿವನ ದಿವ್ಯ ಜನ್ಮವು ವಿಶೇಷವಾದದ್ದು !**

ಪರಮಾತ್ಮ ಶಿವನು ತಾನೇ ಮತಾ-ಪಿತನಾದ್ದರಿಂದ ಮನುಷ್ಯ ಸೃಷ್ಟಿಯ ಚೈತನ್ಯ ಬೀಜರೂಪಿಯಾಗಿದ್ದಾನೆ. ಜನನ-ಮರಣ ಹಾಗೂ ಕರ್ಮ ಬಂಧನ ರಹಿತನಾಗಿದ್ದಾನೆ. ಅವನು ಸಾಧಾರಣ ವೃದ್ಧ ಮಾನವನ ದೇಹದಲ್ಲಿ ಪ್ರವೇಶಿಸುತ್ತಾನೆ. ಇದನ್ನೇ ಪರಮಾತ್ಮ ಶಿವನ 'ದಿವ್ಯ ಜನ್ಮ' ಅಥವಾ 'ಅವತಾರ' ವೆನ್ನುತ್ತಾರೆ. ಏಕೆಂದರೆ ಯಾರ ದೇಹದಲ್ಲಿ ಪ್ರವೇಶಿಸುತ್ತಾನೋ, ಅವರು ಜನನ-ಮರಣ ಹಾಗೂ ಕರ್ಮ ಬಂಧನಗಳ ಚಕ್ರದಲ್ಲಿ ಬರುವಂತಹ ಮನುಷ್ಯಾತ್ಮನ ದೇಹವಾಗಿದೆ. ಅದು ಪರಮಾತ್ಮನ ಸ್ವಂತ ದೇಹವಲ್ಲ.

ಇಡೀ ಜಗತ್ತು ಮಾಯೆ (ಅಂದರೆ ಕಾಮ, ಕ್ರೋಧ, ಲೋಭ, ಮೋಹ, ಅಹಂಕಾರ ಇತ್ಯಾದಿ ಐದು ವಿಕಾರಗಳು) ಯ ಪಂಜರದಲ್ಲಿ ಸಿಲುಕಿಕೊಳ್ಳುತ್ತದೆ. ಆಗ ಪರಮಪಿತ ಪರಮಾತ್ಮ ಶಿವನು ಮಾನವಾತ್ಮರಿಗೆ ಪವಿತ್ರತೆ, ಸುಖ ಮತ್ತು ಶಾಂತಿಯ ವರದಾನವನ್ನಿತ್ತು ಮಾಯೆಯ ಬಂಧನದಿಂದ ಬಿಡಿಸುತ್ತಾನೆ ಇದನ್ನೇ ಚಿತ್ರದಲ್ಲಿ ತೋರಿಸಲಾಗಿದೆ. ಅವನೇ ಸಹಜ ಜ್ಞಾನ ಹಾಗೂ ರಾಜಯೋಗದ ಶಿಕ್ಷಣವನ್ನು ನೀಡುತ್ತಾನೆ ಹಾಗೂ ಎಲ್ಲಾ ಆತ್ಮರುಗಳನ್ನು ಪರಮಧಾಮಕ್ಕೆ ಕರೆದೊಯ್ಯುತ್ತಾನೆ ಹಾಗೂ ಮುಕ್ತಿ ಮತ್ತು ಜೀವನ್ಮುಕ್ತಿಯ ವರದಾನವನ್ನೀಯುತ್ತಾನೆ.

ಶಿವರಾತ್ರಿಯ ಹಬ್ಬವು ಫಾಲ್ಗುಣ ಮಾಸದ ಕೃಷ್ಣ ಪಕ್ಷದ ಚತುರ್ದಶಿಯಂದು ಸಂಪೂರ್ಣ ಅಂಧಕಾರದ ದಿನದಲ್ಲಿ ಆಚರಿಸಲ್ಪಡುತ್ತದೆ. ತದನಂತರ ಶುಕ್ಲ ಪಕ್ಷವು ಆರಂಭವಾಗುತ್ತದೆ ಮತ್ತು ಕೆಲವು ದಿನಗಳ ನಂತರ ಹೊಸ ಸಂವತ್ಸರ (ಯುಗದ+ಆದಿ=ಯುಗಾದಿ) ವು ಆರಂಭವಾಗುತ್ತದೆ. ಆದುದರಿಂದ ರಾತ್ರಿಯು ಆತ್ಮಗಳ ಅಜ್ಞಾನ ಅಂಧಕಾರ, ವಿಕಾರ ಅಥವಾ ಆಸುರೀ ಲಕ್ಷಣಗಳ ತುತ್ತ ತಿದಿಯನ್ನೇರಿರುವ ಅಂತಿಮ ಚರಣದ ಸಂಕೇತವಾಗಿದೆ. ಇದರ ನಂತರ ಸಂಪೂರ್ಣ ಪವಿತ್ರರಾದ ಆತ್ಮಗಳು ಶುಕ್ಲ ಪಕ್ಷ ಅಥವಾ ಹೊಸ(ಸತ್ಯಯುಗ) ಕಲ್ಪಕ್ಕೆ ಪ್ರವೇಶಿಸುತ್ತಾರೆ.

ಪರಮಾತ್ಮ ಶಿವನು ಅವತರಿಸಿ ತನ್ನ ಜ್ಞಾನ, ಯೋಗ ಹಾಗೂ ಪವಿತ್ರತೆಯ ಮೂಲಕ ಆತ್ಮಗಳಲ್ಲಿ ಆಧ್ಯಾತ್ಮಿಕ ಜಾಗೃತಿಯನ್ನು ಮೂಡಿಸುತ್ತಾನೆ. ಇದರ ಮಹತ್ವಿಕೆಯ ಅಂಗವಾಗಿ ಭಕ್ತರು ಶಿವರಾತ್ರಿಯಂದು ಜಾಗರಣೆಯನ್ನು ಆಚರಿಸುತ್ತಾರೆ. ಅಂದೇ ಉಪವಾಸದ ವ್ರತವನ್ನೂ ಪಾಲಿಸುತ್ತಾರೆ. ಉಪವಾಸ ಅಂದರೆ ಹತ್ತಿರ ಇರುವುದು ಅಂದರೆ ಪರಮಾತ್ಮನ ಸಮೀಪ ಇರುವುದು. ಅಂದರೆ ಪರಮಾತ್ಮನ ಸಾಮೀಪ್ಯಕ್ಕೆ ಪವಿತ್ರತೆಯ ವ್ರತವನ್ನು ಸ್ವೀಕರಿಸುವುದು ಅತ್ಯಂತ ಅಗತ್ಯವಾಗಿದೆ.

# ಶಿವ ಮತ್ತು ಶಂಕರರರಿಗಿರುವ ವ್ಯತ್ಯಾಸ

ಅನೇಕರು ಶಿವ ಮತ್ತು ಶಂಕರ ಇಬ್ಬರೂ ಒಂದೇ ಎಂದು ತಿಳಿದಿದ್ದಾರೆ. ಆದರೆ ಸತ್ಯಾಂಶವೆಂದರೆ ಇಬ್ಬರೂ ಬೇರೆ ಬೇರೆ. ಇಬ್ಬರ ರೂಪವು ಬೇರೆಯಾಗಿರುವುದನ್ನು ಕಾಣುತ್ತೇವೆ. ಶಿವನ ಪ್ರತಿಮೆಯು ಅಂಗುಷ್ಟಾಕಾರವಾಗಿದೆ. ಮಹಾದೇವ ಶಂಕರನ ಮಹಿಮೆಯು ಮನುಷ್ಯನ ಆಕಾರದ್ದಾಗಿದೆ. ಇಲ್ಲಿ ಪರಮಾತ್ಮ ಶಿವನೇ ಪರಿಚಯವನ್ನಿತ್ತಿದ್ದಾನೆ ಹಾಗೂ ಅನುಭವ ಮಾಡಿಸಿದ್ದಾನೆ ಅದರ ಸ್ಪಷ್ಟೀಕರಣವನ್ನು ಇಲ್ಲಿ ಅರ್ಥಮಾಡಿಕೊಳ್ಳಬಹುದು.

### ಮಹಾದೇವ ಶಂಕರ

1. ಇವನು ಬ್ರಹ್ಮಾ, ವಿಷ್ಣುವಿನಂತೆ ಸೂಕ್ಷ್ಮ ದೇಹಧಾರಿ. ಇವನನ್ನು ಮಹದೇವನೆನ್ನುತ್ತಾರೆ ಆದರೆ ಪರಮಾತ್ಮನೆಂದು ಕರೆಯುವುದಿಲ್ಲ.
2. ಇವನು ಬ್ರಹ್ಮಾ ಹಾಗೂ ವಿಷ್ಣುವಿನಂತೆ ಸೂಕ್ಷ್ಮ ಲೋಕದಲ್ಲಿದ್ದಾನೆ
3. ಇವನು ಬ್ರಹ್ಮಾ ಮತ್ತು ವಿಷ್ಣುವಿನಂತೆ ಪರಮಾತ್ಮ ಶಿವನ ರಚನೆಯಾಗಿದ್ದಾನೆ
4. ಇವನು ಕೇವಲ ಮಹಾವಿನಾಶದ ಕಾರ್ಯವನ್ನು ಮಾಡುತ್ತಾನೆ, ಸ್ಥಾಪನೆ ಹಾಗೂ ಪಾಲನೆಯ ಕರ್ತವ್ಯವು ಇವನದ್ದಲ್ಲ.

### ಪರಮಪಿತ ಪರಮಾತ್ಮ ಶಿವ

1. ಚೈತನ್ಯ, ಜ್ಯೋತಿ ಸ್ವರೂಪಿಯಾಗಿದ್ದಾನೆ. ಇವನಿಗೆ ಭೌತಿಕವಾದ ಅಥವಾ ಸೂಕ್ಷ್ಮವಾದ ಯಾವುದೇ ದೇಹವಿಲ್ಲ. ಇವನು ಪರಮ + ಆತ್ಮನಾಗಿದ್ದಾನೆ.
2. ಪರಮಾತ್ಮನು ಸೂಕ್ಷ್ಮ ಲೋಕಕ್ಕಿಂತಲೂ ಮೇಲೆ 'ಬ್ರಹ್ಮಲೋಕ' ನಿವಾಸಿಯಾಗಿದ್ದಾನೆ.
3. ಪರಮಾತ್ಮನು ಬ್ರಹ್ಮಾ, ವಿಷ್ಣು ಹಾಗೂ ಶಂಕರರ ರಚಯಿತನಾದ್ದರಿಂದ 'ತ್ರಿಮೂರ್ತಿ' ಶಿವನಾಗಿದ್ದಾನೆ.
4. ಬ್ರಹ್ಮಾರವರ ಮುಖಾಂತರ ಸ್ಥಾಪನೆ, ಶಂಕರನ ಮೂಲಕ ಮಹಾವಿನಾಶ ಹಾಗೂ ವಿಷ್ಣುವಿನ ಮೂಲಕ ವಿಶ್ವದ ಪಾಲನೆಯನ್ನು ಮಾಡಿಸಿ ವಿಶ್ವ ಕಲ್ಯಾಣದ ಕಾರ್ಯವನ್ನು ಮಾಡುತ್ತಾನೆ.

### ಶಿವನ ಜನ್ಮೋತ್ಸವವನ್ನು ರಾತ್ರಿಯಲ್ಲೇಕೆ ಆಚರಿಸುತ್ತಾರೆ?

'ರಾತ್ರಿ'ಯು ವಾಸ್ತವಿಕವಾಗಿ ಅಜ್ಞಾನ, ತಮೋಗುಣ ಅಥವಾ ಪಾಪಾಚಾರದ ಸಂಕೇತವಾಗಿದೆ. ಅದುದರಿಂದ ದ್ವಾಪರ-ಕಲಿಯುಗದ ಸಮಯವನ್ನು 'ರಾತ್ರಿ' ಎಂದು ಸೂಚಿಸಿದ್ದಾರೆ. ಕಲಿಯುಗದ ಅಂತ್ಯದಲ್ಲಿ ಸಾಧು, ಸನ್ಯಾಸಿ ಇತ್ಯಾದಿ ಎಲ್ಲಾ ಮನುಷ್ಯಾತ್ಮರು ಪತಿತರೂ ಹಾಗೂ ದುಃಖಿಗಳೂ ಆಗಿದ್ದಾರೆ. ಅಜ್ಞಾನದ ನಿದ್ರೆಯಲ್ಲಿ ಮಲಗಿದ್ದಾರೆ. ಇಂದು ಧರ್ಮಗ್ಲಾನಿಯಾಗಿರುವುದರಿಂದ ಭಾರತವು ವಿಷಯ-ವಿಕಾರಗಳಿಂದಾಗಿ ವೇಶ್ಯಾಲಯವಾಗಿದೆ. ಈಗಲೇ ಪತಿತ ಪಾವನ ಪರಮಾತ್ಮ ಶಿವನು ಈ ಸೃಷ್ಟಿಯಲ್ಲಿ ದಿವ್ಯ ಜನ್ಮವನ್ನು ಸ್ವೀಕರಿಸುತ್ತಾನೆ. ಆದುದರಿಂದ ಉಳಿದ ಎಲ್ಲರ ಜನ್ಮ ದಿನೋತ್ಸವವನ್ನು 'ಜನ್ಮದಿನ'ವೆಂದು ಆಚರಿಸುತ್ತಾರೆ. ಆದರೆ ಪರಮಾತ್ಮ ಶಿವನ 'ಜನ್ಮದಿನ'ವನ್ನು 'ಶಿವರಾತ್ರಿ' ಎಂದು ಕರೆಯುತ್ತಾರೆ. ಆದುದರಿಂದ ಇಲ್ಲಿ ಚಿತ್ರದಲ್ಲಿ ಕಪ್ಪು ಅಜ್ಞಾನ-ಅಂಧಕಾರ- ವಿಷಯ ವಿಕಾರಗಳ ಸಂಕೇತವಾಗಿದೆ.

### ಜ್ಞಾನ ಸೂರ್ಯ ಶಿವನು ಪ್ರಕಟವಾದಾಗ ಸೃಷ್ಟಿಯಿಂದ ಅಜ್ಞಾನಾಂಧಕಾರ ಹಾಗೂ ವಿಕಾರಗಳು ನಾಶವಾಗುತ್ತವೆ.

ಈ ರೀತಿ ಅವತರಿಸಿ ಜ್ಞಾನ ಸೂರ್ಯ ಪರಮಾತ್ಮ ಶಿವನು ಜ್ಞಾನ ಪ್ರಕಾಶವನ್ನೀಯುತ್ತಾನೆ. ಕೆಲವೇ ದಿನಗಳಲ್ಲಿ ಜ್ಞಾನದ ಪ್ರಭಾವವು ವಿಶ್ವದಾದ್ಯಂತ ವ್ಯಾಪಿಸುತ್ತದೆ.. ಕಲಿ(ತಮೋಗುಣ)ಯುಗದ ಜಗತ್ತು ಸತ(ಸತೋಗುಣ)ಯುಗದ ಜಗತ್ತಾಗುತ್ತದೆ.ಆಗ ಅಜ್ಞಾನ-ಅಂಧಕಾರ ಹಾಗೂ ವಿಕಾರಗಳು ನಾಶವಾಗಿರುತ್ತವೆ. ಭಾರತವು ವೇಶ್ಯಾಲಯದಿಂದ ಶಿವಾಲಯವಾಗಿ ಪರಿವರ್ತನೆಯಾಗಿಬಿಡುತ್ತದೆ ಮತ್ತು ನರನಿಂದ ಶ್ರೀ ನಾರಾಯಣ ಹಾಗೂ ನಾರಿಯಿಂದ ಶ್ರೀ ಲಕ್ಷ್ಮಿಯ ಪದವಿಯು ಪ್ರಾಪ್ತಿಯಾಗುತ್ತದೆ. ಆದುದರಿಂದ ಶಿವರಾತ್ರಿಯು ವಿಶ್ವದಲ್ಲಿ ವಜ್ರ ಸಮಾನವಾದ ಹಬ್ಬವೆಂದೇ ಪ್ರಖ್ಯಾತವಾಗಿದೆ.

# ಶಿವ ಮತ್ತು ಶಂಕರರಿಗಿರುವ ವ್ಯತ್ಯಾಸ




सूक्ष्मलोक निवासी, विनाशकारी, आकारी देवता
(रचना)

परमधाम निवासी, कल्याणकारी, निराकार परमात्मा
(रचयिता)



# ಒಂದು ಮಹಾನ್ ದೋಷ

## परमात्मा सर्वज्ञ और सर्वशक्तिवान है परन्तु सर्वव्यापी नहीं

## GOD IS NOT OMNIPRESENT



# ಒಂದು ಮಹಾನ್ ದೋಷ

ಇಂದು ಜನರು ಒಂದು ಕಡೆ ಪರಮಾತ್ಮನನ್ನು 'ಮಾತಾ-ಪಿತ' ಮತ್ತು 'ಪತಿತ ಪಾವನ' ಎಂದು ಕರೆಯುತ್ತಾರೆ. ಮತ್ತೊಂದು ಕಡೆ 'ಪರಮಾತ್ಮನು ಸರ್ವವ್ಯಾಪಿಯಾಗಿದ್ದಾನೆ' ಅಂದರೆ ಕಲ್ಲು, ಮಣ್ಣು, ಹಾವು, ಚೇಳು, ಹಂದಿ, ಮೊಸಳೆ, ಕೊಲೆಗಾರ ಹಾಗೂ ಕಳ್ಳರು ಎಲ್ಲರಲ್ಲೂ ವ್ಯಾಪಿಸಿದ್ದಾನೆಂದು ಹೇಳಿಬಿಡುತ್ತಾರೆ. ಅಯ್ಯೋ, ನಮ್ಮ ಪರಮಪ್ರಿಯ ಪರಮ ಪಾವನ, ಪರಮ ಪಿತನ ಬಗ್ಗೆ ಹೀಗೆ ಹೇಳುವುದು ಎಷ್ಟು ದೊಡ್ಡ ತಪ್ಪು! ಎಂತಹ ಮಹಾ ಪಾಪ ! ಯಾವ ತಂದೆ ನಮ್ಮನ್ನು ಪತಿತರಿಂದ ಪಾವನರನ್ನಾಗಿ ಮಾಡಿ, ಮುಕ್ತಿ ಮತ್ತು ಜೀವನ್ಮುಕ್ತಿಯಂತಹ ಜನ್ಮ ಸಿದ್ಧ ಅಧಿಕಾರವನ್ನು ಕರುಣಿಸುತ್ತಾನೋ, ನಮಗೆ ಸ್ವರ್ಗದ ರಾಜ್ಯ ಭಾಗ್ಯವನ್ನು ದಯಪಾಲಿಸುತ್ತಾನೋ, ಅಂತಹ ಸರ್ವ ಶ್ರೇಷ್ಠ ತಂದೆಯ ಬಗ್ಗೆ ಇಂತಹ ಹೀನವಾದ ಮಾತುಗಳನ್ನು ಬಳಸುವುದು ಅಂದರೆ ನಾವು ಕೃತಘ್ನರಾದಂತಾಯಿತಲ್ಲವೆ?

ಹಾಗೇನಾದರೂ ಪರಮಾತ್ಮನು ಸರ್ವವ್ಯಾಪಿಯಾಗಿದ್ದರೆ ಅವನನ್ನು ಶಿವಲಿಂಗದ ರೂಪದಲ್ಲಿ ಏಕೆ ಪೂಜಿಸುತ್ತಿದ್ದರು? ಅವನು ಅಣುರೇಣುವಿನಲ್ಲಿ ವ್ಯಾಪಕನಾಗಿದ್ದರೆ ಅವನು 'ದಿವ್ಯ ಜನ್ಮ' ವನ್ನು ಹೇಗೆ ಪಡೆದುಕೊಳ್ಳುತ್ತಿದ್ದನು? 'ಅವತರಿಸಿ ಬಾ' ಎಂದು ಮಾನವಾತ್ಮರು ಕೂಗುವುದರ ಅಗತ್ಯವಾದರು ಏನಿತ್ತು ? ಶಿವರಾತ್ರಿಯ ಹಬ್ಬವನ್ನು ಆಚರಿಸಬೇಕಾದ ಅವಶ್ಯಕತೆಯಾದರೂ ಏನಿತ್ತು ? ಹಾಗೇನಾದರೂ ಪರಮಾತ್ಮನು ಸರ್ವವ್ಯಾಪಕನಾಗಿದ್ದರೆ ಗೀತಾ ಜ್ಞಾನವನ್ನು ಹೇಗೆ ನೀಡುತ್ತಿದ್ದನು?. ಗೀತೆಯಲ್ಲಿ 'ನಾನು ಪರಮ ಪುರುಷ (ಪುರುಷೋತ್ತಮ) ನಾಗಿದ್ದೇನೆ. ನಾನು ಸೂರ್ಯ, ಚಂದ್ರ ಮತ್ತು ನಕ್ಷತ್ರಗಳ ಪ್ರಕಾಶಕ್ಕಿಂತಲೂ ಮೇಲಿರುವ ಪರಮಧಾಮ ನಿವಾಸಿಯಾಗಿದ್ದೇನೆ. ಈ ಸೃಷ್ಟಿಯು ತಲೆಕೆಳಗಾದ ಕಲ್ಪವೃಕ್ಷದ ಬೀಜ ಸ್ವರೂಪಿಯಾದ ನಾನು ಮೇಲಿದ್ದೇನೆ' ಎಂಬ ಮಾತು ಹೇಗೆ ತಾನೇ ಅಸತ್ಯವೆನಿಸುತ್ತದೆ.

'ಪರಮಾತ್ಮನು ಸರ್ವವ್ಯಾಪಿ' ಎಂಬ ಮಾತಿನಿಂದ ಭಕ್ತಿ, ಜ್ಞಾನ, ಯೋಗ ಇತ್ಯಾದಿಗಳೆಲ್ಲವೂ ಖಂಡನೆಗೊಳಗಾಗುತ್ತವೆ. ಏಕೆಂದರೆ ಜ್ಯೋತಿ ಸ್ವರೂಪಿಯಾದ ಭಗವಂತ ಶಿವನಿಗೆ ನಾಮ-ರೂಪವೇ ಇಲ್ಲವೆಂದರೆ ಅವನ ಜೊತೆ ಸಂಬಂಧವನ್ನು ಬೆಳಸುವುದಾದರು ಹೇಗೆ? ಅವನ ಜೊತೆ ಪ್ರೀತಿ ಮತ್ತು ಭಕ್ತಿಯನ್ನಿಡುವುದಾದರು ಹೇಗೆ? ಅವನ ಹೆಸರು ಮತ್ತು ಕರ್ತವ್ಯಗಳ ಬಗ್ಗೆ ಚರ್ಚಿಸಬೇಕಾದ ಅಗತ್ಯವಾದರೂ ಏನಿತ್ತು? ಜ್ಞಾನ ಅಂದರೆ ಭಗವಂತನ ನಾಮ, ರೂಪ, ದೇಶ, ಗುಣ, ಕರ್ಮ, ಸ್ವಭಾವ, ಸಂಬಂಧ. ಅವನಿಂದ ಸಿಗುವ ಪ್ರಾಪ್ತಿ ಇತ್ಯಾದಿಗಳ ಪರಿಚಯವಿದೆ. ಆದ್ದರಿಂದ ಪರಮಾತ್ಮನನ್ನು ಸರ್ವವ್ಯಾಪಿ ಎಂದು ಸ್ವೀಕರಿಸಿದ್ದಾದರೆ ಇಂದು ಮಾನವನು 'ಮನ್‌ಮನಾಭವ' ಹಾಗೂ 'ನನಗೆ ಶರಣಾಗು' ಎಂಬ ಈಶ್ವರನ ಆಜ್ಞೆಯನ್ನು ಪಾಲಿಸುವುದಕ್ಕಾಗುವುದಿಲ್ಲ, ಅಂದರೆ ಬುದ್ಧಿಯಲ್ಲಿ ಒಬ್ಬ ಜ್ಯೋತಿ ಸ್ವರೂಪಿ ಪರಮಪಿತ ಪರಮಾತ್ಮ ಶಿವನ ನೆನಪು ಮಾಡಲು ಆಗುವುದಿಲ್ಲ. ಅವನೊಡನೆ ಸ್ನೇಹದ ಸಂಬಂಧವನ್ನು ಬೆಳೆಸಲು ಆಗುವುದಿಲ್ಲ. ಏಕೆಂದರೆ ಮಾನವನ ಮನಸ್ಸು ಅಲೆಯುತ್ತಿರುತ್ತದೆ. ಪರಮಾತ್ಮನು ಚೈತನ್ಯನಾಗಿದ್ದಾನೆ. ಅವನು ನಮ್ಮ 'ಪರಮಪಿತ'ನಾಗಿದ್ದಾನೆ. ತಂದೆ ಎಂದಾದರು ಸರ್ವವ್ಯಾಪಿಯಾಗುವನೇನು? ಇಂದು ಸರ್ವವ್ಯಾಪಿ ಎಂದು ಒಪ್ಪಿರುವುದರಿಂದ ಎಲ್ಲಾ ನರ-ನಾರಿಯರು ಯೋಗ-ಭ್ರಷ್ಟರು ಹಾಗೂ ಪತಿತರೂ ಆಗಿದ್ದಾರೆ ಹಾಗೂ ಪರಮಪಿತನ ಪವಿತ್ರತೆ, ಸುಖ, ಶಾಂತಿ ಎಂಬ ಆಸ್ತಿಯಿಂದ ವಂಚಿತರಾಗಿ ದುಃಖ ಹಾಗೂ ಅಶಾಂತರಾಗಿದ್ದಾರೆ.

ಆದುದರಿಂದ ಪರಮಾತ್ಮನು 'ಘಟ ಘಟ' ವಾಸಿಯಾಗಿದ್ದಾನೆ ಎಂಬ ಭಕ್ತರ ಈ ಮಾತಿನ ಶಬ್ದಾರ್ಥವನ್ನು ಸ್ವೀಕರಿಸುವುದು ಸರಿಯೆನಿಸುವುದಿಲ್ಲ. ವಾಸ್ತವಿಕವಾಗಿ ಘಟ ಅಥವಾ ಹೃದಯವನ್ನು ಪ್ರೀತಿ ಹಾಗೂ ನೆನಪಿನ ಸ್ಥಾನವೆಂದು ಒಪ್ಪಿದ್ದಾರೆ. ದ್ವಾಪರ ಯುಗದ ಆರಂಭದ ಭಕ್ತರಲ್ಲಿ ಈಶ್ವರನ ಭಕ್ತಿ ಅಥವಾ ಪ್ರಭು ಪ್ರೇಮ ಹಾಗೂ ಶ್ರದ್ಧೆಯು ಅಪಾರವಾಗಿತ್ತು. ಎಲ್ಲೋ ಒಬ್ಬಿಬ್ಬರು ಪರಮಾತ್ಮನನ್ನು ಒಪ್ಪದಿರುವವರು ಇದ್ದಿರಬಹುದು. ಆದರೆ ಆಗಿನ ಭಕ್ತರು ಭಕ್ತಿಯಲ್ಲಿ ಮಗ್ನರಾಗಿ ಈಶ್ವರನು ಘಟ ಘಟ ವಾಸಿಯಾಗಿದ್ದಾನೆ, ಅಂದರೆ ಅವನನ್ನು ಎಲ್ಲರೂ ಪ್ರೀತಿ(ಹೃದಯ)ಯಿಂದ ಸ್ಮರಿಸುತ್ತಿದ್ದರು. ಅಂದರೆ ಎಲ್ಲರ ಮನದಂಗಳದಲ್ಲೂ ಪರಮಾತ್ಮನ ರೂಪವು ತುಂಬಿರುತ್ತಿತ್ತು.ಹಾಗೆಯೇ ಹಾಡುತ್ತಾ ಭಕ್ತಿಯಲ್ಲಿ ಮಗ್ನರಾಗಿ ಬಿಡುತ್ತಿದ್ದರು. ಈ ಮಾತಿನಿಂದ ಎಲ್ಲರಲ್ಲೂ ಈಶ್ವರನು ವಾಸಿಸುತ್ತಿದ್ದಾನೆಂದು ತಿಳಿಯುವುದು ತಪ್ಪಾಗಿ ಬಿಡುತ್ತದೆ.

# ಸೃಷ್ಟಿ ಎಂಬ ತಲೆಕೆಳಗಾದ ಹಾಗೂ ಅದ್ಭುತವಾದ ವೃಕ್ಷ ಮತ್ತು ಬೀಜ ಸ್ವರೂಪಿ ಪರಮಾತ್ಮ

ಭಗವಂತನು ಈ ಸೃಷ್ಟಿ ಎಂಬ ವೃಕ್ಷವನ್ನು ತಲೆಕೆಳಗಾದ ವೃಕ್ಷದ ಜೊತೆ ಹೋಲಿಕೆ ನೀಡಿದ್ದಾನೆ, ಏಕೆಂದರೆ ಎಲ್ಲಾ ವೃಕ್ಷಗಳ ಬೀಜವನ್ನು ಭೂಮಿಯ ಒಳಗೆ ನೆಡುತ್ತಾರೆ ಮತ್ತು ಮರವು ಮೇಲೆ ಬೆಳೆಯುತ್ತದೆ. ಆದರೆ ಮನುಷ್ಯ ಸೃಷ್ಟಿ ಎಂಬ ವೃಕ್ಷದ ಬೀಜ ಸ್ವರೂಪಿಯಾದ ಪರಮಾತ್ಮನು ಅವಿನಾಶಿ ಹಾಗೂ ಚೈತನ್ಯನಾಗಿದ್ದಾನೆ. ಅವನು ಮೇಲೆ ಪರಮಧಾಮ(ಬ್ರಹ್ಮಲೋಕ) ನಿವಾಸಿಯಾಗಿದ್ದಾನೆ.

ಚಿತ್ರದಲ್ಲಿ ತುಂಬಾ ಕೆಳಭಾಗ ಕಲಿಯುಗದ ಅಂತ್ಯ ಮತ್ತು ಸತಯುಗದ ಆರಂಭದ ಈ ಪುಟ್ಟ ಯುಗವೇ 'ಪುರುಷೋತ್ತಮ ಸಂಗಮ ಯುಗ' (ಧಾರ್ಮಿಕ ಯುಗ ಅಥವಾ ಗೀತಾ ಯುಗ)ವೆಂದು ಕರೆಯುತ್ತಾರೆ. ಇಲ್ಲಿ ಶ್ವೇತ ವಸ್ತ್ರಧಾರಿ ಪ್ರಜಾಪಿತ ಬ್ರಹ್ಮಾ, ಜಗದಂಬಾ ಸರಸ್ವತಿ ಹಾಗೂ ಕೆಲವು ಬ್ರಹ್ಮಾ ಕುಮಾರ ಮತ್ತು ಕುಮಾರಿಯರು ಸಹಜ ರಾಜಯೋಗದ ಅಭ್ಯಾಸವನ್ನು ಮಾಡುತ್ತಿದ್ದಾರೆ. ಇಲ್ಲಿ ಒಂದು ರಹಸ್ಯವನ್ನು ಪರಮಾತ್ಮನು ಬಿಡಿಸಿ ಹೇಳುತ್ತಿದ್ದಾನೆ, ಏನೆಂದರೆ ಕಲಿಯುಗದ ಅಂತ್ಯದಲ್ಲಿ ಅಜ್ಞಾನವೆಂಬ ರಾತ್ರಿಯಲ್ಲಿ ಸೃಷ್ಟಿಯ ಬೀಜರೂಪಿ, ಜ್ಞಾನ ಸಾಗರ, ಪರಮಪಿತ ಪರಮಾತ್ಮ ಶಿವನು ಹೊಸ ಪವಿತ್ರ ಸೃಷ್ಟಿಯ ರಚನೆ ಮಾಡಲು ಪ್ರಜಾಪಿತ ಬ್ರಹ್ಮಾರವರ ದೇಹದಲ್ಲಿ ಅವತರಿಸಿ (ಪ್ರವೇಶಿಸಿ) ಅವರ ಮುಖ ಕಮಲದ ಮೂಲಕ ಜ್ಞಾನ ಹಾಗೂ ರಾಜಯೋಗದ ಶಿಕ್ಷಣವನ್ನು ಅಳವಡಿಸಿಕೊಳ್ಳುವ ನರ-ನಾರಿಯರಿಗೆ 'ಪವಿತ್ರ ಬ್ರಾಹ್ಮಣ'ರು ಎಂದು ಕರೆದನು. ಇವರೇ ಶಿವಶಕ್ತಿಯರು.

ಸತ್ಯಯುಗದಲ್ಲಿ ಅಚಲ, ಅಖಂಡ, ನಿರ್ವಿಘ್ನ ಮತ್ತು ಅತ್ಯಂತ ಸುಖೀ ರಾಜ್ಯವಿದ್ದು, ಅಲ್ಲಿ ಹಾಲು, ತುಪ್ಪದ ನದಿಗಳು ಹರಿಯುತ್ತಿದ್ದವು. ಹುಲಿ ಹಾಗೂ ಹಸುವು ಒಂದೇ ದಡದಲ್ಲಿ ನೀರನ್ನು ಕುಡಿಯುತ್ತಿದ್ದವೆಂದು ಮಹಿಮೆ ಮಾಡಿದ್ದಾರೆ. ಆಗ ಭಾರತವು ಡಬ್ಬಲ್ ಕಿರೀಟಧಾರಿಯಾಗಿತ್ತು. ಎಲ್ಲರೂ ಸದಾ ಆರೋಗ್ಯವಂತರೂ (Ever healthy), ಸದಾ ಶ್ರೀಮಂತರೂ (Ever wealthy) ಮತ್ತು ಸದಾ ಸುಖಿಗಳೂ (Ever happy) ಆಗಿದ್ದರು. ಅಲ್ಲಿ ಕಾಮ-ಕ್ರೋಧಾದಿ ವಿಕಾರಗಳ ಯುದ್ಧ ಅಥವಾ ಹಿಂಸೆ, ಅಶಾಂತಿಯ ಹೆಸರೇ ಇರಲಿಲ್ಲ. ಆಗಿನ ಭಾರತವನ್ನು ಸ್ವರ್ಗ, ವೈಕುಂಠ, ಬಹಿಶ್ತ್, ಸುಖಧಾಮ ಅಥವಾ ಹೆವೆನ್ (Heven) ಎಂದು ಕರೆದರು. ಅಲ್ಲಿದ್ದ ಎಲ್ಲರೂ ಜೀವನ್ಮುಕ್ತರು ಮತ್ತು ಪೂಜ್ಯರು ಆಗಿದ್ದರು. ಅವರುಗಳ ಸರಾಸರಿ ಆಯಸ್ಸು 150 ವರ್ಷ. ಅವರನ್ನು ದೇವತಾ ವರ್ಣದವರೆಂದು ಕರೆದರು. ಪೂಜ್ಯ ವಿಶ್ವ ಮಹಾರಾಣಿ ಶ್ರೀ ಲಕ್ಷ್ಮಿ ಹಾಗೂ ಪೂಜ್ಯ ವಿಶ್ವ ಮಹಾರಾಜ ಶ್ರೀ ನಾರಾಯಣರ ಸೂರ್ಯವಂಶದಲ್ಲಿ ಒಟ್ಟು 8 ಸೂರ್ಯವಂಶಿ ಮಹಾರಾಣಿ ಮತ್ತು ಮಹಾರಾಜರು ಇದ್ದರು. 1250 ವರ್ಷಗಳವರೆಗೆ ಚಕ್ರವರ್ತಿಗಳಾಗಿ ರಾಜ್ಯಭಾರ ನಡೆಸಿದ್ದರು.

ತ್ರೇತಾಯುಗದಲ್ಲಿ ಶ್ರೀ ಸೀತೆ ಮತ್ತು ಶ್ರೀ ರಾಮರ ಚಂದ್ರವಂಶದವರು 14 ಕಲೆಯವರಾಗಿದ್ದು, ಸಂಪೂರ್ಣ ನಿರ್ವಿಕಾರಿಗಳಾಗಿದ್ದರು. ಭಾರತದಲ್ಲಿ ಇಂದಿಗೂ ಇವರ ರಾಜ್ಯದ ಮಹಿಮೆ ಮಾಡುತ್ತಾರೆ. ಸತ್ಯ ಯುಗ ಮತ್ತು ತ್ರೇತಾಯುಗದಲ್ಲಿ 'ಆದಿಸನಾತನ ದೇವಿ ದೇವತಾ ಧರ್ಮ'ವು ಈ ಮನುಷ್ಯ ಸೃಷ್ಟಿ ಎಂಬ ವೃಕ್ಷದ ಕಾಂಡವಾಗಿದೆ. ನಂತರ ಅನೇಕ ಧರ್ಮಗಳೆಂಬ ಕೊಂಬೆಗಳು ಹುಟ್ಟಿಕೊಂಡವು. ದ್ವಾಪರದಲ್ಲಿ ದೇಹಾಭಿಮಾನ ಹಾಗೂ ಕಾಮ, ಕ್ರೋಧಾದಿ ವಿಕಾರಗಳು ಗೋಚರಿಸಿದವು. ದೈವಿ ಸ್ವಭಾವವು ಆಸುರಿ ಸ್ವಾಭಾವವಾಗಿ ಪರಿವರ್ತನೆಯಾಯಿತು. ಇದರಿಂದ ಸೃಷ್ಟಿಯಲ್ಲಿ ದುಃಖ, ಅಶಾಂತಿಯ ರಾಜ್ಯವು ಆರಂಭವಾಯಿತು. ಅದರಿಂದ ಮುಕ್ತರಾಗಲು ಮಾನವರು ಭಕ್ತಿಯನ್ನು ಆರಂಭಿಸಿದರು. ಋಷಿಗಳು ಶಾಸ್ತ್ರಗಳನ್ನು ರಚಿಸಿದರು. ಯಜ್ಞ ಯಾಗಾದಿಗಳು ಆರಂಭಗೊಂಡವು.

ಕಲಿಯುಗದವರು ಪರಮಾತ್ಮನಿಗೆ ಹಾಗೂ ದೇವತೆಗಳಿಗೆ ಬದಲಾಗಿ ಮರ, ಗಿಡ ಇತ್ಯಾದಿ ಜಡ ವಸ್ತುಗಳನ್ನು ಪೂಜಿಸಲಾರಂಭಿಸಿದರು. ಸಂಪೂರ್ಣ ದೇಹಾಭಿಮಾನಿಗಳು, ವಿಕಾರಿಗಳು, ಪತಿತರೂ ಆದರು. ಅವರ ಆಹಾರ, ವಿಹಾರ, ವ್ಯವಹಾರ, ಮನ, ವಚನ ಮತ್ತು ಕರ್ಮ ಎಲ್ಲವೂ ತಮೋಗುಣಿಯಾಗಿ ವಿಕಾರಗಳಿಂದ ಕೂಡಿದ್ದವು.

ಕಲಿಯುಗದ ಅಂತ್ಯದಲ್ಲಿ ಎಲ್ಲರೂ ತಮೋಪ್ರದಾನ ಹಾಗೂ ಆಸುರಿ ಲಕ್ಷಣದವರಾಗಿಬಿಟ್ಟರು. ಆದುದರಿಂದ ಸತ್ಯ-ತ್ರೇತ ಯುಗಗಳು ಸತೋಪ್ರಧಾನ(ದೈವಿ ಸೃಷ್ಟಿ)ವಾದ ಸ್ವರ್ಗವಾಗಿತ್ತು ಮತ್ತು ದ್ವಾಪರ-ಕಲಿಯುಗಗಳು ಇಂದು ತಮೋಪ್ರಧಾನ ನರಕವಾಗಿದೆ.

# ಸೃಷ್ಟಿ ಎಂಬ ತಲೆಕೆಳಗಾದ ಹಾಗೂ ಅದ್ಭುತವಾದ ವೃಕ್ಷ ಮತ್ತು ಬೀಜ ಸ್ವರೂಪಿ ಪರಮಾತ್ಮ



# ಪ್ರಭು ಮಿಲನದ ಗುಪ್ತ ಯುಗ - ಪುರುಷೋತ್ತಮ ಸಂಗಮ ಯುಗ



# ಪ್ರಭು ಮಿಲನದ ಗುಪ್ತ ಯುಗ - ಪುರುಷೋತ್ತಮ ಸಂಗಮ ಯುಗ

ಭಾರತದಲ್ಲಿ ಸನಾತನ ಧರ್ಮದವರು ಹಬ್ಬ ಹಾಗೂ ಹಿರಿಯ ದಿನಗಳನ್ನು ತುಂಬಾ ಶ್ರದ್ಧೆಯಿಂದ ಆಚರಿಸುತ್ತಾರೆ. ಹಾಗೆಯೇ ಪುರುಷೋತ್ತಮ ಮಾಸವನ್ನು ಆಚರಿಸುತ್ತಾರೆ. ಈ ಮಾಸದಲ್ಲಿ ವಿಶೇಷವಾಗಿ ತೀರ್ಥಯಾತ್ರೆ ಹಾಗೂ ದಾನ-ಧರ್ಮಗಳನ್ನು ತುಂಬಾ ಮಾಡುತ್ತಾರೆ. ಜೊತೆಗೆ ಆಧ್ಯಾತ್ಮಿಕ ಜ್ಞಾನದ ಚರ್ಚೆಗೂ ಸಾಕಷ್ಟು ಸಮಯವನ್ನು ನೀಡುತ್ತಾರೆ. ಅವರು ಪ್ರಾಥಃಕಾಲ ಅಮೃತ ವೇಳೆಯಲ್ಲೇ ಗಂಗಾ ಸ್ನಾನ ಮಾಡುವುದರಿಂದ ತುಂಬಾ ಪುಣ್ಯವು ದೊರೆಯುತ್ತದೆ ಎಂದು ನಂಬಿಕೊಂಡು ಬಂದಿದ್ದಾರೆ.

ವಾಸ್ತವವಾಗಿ 'ಪುರುಷೋತ್ತಮ' ಎಂಬ ಪದವು ಪರಮಾತ್ಮನ ವಾಚಕವಾಗಿದೆ. ಆತ್ಮವನ್ನು ಪುರುಷನೆಂದು ಕರೆಯುತ್ತಾರೆ. ಹಾಗೆಯೇ ಪರಮಾತ್ಮನನ್ನು ಪರಮ ಪುರುಷ(ಪುರುಷೋತ್ತಮ)ನೆಂದು ಕರೆಯುತ್ತಾರೆ. ಏಕೆಂದರೆ ಅವನು ಎಲ್ಲಾ ಪುರುಷ (ಆತ್ಮ)ರುಗಳಿಗಿಂತಲೂ ಜ್ಞಾನ, ಶಾಂತಿ, ಪವಿತ್ರತೆ ಮತ್ತು ಶಕ್ತಿಗಳಿಂದ ಶ್ರೇಷ್ಠನಾಗಿದ್ದಾನೆ. ಜೊತೆಗೆ ಪುರುಷೋತ್ತಮ ಮಾಸವು ಕಲಿಯುಗದ ಅಂತ್ಯ ಹಾಗೂ ಸತ್ಯ ಯುಗದ ಆರಂಭದ ಸಂಗಮ ಯುಗದ ನೆನಪನ್ನು ತರಿಸುತ್ತದೆ. ಈ ಯುಗದಲ್ಲೇ ಪುರುಷೋತ್ತಮ ಪರಮಾತ್ಮನು ಅವತರಿಸುತ್ತಾನೆ. ಸತ್ಯ ಯುಗದಿಂದ ಕಲಿಯುಗದ ಅಂತ್ಯದವರೆಗೆ ಮನಷ್ಯಾತ್ಮರು ಪುನರ್ಜನ್ಮವನ್ನು ಪಡೆಯುತ್ತಾ ಬರುತ್ತಾರೆ. ಆದರೆ ಕಲಿಯುಗದ ಅಂತ್ಯದಲ್ಲಿ ಸತಯುಗ ಮತ್ತು ಸತ ಧರ್ಮ(ಉತ್ತಮ ಮರ್ಯಾಧೆ)ವನ್ನು ಪುನಃ ಸ್ಥಾಪಿಸುವ ಸಲುವಾಗಿ ಪುರುಷೋತ್ತಮನೇ ಬಂದು ಈ ಸಂಗಮದಲ್ಲಿ ಮನುಷ್ಯಾತ್ಮರಿಗೆ ಸತ್ಯ ಗೀತಾ ಜ್ಞಾನ ಹಾಗೂ ಸಹಜ ರಾಜಯೋಗದ ಶಿಕ್ಷಣವನ್ನು ಕಲಿಸಿ ಪಾವನರನ್ನಾಗಿ ಮಾಡಿ ಪರಮಧಾಮಕ್ಕೆ ಕರೆದ್ಯೊಯುತ್ತಾನೆ. ಇನ್ನಿತರ ಮನುಷಾತ್ಮರನ್ನು ಸೃಷ್ಟಿಯ ಮಹಾವಿನಾಶದ ಮೂಲಕ ಅಶರೀರಿಗಳನ್ನಾಗಿ ಮಾಡಿ ಮುಕ್ತಿಧಾಮಕ್ಕೆ ಮಹಾಕಾಲೇಶ್ವರನಾದ ಶಿವನು ಕರೆದೊಯುತ್ತಾನೆ. ಹೀಗೆ ಎಲ್ಲಾ ಮನುಷ್ಯಾತ್ಮರುಗಳು ಶಿವಪುರಿ ಅಥವಾ ವಿಷ್ಣುಪುರಿಯ ಕಡೆಗೆ ಆಧ್ಯಾತ್ಮಿಕ ಯಾತ್ರೆ ಮಾಡುತ್ತಾರೆ ಮತ್ತು ಜ್ಞಾನ ಚರ್ಚೆ ಅಥವಾ ಜ್ಞಾನ ಗಂಗೆಯಲ್ಲಿ ಸ್ನಾನ ಮಾಡಿ ಪಾವನರಾಗುತ್ತಾರೆ.

ಆದರೆ ಜನರು ಈ ರಹಸ್ಯವನ್ನು ಅರ್ಥಮಾಡಿಕೊಳ್ಳದೆ ಇರುವುದರಿಂದ ಗಂಗಾ,ಕಾವೇರಿ ನದಿಯಲ್ಲಿ ಹೋಗಿ ಸ್ನಾನ ಮಾಡುತ್ತಾರೆ. ಶಿವ ಮತ್ತು ವಿಷ್ಣು ದೇವಾಲಯಗಳಿಗೆ ಯಾತ್ರೆ ಹೋಗುತ್ತಾರೆ. ವಾಸ್ತವಿಕವಾಗಿ ಪುರುಷೋತ್ತಮ ಮಾಸದಲ್ಲಿ 5 ವಿಕಾರಗಳ ದಾನದ ಮಹತ್ವಿಕೆಯೂ ಇದೆ. ಪರಮಾತ್ಮನು ಅವತರಿಸಿ ಆತ್ಮಗಳಿಗೆ ವಿಕಾರಗಳನ್ನು ದಾನ ಮಾಡಲು ಶಿಕ್ಷಣವನ್ನೀಯುತ್ತಾನೆ. ಅಂತಹವರು ಉತ್ತಮ ಮರ್ಯಾದೆಗಳನ್ನು ಅಳವಡಿಸಿಕೊಂಡು, ಸತಯುಗದ ಆದಿಯಲ್ಲಿ ಜನ್ಮವನ್ನು ಪಡೆಯುತ್ತಾರೆ. ಹಾಗೇನಾದರೂ ಈ ಎಲ್ಲಾ ರಹಸ್ಯಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡಿದ್ದಾದರೆ, ಮನುಷಾತ್ಮರುಗಳು ವಿಕಾರಗಳನ್ನು ದಾನ ಮಾಡಿ, ಜ್ಞಾನ ಗಂಗೆಯಲ್ಲಿ ಪ್ರತಿದಿನವೂ ಸ್ನಾನ ಮಾಡಿ, ಯೋಗದ ಮುಖಾಂತರ ದೇಹದಿಂದ ಭಿನ್ನರಾಗುವಂತಹ ಅಭ್ಯಾಸ ಮಾಡಿ, ಸತ್ಯವಾದ ಆಧ್ಯಾತ್ಮಿಕ ಯಾತ್ರೆಯನ್ನು ಮಾಡಿದ್ದಾದರೆ ವಿಶ್ವದಲ್ಲಿ ಮತ್ತೆ ಸುಖ-ಶಾಂತಿಯಿಂದ ಸಂಪನ್ನವಾದ ರಾಮ ರಾಜ್ಯವು ಸ್ಥಾಪನೆಯಾಗಿ ಆ ನರ-ನಾರಿಯರು ಸ್ವರ್ಗದಲ್ಲಿ ದೇವತೆಗಳಾಗವರು. ಚಿತ್ರದಲ್ಲಿ ಈ ರಹಸ್ಯವನ್ನು ತೋರಿಸಲಾಗಿದೆ.

ಈ ಯುಗದಲ್ಲಿ ಶ್ವೇತ ವಸ್ತ್ರಧಾರಿಗಳಾದ ಪ್ರಜಾಪಿತ ಬ್ರಹ್ಮಾ, ಜಗದಂಬಾ ಸರಸ್ವತಿ ಹಾಗೂ ಕೆಲವು ಮುಖವಂಶಾವಳಿ, ಬ್ರಹ್ಮಾ ಕುಮಾರ-ಕುಮಾರಿಯರು ಪರಮಾತ್ಮ ಶಿವನ ನೆನಪಿನಿಂದ ಮನಸ್ಸಿನ ಮೈಲಿಗೆಯನ್ನು ತೊಳೆದುಕೊಂಡು, ಹಿಂದಿನ ಪಾಪಕರ್ಮಗಳನ್ನು ಸುಟ್ಟು ಹಾಕಿ, ಸಂಸ್ಕಾರವನ್ನು ಸತೋಪ್ರಧಾನ ಮಾಡಿಕೊಳ್ಳುವರು. ಚಿತ್ರದ ಕೆಳಭಾಗದಲ್ಲಿ ನರಕದ ವ್ಯಕ್ತಿಗಳು ಜ್ಞಾನ ಹಾಗೂ ಯೋಗಾಗ್ನಿಯನ್ನು ಪ್ರಜ್ವಲಿಸಿ, ಕಾಮ-ಕ್ರೋಧಾದಿ ವಿಕಾರಗಳನ್ನು ಈ ಸೂಕ್ಷ್ಮವಾದ ಅಗ್ನಿಯಲ್ಲಿ ಸ್ವಾಹ ಮಾಡುವುದನ್ನು ತೋರಿಸಲಾಗಿದೆ. ಇದಕ್ಕೆ ಪ್ರತಿಫಲವಾಗಿ ಅವರು ನರನಿಂದ ಶ್ರೀ ನಾರಾಯಣ ಮತ್ತು ನಾರಿಯಿಂದ ಶ್ರೀ ಲಕ್ಷ್ಮಿಯಾಗಿ ಅಂದರೆ ಮಾನವರಿಂದ ದೇವ ಮಾನವರಾಗಿ ಸ್ವರ್ಗದಲ್ಲಿ ಸಂಪೂರ್ಣವಾದ ಸುಖ-ಶಾಂತಿ-ಸಂಪತ್ತಿನಿಂದ ಕೂಡಿದ ರಾಜ್ಯಕ್ಕೆ ಅಧಿಕಾರಿಗಳಾಗುವರು..

ನೆನಪಿರಲಿಃ- ನಾವೀಗ ಸಂಗಮ ಯುಗದಲ್ಲಿದ್ದೇವೆ. ಈ ಕಲಿಯುಗವು ನರಕವಾಗಿದೆ. ಇನ್ನು ಕೆಲವೇ ದಿನಗಳಲ್ಲಿ ಸತಯುಗವು ಬರಲಿದೆ. ಆದುದರಿಂದ ನಾವೀಗ ಪವಿತ್ರರೂ ಹಾಗೂ ಯೋಗಿಗಳೂ ಆಗಬೇಕಾಗಿದೆ.

# ಮನುಷ್ಯಾತ್ಮರ 84 ಜನ್ಮಗಳ ಅದ್ಭುತವಾದ (ಉನ್ನತಿ-ಪತನ)ಕಥೆ

ಮನುಷ್ಯಾತ್ಮನು ಇಡೀ ಕಲ್ಪದಲ್ಲಿ (5000 ವರ್ಷ) ಹೆಚ್ಚೆಂದರೆ 84 ಜನ್ಮವನ್ನು ಪಡೆದುಕೊಳ್ಳುತ್ತಾನೆ. ಅವರು 84 ಲಕ್ಷ ಜೀವರಾಶಿಗಳಲ್ಲಿ ಬರುವುದಿಲ್ಲ. ಮನುಷ್ಯಾತ್ಮನ 84 ಜನ್ಮದ ಚಕ್ರವನ್ನು ಇಲ್ಲಿ 84 ಮೆಟ್ಟಿಲುಗಳ ರೂಪದಲ್ಲಿ ಚಿತ್ರಿಸಲಾಗಿದೆ. ಏಕೆಂದರೆ ಪ್ರಜಾಪಿತ ಬ್ರಹ್ಮಾ ಹಾಗೂ ಜಗದಂಬಾ ಸರಸ್ವತಿ-ಇವರು ಮನುಕುಲದ ಆದಿಪಿತ ಹಾಗೂ ಆದಿಮಾತಾ ಆಗಿದ್ದಾರೆ. ಅದುದರಿಂದ ಅವರ 84 ಜನ್ಮಗಳನ್ನು ಸಂಕ್ಷಿಪ್ತವಾಗಿ ಉಲ್ಲೇಖಿಸಿರುವುದರಿಂದ ಅನ್ಯ ಆತ್ಮಗಳೂ ಕೂಡ ಅದರಲ್ಲೇ ಬಂದುಬಿಡುತ್ತಾರೆ. ಬ್ರಹ್ಮಾ ಮತ್ತು ಸರಸ್ವತಿ ಇವರೇ ಸಂಗಮ ಯುಗದಲ್ಲಿ ಪರಮಪಿತ ಶಿವನು ಕಲಿಸುತ್ತಿರುವ ಜ್ಞಾನ ಮತ್ತು ಯೋಗದಿಂದ ಸತಯುಗದ ಆರಂಭದಲ್ಲಿ ಶ್ರೀ ನಾರಾಯಣ ಮತ್ತು ಶ್ರೀ ಲಕ್ಷ್ಮಿ ಆಗಿದ್ದರು.

ಸತಯುಗ ಮತ್ತು ತ್ರೇತಾಯುಗದಲ್ಲಿ ಪೂಜ್ಯ ದೇವತೆಗಳುಃ- ಸತಯುಗದ 1250 ವರ್ಷಗಳಲ್ಲಿ ದೇವತೆಗಳು 100 ರಷ್ಟು ಸುಖ,ಶಾಂತಿ,ಸಂಪನ್ನತೆಯಿಂದ ಕೂಡಿದ 8 ಜನ್ಮಗಳನ್ನು ಪಡೆದುಕೊಂಡರು. ಆದುದರಿಂದಲೇ ಭಾರತ ದೇಶದಲ್ಲಿ 8ರ ಸಂಖ್ಯೆಯನ್ನು ಶುಭವೆಂದೇ ಹೇಳುತ್ತಾರೆ. 8 ಮಣಿಯ ಮಾಲೆಯನ್ನು ಸ್ಮರಿಸುತ್ತಾರೆ. ಅಷ್ಟ ದೇವತೆಗಳ ಪೂಜೆ ಮಾಡುತ್ತಾರೆ. ತ್ರೇತಾಯುಗದ 1250 ವರ್ಷಗಳಲ್ಲಿ 14 ಕಲೆಯವರಾದ ಶ್ರೀ ಸೀತೆ, ಶ್ರೀ ರಾಮಚಂದ್ರರ ವಂಶದಲ್ಲಿ ಪೂಜ್ಯ ರಾಜ-ರಾಣಿ ಅಥವಾ ಉನ್ನತ ಪ್ರಜೆಗಳ ರೂಪದಲ್ಲಿ 12 ಜನ್ಮಗಳನ್ನು ಪಡೆಯುತ್ತಾರೆ. ಹೀಗೆ ಸತ್ಯ ಮತ್ತು ತ್ರೇತಾಯುಗಗಳ 2500 ವರ್ಷಗಳಲ್ಲಿ ಸಂಪೂರ್ಣ ಪವಿತ್ರತೆ, ಸುಖ,ಶಾಂತಿ ಮತ್ತು ಆರೋಗ್ಯದಿಂದ ಸಂಪನ್ನರಾಗಿದ್ದು 21 ಜನ್ಮ(ಸಂಗಮದ ಒಂದು ಜನ್ಮವೂ ಸೇರಿ)ಗಳ ಕಾಲ ದೇವತಾ ಪದವಿಯನ್ನು ಪಡೆಯುತ್ತಾರೆ.

ದ್ವಾಪರ ಮತ್ತು ಕಲಿಯುಗದಲ್ಲಿ ಒಟ್ಟು 63 ಜನ್ಮ - ಮತ್ತೆ ಸುಖದ ಭಾಗ್ಯವು ಕಳೆದು ಹೋದ ನಂತರ ದ್ವಾಪರದ ಆದಿಯಲ್ಲಿ ಪೂಜಾರಿ ಸ್ಥಿತಿಯು ಬರುತ್ತದೆ. ಮೊದಲು ನಿರಾಕಾರಿ ಪರಮಾತ್ಮ ಶಿವನ ವಜ್ರದ ಪ್ರತಿಮೆಯನ್ನು ಮಾಡಿ ಶ್ರದ್ಧಾಭಕ್ತಿಯಿಂದ ಪೂಜಾರಿ ರಾಜ ವಿಕ್ರಮಾಧಿತ್ಯನು ಪೂಜಿಸಲಾರಂಭಿಸಿದನು. ನಂತರ ಅಜ್ಞಾನ ಹಾಗೂ ಆತ್ಮದ ವಿಸ್ಮೃತಿಯಿಂದಾಗಿ ಶ್ರೀ ಲಕ್ಷ್ಮಿ ಮತ್ತು ಶ್ರೀ ನಾರಾಯಣನ ಪೂಜೆಯು ಆರಂಭವಾಯಿತು. ಯಾರು ಮೊದಲು ಪೂಜ್ಯರಾಗಿದ್ದರೋ ಅವರೇ ಕಾಲ ಕಳೆದಂತೆ ಪೂಜಾರಿಗಳಾದರು ಎಂದು ಹಾಡುತ್ತಾರೆ. ದ್ವಾಪರ ಯುಗದಲ್ಲಿ 1250 ವರ್ಷಗಳಲ್ಲಿ ಮನುಷ್ಯಾತ್ಮರು ಪೂಜಾರಿ ಸ್ಥಿತಿಯಲ್ಲಿ ವಿವಿಧ ನಾಮ-ರೂಪಗಳಿಂದ ವೈಶ್ಯವಂಶದ ಭಕ್ತಶಿರೋಮಣಿಗಳಾದವರು ರಾಜ-ರಾಣಿ ಅಥವಾ ಸುಖಿ ಪ್ರಜೆಗಳ ರೂಪದಲ್ಲಿ ಒಟ್ಟು 21 ಜನ್ಮಗಳನ್ನು ಪಡೆದುಕೊಂಡರು.


ತದನಂತರ ಕಲಿಯುಗವು ಆರಂಭವಾಯಿತು. ಈ ಜನರು ದೇವತೆಗಳ ನಂತರ, ತತ್ವಗಳನ್ನು ಪೂಜಿಸಲಾರಂಭಿಸಿದರು. ಇದನ್ನು ವ್ಯಭಿಚಾರಿ ಭಕ್ತಿಯೆನ್ನುವರು. ಇದು ಸೃಷ್ಟಿಯ ತಮೋಪ್ರದಾನ ಅಥವಾ ಶೂದ್ರತ್ವದ ಸ್ಥಿತಿಯಾಗಿತ್ತು. ಇಲ್ಲಿ ಕಾಮ-ಕ್ರೋಧಾದಿ ವಿಕಾರಗಳು ಮಿತಿಮೀರಿ ಹೋದವು. ಕಲಿಯುಗದ ಕೊನೆಯವರೆಗೆ 42 ಜನ್ಮಗಳನ್ನು ಪಡೆದುಕೊಂಡರು.

ಈಗ ಈ ಹಳೆಯ, ಪತಿತ ಜಗತ್ತಿನಲ್ಲಿ 83 ಜನ್ಮಗಳನ್ನು ಪಡೆದುಕೊಂಡರು. ಈಗ ಅಂತಿಮ ಅಂದರೆ ಪುರುಷೋತ್ತಮ ಸಂಗಮಯುಗದಲ್ಲಿ ಭಗವಂತನಿಂದ ಸಿಕ್ಕಿದ ದಿವ್ಯ ಜನ್ಮವೇ 84ನೇ ಜನ್ಮ. (ಇದು ನಮ್ಮನು ಸ್ವರ್ಗಕ್ಕೆ ಕರೆದೊಯ್ಯುವ ಜನ್ಮ) ವಾನಪ್ರಸ್ಥ ಸ್ಥಿತಿಯಲ್ಲಿದ್ದವರಿಗೆ ಪರಮಾತ್ಮ ಶಿವನು ಪ್ರಜಾಪಿತ ಬ್ರಹ್ಮಾ ಎಂದು ಹೆಸರಿಸಿ, ಅವರ ಮುಖವಂಶಾವಳಿ ಕುಮಾರಿಗೆ 'ಜಗದಾಂಬ ಸರಸ್ವತಿ' ಎಂದು ಹೆಸರಿಸಿದನು. ಹೀಗೆ ದೇವತಾ ವಂಶದ ಅನ್ಯ ಆತ್ಮಗಳು 5000 ವರ್ಷಗಳಲ್ಲಿ ಪೂಜ್ಯ ಮತ್ತು ಪೂಜಾರಿ ಸ್ಥಿತಿಯಲ್ಲಿ ಒಟ್ಟು 84 ಜನ್ಮಗಳನ್ನು ಪಡೆದುಕೊಂಡರು. ಭಾರತ ದೇಶದಲ್ಲಿ ಈ ಚಕ್ರವನ್ನು 84 ಜನ್ಮಗಳ ಚಕ್ರವೆನ್ನುತ್ತಾರೆ. ಮನುಷ್ಯಾತ್ಮರು 84 ಲಕ್ಷ ಜೀವರಾಶಿಗಳಲ್ಲಿ ಬರುವುದಿಲ್ಲ!

# ಮನುಷ್ಯಾತ್ಮರ 84 ಜನ್ಮಗಳ ಅದ್ಭುತವಾದ ಕಥೆ



# ಮನುಷ್ಯ ಆತ್ಮನು 84 ಲಕ್ಷ ಜೀವರಾಶಿಗಳಲ್ಲಿ ಬರುವುದಿಲ್ಲ



# ಮನುಷ್ಯ ಆತ್ಮನು 84 ಲಕ್ಷ ಜೀವರಾಶಿಗಳಲ್ಲಿ ಬರುವುದಿಲ್ಲ

ಪರಮಪ್ರಿಯ ಪರಮಾತ್ಮ ಶಿವನು ಇಂದು ನಮಗೆ ಜ್ಞಾನದ ಅನೇಕ ಮಧುರವಾದ ರಹಸ್ಯಗಳನ್ನು ಬಿಡಿಸಿ ತಿಳಿಸಿದ್ದಾನೆ. ಇದರ ಜೊತೆಗೆ ಮನುಷ್ಯಾತ್ಮನು ಪಶು-ಪಕ್ಷಿಗಳಲ್ಲಿ ಜನ್ಮ ಪಡೆಯುವುದಿಲ್ಲವೆಂಬ ರಹಸ್ಯವನ್ನೂ ಕೂಡ ಸ್ಪಷ್ಟೀಕರಿಸಿದ್ದಾನೆ. ನಮಗೆ ಇದೊಂದು ಸಂತಸದ ಸುದ್ದಿಯಾಗಿದೆ. ಆದರೂ ಕೂಡ ಕೆಲವರು ಮನುಷ್ಯಾತ್ಮರು 84 ಲಕ್ಷ ಜೀವರಾಶಿಗಳಲ್ಲಿ ಪುನರ್ಜನ್ಮವನ್ನು ಪಡೆಯುತ್ತಾರೆಂದು ಹೇಳುತ್ತಾರೆ.

ಉದಾ- ಒಂದು ದೇಶದ ಸರ್ಕಾರವು ತನ್ನ ಅಪರಾಧಿಯನ್ನು ಶಿಕ್ಷಿಸಲು ಅವನ ಸ್ವತಂತ್ರವನ್ನು ಕಿತ್ತುಕೊಂಡು ಅವನನ್ನು ಒಂದು ಕೊಠಡಿಯಲ್ಲಿ ಬಂಧಿಸಿ, ಕೆಲವು ದಿನಗಳವರೆಗೆ ಅವನಿಗೆ ಸುಖ-ಸೌಲಭ್ಯಗಳು ಸಿಗದಂತೆ ಮಾಡಿಬಿಡುತ್ತದೆ. ಹಾಗೆಯೇ ಮಾನವಾತ್ಮನು ತಪ್ಪು ಕರ್ಮವನ್ನು ಮಾಡಿದರೆ, ಪಶು-ಪಕ್ಷಿ ಇತ್ಯಾದಿ ಯೋನಿಗಳಲ್ಲಿ ಜನಿಸಿ, ದು:ಖ ಹಾಗೂ ನೋವನ್ನು ಅನುಭವಿಸಬೇಕಾಗುತ್ತದೆ ಎಂದು ಅವರು ವಾದ ಮಾಡುತ್ತಾರೆ.


ಆದರೆ ಈಗ ಪರಮ ಪ್ರಿಯ ಪರಮಾತ್ಮ ಶಿವನು-'ಮನುಷ್ಯಾತ್ಮರು ತಮ್ಮ ತಪ್ಪು ಕರ್ಮಗಳಿಗೆ ಶಿಕ್ಷೆಯನ್ನು ಮನುಷ್ಯರ ರೂಪದಲ್ಲೇ ಅನುಭವಿಸುತ್ತಾರೆ' ಎಂದು ಸ್ಪಷ್ಟ ಪಡಿಸಿದ್ದಾನೆ. ಇಂದು ಮಾನವನು ಕೆಟ್ಟ ಗುಣ-ಕರ್ಮ-ಸ್ವಭಾವಗಳಿಗೆ ವಶನಾಗಿ ಪ್ರಾಣಿಗಳಿಗಿಂತಲೂ ಹೀನನಾಗಿ ವರ್ತಿಸುತ್ತಾನೆ. ಪಶು-ಪಕ್ಷಿಗಳಿಗಿಂತಲೂ ಹೆಚ್ಚು ದು:ಖವನ್ನು ಅನುಭವಿಸುತ್ತಿದ್ದಾನೆ.ಆದರೆ ಅವನು ಪಶು-ಪಕ್ಷಿಗಳಾಗಿ ಜನಿಸುವುದಿಲ್ಲ. ಮನುಷ್ಯನು ಕುರುಡ, ಕುಂಟ, ಮೂಗ, ಹೆಳವ, ರೋಗಿ, ಭಿಖಾರಿಯಾಗಿ ಅನುಭವಿಸುತ್ತಿರುವುದನ್ನು ಪ್ರತಿ ದಿನವೂ ನೋಡುತ್ತಿದ್ದೇವೆ ಹಾಗೂ ಕೇಳುತ್ತಿದ್ದೇವೆ. ಪಶು-ಪಕ್ಷಿಗಳು ಮಾನವನಿಗಿಂತ ಹೆಚ್ಚು ಸುಖಿಗಳೂ ಹಾಗೂ ಸ್ವತಂತ್ರವಾಗಿರುವುದನ್ನೂ ನೋಡುತ್ತಿದ್ದೇವೆ. ಜೊತೆಗೆ ಅವುಗಳಿಗೆ ಡಬಲ್ ರೊಟ್ಟಿ, ಬೆಣ್ಣೆಯನ್ನು ತಿನ್ನಿಸುತ್ತಾರೆ. ಸೋಫಾದ ಮೇಲೆ(ಉದಾ-ನಾಯಿ) ಮಲಗಿಸುತ್ತಾರೆ. ಕಾರಿನಲ್ಲಿ ಕೂರಿಸಿಕೊಂಡು ಓಡಾಡುತ್ತಾರೆ. ತುಂಬಾ ಪ್ರೀತಿಯಿಂದ ಪಾಲಿಸುತ್ತಾರೆ. ಆದರೆ ಎಷ್ಟೋ ಮನುಷ್ಯಾತ್ಮರು ಇಂದಿಗೂ ಹಸಿವು, ಬಾಯಾರಿಕೆ, ಉಡಲು ಸರಿಯಾಗಿ ಬಟ್ಟೆ ಇಲ್ಲದೆ ಅರೆ ನಗ್ನರಾಗಿ ಭಿಖಾರಿಗಳಾಗಿ ಬೇಡುತ್ತಾ ಎಲ್ಲರಿಂದಲೂ ಕಟುವಚನಗಳನ್ನು ಕೇಳಿ ನೋವನ್ನು ಅನುಭವಿಸುತ್ತಾ, ಹುಚ್ಚರಾಗಿ ಬೀದಿ ಬೀದಿಗಳಲ್ಲಿ ಅಲೆಯುತ್ತಿರುವುದನ್ನು ನೋಡುತ್ತಿದ್ದೇವೆ. ಎಷ್ಟೋ ಜನರು ಚಳಿಯಿಂದ ನಡುಗುತ್ತಾ, ರೋಗಿಗಳಾಗಿ ಅಳುತ್ತಾ, ನರಳುತ್ತಾ, ನಾಯಿಗಳಿಗಿಂತಲೂ ಕೀಳಾಗಿ ಬೀದಿಯಲ್ಲಿ ಮಲಗಿರುವುದನ್ನೂ ಹಾಗೂ ಅನೇಕರು ದು:ಖ, ನೋವು, ಹಿಂಸೆಗಳನ್ನು ತಾಳಲಾರದೆ ಜೀವಘಾತ ಮಾಡಿಕೊಳ್ಳುತ್ತಿರುವುದನ್ನೂ ನೋಡುತ್ತಿದ್ದೇವೆ. ಇಲ್ಲಿ ಮಾನವನು ಪ್ರಾಣಿಗಿಂತಲೂ ಹೀನಾಯವಾದ ಸ್ಥಿತಿಯನ್ನು ಅನುಭವಿಸುತ್ತಿರುವುದನ್ನು ನೋಡಿದಾಗ ಅವನು ಪಶುಯೋನಿಯಲ್ಲಿ ಜನ್ಮ ಪಡೆಯಬೇಕಾದ ಅಗತ್ಯವಾದರೂ ಏನಿದೆ ?

**ಬೀಜದಂತೆ ವೃಕ್ಷ :** ಮಾನವಾತ್ಮನು ಅನಾಧಿಕಾಲದಿಂದಲೂ ಜನ್ಮ ಜನ್ಮಾಂತರ ಪಾತ್ರವನ್ನು ಮಾಡುತ್ತಾ ಬಂದಿದ್ದಾನೆ. ಅನಾದಿ ಕಾಲದಿಂದಲೂ ವಿವಿಧ ಗುಣ - ಕರ್ಮ - ಸ್ವಭಾವ - ಪ್ರಭಾವ ಮತ್ತು ಪ್ರಾರಬ್ಧವುಳ್ಳವನಾಗಿದ್ದಾನೆ. ಆದರೆ ಪ್ರಾಣಿಗಳ ಗುಣ-ಕರ್ಮ-ಪ್ರಭಾವ-ಸ್ವಭಾವವು ಮನುಷ್ಯಾತ್ಮರಿಂದ ಅನಾದಿ ಕಾಲದಿಂದಲೂ ಭಿನ್ನವಾಗಿದೆ. ಉದಾ: ಮಾವಿನ ಬೀಜವನ್ನು ನೆಟ್ಟು ಬೇವಿನ ಫಲವನ್ನು ಪಡೆಯುವರೇನು? 'ಬೀಜದಂತೆ ವೃಕ್ಷ' ಎಂದು ಹೇಳುತ್ತಾರೆ. ಅದರಂತೆ ಮನುಷ್ಯಾತ್ಮರ ಶ್ರೇಣಿಯೇ ಬೇರೆಯಾಗಿದೆ. ಮನುಷ್ಯಾತ್ಮರು 84 ಲಕ್ಷ ಜೀವರಾಶಿಗಳಲ್ಲಿ ಬರುವುದಿಲ್ಲ. ಕೇವಲ 84 ಜನ್ಮಗಳನ್ನು ಇಡೀ ಕಲ್ಪದಲ್ಲಿ ಪುರ್ನಜನ್ಮವನ್ನು ಮನುಷ್ಯಾತ್ಮರಾಗಿಯೇ ಅವರವರ ಕರ್ಮಕ್ಕನುಸಾರವಾಗಿ ಸುಖ-ದು:ಖದ ರೂಪದಲ್ಲಿ ಅನುಭವಿಸುತ್ತಾರೆ.

ಹಾಗೇನಾದರೂ ಮನುಷ್ಯಾತ್ಮರು ಪಸು-ಪಕ್ಷಿಗಳಾಗಿ ಜನ್ಮ ಪಡೆಯುವುದಾಗಿದ್ದರೆ ಮನುಷ್ಯಾತ್ಮರ ಸಂಖ್ಯೆಯು ಕಡಿಮೆಯಾಗಬೇಕಾಗಿತ್ತಲ್ಲವೇ? ಪ್ರಾಣಿ-ಪಶು-ಪಕ್ಷಿಗಳ ಸಂಖ್ಯೆ ಹೆಚ್ಚಾಗ ಬೇಕಿತಲ್ಲವೇ? ಆದರೆ ಇಂದು ಮಾನವನು ದೇಹಾಭಿಮಾನ ಹಾಗೂ ವಿಕಾರಗಳಿಗೆ ಗುಲಾಮನಾಗಿ ಅನೇಕ ಪಾಪ ಕರ್ಮಗಳನ್ನು ಮಾಡುತ್ತಿದ್ದಾನೆ. ಇದರಿಂದ ಮನುಷ್ಯಾತ್ಮರ ಸಂಖ್ಯೆಯು ತುಂಬಾ ಕಡಿಮೆಯಾಗಬೇಕಾಗಿತ್ತು. ಆದರೆ ಇಂದಿನ ಜಗತ್ತಿನಲ್ಲಿ ಜನಸಂಖ್ಯಾವೃದ್ಧಿಯು ವೇಗವು ಎಲ್ಲದಕ್ಕಿಂತ ಅತ್ಯಂತ ಭಯಾನಕವಾದ ಸಮಸ್ಯೆಯಾಗಿರುವುದನ್ನು ಎಲ್ಲರೂ ನೋಡುತ್ತಿದ್ದೇವೆ. ಇದರಿಂದ ಮನುಷ್ಯಾತ್ಮನು ಪ್ರಾಣಿಯಾಗಿ ಪುನರ್ಜನ್ಮದಲ್ಲಿ ಬರಬೇಕಾದ ಅಗತ್ಯವೆ ಇಲ್ಲವೆಂಬ ಮಾತು ಸಾಧಾರಣವಾದ ಬುದ್ಧಿಯುಳ್ಳ ಮಾನವನಿಗೂ ಅರ್ಥವಾಗುತ್ತದೆ ಅಲ್ಲವೆ?

# ಈಶ್ವರೀಯ ವಿಶ್ವವಿದ್ಯಾಲಯ


## (ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಮುಖ್ಯಾಲಯ - ಅಬುಪರ್ವತ)



ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರಿಯ ವಿಶ್ವವಿದ್ಯಾಲಯದ ಮುಖಾಂತರ ಈ ಪಥ ಪ್ರದರ್ಶನದಲ್ಲಿರುವ ಈಶ್ವರನ ಜ್ಞಾನ ಹಾಗೂ ಸಹಜ ರಾಜಯೋಗದ ಶಿಕ್ಷಣವನ್ನು ಕಲಿಸಲಾಗುತ್ತಿದೆ. ಮೇಲೆ ಕಾಣುತ್ತಿರುವ ಚಿತ್ರವು ಅಬು ಪರ್ವತ(ವಿಶ್ವದ ಸರ್ವ ಶ್ರೇಷ್ಠ ತೀರ್ಥ ಸ್ಥಾನ)ದಲ್ಲಿರುವ ಸಂಸ್ಥೆಯ ಅಂತರ ರಾಷ್ಟ್ರೀಯ ಮುಖ್ಯಾಲಯವಾಗಿದೆ. ಪರಮಾತ್ಮ ಶಿವನು ಪರಮಧಾಮ(ಬ್ರಹ್ಮಲೋಕ)ದಿಂದ ಅವತರಿಸಿ ಒಬ್ಬ ಸಾಧಾರಣ ಹಾಗೂ ವೃದ್ಧ ಮಾನವನ ದೇಹದಲ್ಲಿ(ದಿವ್ಯಜನ್ಮ) ಪ್ರವೇಶಿಸಿ ಅವರಿಗೆ 'ಪ್ರಜಾಪಿತ ಬ್ರಹ್ಮಾ' ಎಂಬ ಅಲೌಕಿಕ ಹೆಸರನ್ನಿತ್ತು, 1937 ರಲ್ಲಿ ಈ ಸಂಸ್ಥೆಯನ್ನು ಸ್ಥಾಪಿಸಿದನು. ಏಕೆಂದರೆ ನಿರಾಕಾರನಾದ ಪರಮಾತ್ಮನು ಯಾರಾದರೂ ಮಾನವನ ಮುಖ(ದೇಹ)ವನ್ನು ಬಳಸಿಕೊಳ್ಳದೆ ಜ್ಞಾನವನ್ನು ನೀಡುವುದಾದರು ಹೇಗೆ ?

ಜ್ಯೋತಿರ್ಬಿಂದು ಶಿವನು ಬ್ರಹ್ಮಾರವರ ಮುಖ ಕಮಲದಿಂದ ಜ್ಞಾನ ಹಾಗೂ ಯೋಗದ ಶಿಕ್ಷಣವನ್ನಿತ್ತನು. ಯಾರು ತಮ್ಮ ಜೀವನದಲ್ಲಿ ಬ್ರಹ್ಮಚರ್ಯವ್ರತವನ್ನು ಅಳವಡಿಸಿಕೊಂಡು ಸಂಪೂರ್ಣವಾಗಿ ಪವಿತ್ರತೆಯನ್ನು ಕೈಗೊಂಡರೋ ಆ ನರ ಮತ್ತು ನಾರಿಯರು ಬ್ರಹ್ಮಾಮುಖವಂಶಾವಳಿ 'ಬ್ರಾಹ್ಮಣ' ಮತ್ತು 'ಬ್ರಾಹ್ಮಣಿ' ಅಥವಾ 'ಬ್ರಹ್ಮಾಕುಮಾರ' ಮತ್ತು 'ಬ್ರಹ್ಮಾಕುಮಾರಿ' ಯರೆನಿಸಿಕೊಂಡರು. ಏಕೆಂದರೆ ಅವರ ಆಧ್ಯಾತ್ಮಿಕವಾದ ಹೊಸ ಜೀವನವು ಬ್ರಹ್ಮಾರವರ ಶ್ರೀಮುಖದಿಂದಲೇ ಆರಂಭವಾಯಿತು.

ಪರಮಪಿತ ಪರಮಾತ್ಮನು 'ತ್ರಿಕಾಲದರ್ಶಿ'ಯಾಗಿದ್ದಾನೆ. ಭಗವಂತನಿಗೆ ಇವರ ಜನ್ಮ ಜನ್ಮಾಂತರದ ಜೀವನದ ಕಥೆಯ ಅರಿವಿತ್ತು. ಏಕೆಂದರೆ ಇವರೇ ಸತಯುಗದ ಆದಿಯಲ್ಲಿ ಪೂಜ್ಯ ಶ್ರೀ ನಾರಾಯಣ ಆಗಿದ್ದರು. ಆದರೆ ಕಾಲ ಚಕ್ರವು ಉರುಳಿದ್ದಂತೆ ಕಲೆಗಳು ಕಡಿಮೆಯಾಗುತ್ತಾ ಹೋದಂತೆಲ್ಲಾ ಈಗ ಈ ಸ್ಥಿತಿಯನ್ನು ಮುಟ್ಟಿದ್ದಾರೆ. ಆದ್ದರಿಂದ ಪರಮಾತ್ಮನು ಇವರ ದೇಹದಲ್ಲಿ ಪ್ರವೇಶಿಸಿ 1937ರಲ್ಲಿ ಈ 'ಅಶ್ವಮೇದ ಅವಿನಾಶಿ ರುದ್ರ ಗೀತಾ ಜ್ಞಾನ ಯಜ್ಞ' ಅಥವಾ 'ಈಶ್ವರಿಯ ವಿಶ್ವವಿದ್ಯಾಲಯ'ವನ್ನು 5000 ವರ್ಷಗಳ ಹಿಂದೆ ಹೇಗೆ ಸ್ಥಾಪಿಸಿದ್ದನೋ ಹಾಗೆಯೇ ಇಂದೂ ಮತ್ತೆ ಸ್ಥಾಪಿಸಿದ್ದಾನೆ. ಈ ಬ್ರಹ್ಮಾರವರನ್ನೇ ಮಹಾ ಭಾರತದ ಭಾಷೆಯಲ್ಲಿ 'ಭಗವಂತನ ರಥ'ವೆಂದು ಹೇಳಬಹುದು. ಪರಮಾತ್ಮ ಶಿವನಿಂದ 'ಜ್ಞಾನ ಗಂಗೆ'ಯನ್ನು ತರಲು ನಿಮಿತ್ತರಾದ ಇವರೇ 'ಭಗೀರಥ' ಮತ್ತು ಶಿವನ ವಾಹನವಾದ 'ನಂದಿಗಣ'ವೂ ಆಗಿದ್ದಾರೆ.





## ಪಿತಾಶ್ರೀ ಬ್ರಹ್ಮಾ

(ಇವರ ಮುಖಾಂತರ ಪರಮಾತ್ಮನು ಜ್ಞಾನವನ್ನಿತ್ತನು)

## ಜಗದಂಬಾ ಸರಸ್ವತಿ

(ಇವರೇ ಜ್ಞಾನ-ವೀಣೆಯ ಮೂಲಕ ಆಧ್ಯಾತ್ಮಿಕ ಜಾಗೃತಿ ತಂದರು)

ಯಾವ ಮಾನವೀಯ ದೇಹದಲ್ಲಿ ಪರಮಾತ್ಮ ಶಿವನು ಪರಕಾಯ ಪ್ರವೇಶಿಸಿದನೋ, ಆಗ ಅವರು ಕೋಲ್ಕತ್ತಾದಲ್ಲಿ ಒಬ್ಬ ಪ್ರಖ್ಯಾತ ವಜ್ರದ ವ್ಯಾಪಾರಿಯಾಗಿದ್ದರು ಹಾಗೂ ಶ್ರೀ ನಾರಾಯಣನ ಅನನ್ಯ ಭಕ್ತರಾಗಿದ್ದರು. ಅವರಲ್ಲಿ ಉದಾರತೆ, ಸರ್ವರ ಬಗ್ಗೆ ಕಲ್ಯಾಣದ ಭಾವನೆ, ವ್ಯವಹಾರ ಕುಶಲತೆ , ರಾಜೋಚಿತವಾದ ಗಾಂಭೀರ್ಯ ಮತ್ತು ಪ್ರಭು ಪರಮಾತ್ಮನ ದರ್ಶನಕ್ಕೆ ನಿರಂತವಾಗಿ ಕಾತರಿಸುತ್ತಿದ್ದರು. ಇವರು ರಾಜ-ಮಹಾರಾಜರುಗಳ ಜೊತೆ, ಸಮಾಜದ ಪ್ರಮುಖರ ಜೊತೆ ಮತ್ತು ಶ್ರೀ ಸಾಮಾನ್ಯರಿಗೂ ಪೂರ್ಣ ಪರಿಚಿತರಾಗಿದ್ದರು. ಆದುದರಿಂದಲೇ ಅವರು ಅನುಭವಿಗಳೂ ಆಗಿದ್ದರು. ಅವರಲ್ಲಿ ಭಕ್ತಿಯ ಪರಾಕಾಷ್ಠತೆ ಇತ್ತು ಹಾಗೂ ವೈರಾಗ್ಯದ ಭಾವನೆಯೂ ತುಂಬಿತ್ತು. ಅಷ್ಟೇ ಅಲ್ಲ, ಪರಮಾತ್ಮ ಶಿವನು ಪ್ರವೃತ್ತಿಯನ್ನು ದೈವ್ಯೀಕರಣಗೊಳಿಸಲು ಪ್ರವೃತ್ತಿ ಮಾರ್ಗದ ವ್ಯಕ್ತಿಯನ್ನೇ ಆಧಾರ ಮಾಡಿಕೊಳ್ಳುವುದು ಉಚಿತವೆನಿಸಿತ್ತು. ಹೀಗೆ ಅನೇಕಾನೇಕ ಕಾರಣಗಳಿಂದ 'ತ್ರಿಕಾಲದರ್ಶಿ ಪರಮಾತ್ಮ ಶಿವನು' ಇವರ ದೇಹದಲ್ಲಿ ಪರಕಾಯ ಪ್ರವೇಶ ಮಾಡಿದನು.

ಇವರ ಮುಖಾಂತರ ಜ್ಞಾನ ಹಾಗೂ ರಾಜಯೋಗದ ಶಿಕ್ಷಣವನ್ನು ಸ್ವೀಕರಿಸಿದ ಎಲ್ಲಾ ಬ್ರಹ್ಮಾಕುಮಾರ ಮತ್ತು ಕುಮಾರಿಯರಲ್ಲಿ ಯಾರು ಅತ್ಯುತ್ತಮರಾಗಿ ಶ್ರೇಷ್ಠ ಸಾಧನೆ ಮಾಡಿದರೋ ಅವರಿಗೆ 'ಜಗದಂಬಾ ಸರಸ್ವತಿ' ಎಂಬ ಅಲೌಕಿಕ ಹೆಸರನ್ನಿತ್ತನು. ಇವರೇ ಯಜ್ಞಮಾತೆ ಅಥವಾ ಈಶ್ವರೀಯ ವಿಶ್ವ ವಿದ್ಯಾಲಯದ ಪ್ರಪ್ರಥಮ ಪ್ರಧಾನ ಆಡಳಿತಾಧಿಕಾರಿಗಳಾದರು. ಇವರು ಜ್ಞಾನವೀಣೆಯ ಮೂಲಕ ಜನತೆಗೆ ಪರಮಾತ್ಮನ ಪರಿಚಯವನ್ನು ಕೊಡಿಸಿ, ಅವರಲ್ಲಿ ಆಧ್ಯಾತ್ಮಿಕ ಜಾಗೃತಿಯನ್ನು ತಂದರು. ಅವರು ಬಾಲ ಬ್ರಹ್ಮಾಚಾರಿಣಿಯೂ ಆಗಿದ್ದರು. ಸಹಜರಾಜಯೋಗದ ಮುಖಾಂತರ ಅನೇಕ ಮಾನವಾತ್ಮರಲ್ಲಿ ಆಧ್ಯಾತ್ಮಿಕ ಜ್ಯೋತಿಯನ್ನು ಬೆಳಗಿದರು. ಒಟ್ಟಿನಲ್ಲಿ ಪ್ರಜಾಪಿತ ಬ್ರಹ್ಮಾ ಹಾಗೂ ಜಗದಂಬಾ ಸರಸ್ವತಿ- ಇವರು ಪವಿತ್ರ ಹಾಗೂ ದೈವಿ ಜೀವನಕ್ಕೆ ಅತ್ಯುತ್ತಮ ಉದಾಹರಣಾ ಸ್ವರೂಪಿಗಳಾಗಿ ವಿಶ್ವಕ್ಕೆ ಮಾರ್ಗದರ್ಶಕರಾದರು.

# ಸೃಷ್ಟಿ ನಾಟಕದ ರಚಯಿತ ಹಾಗೂ ನಿರ್ದೇಶಕರು ಯಾರು?

ಈ ಮನುಷ್ಯ ಸೃಷ್ಟಿಯು ಪ್ರಕೃತಿ ಮತ್ತು ಪುರುಷನ ಅನಾದಿಯಾದ ಆಟ. ಈ ನಾಟಕದ ಕಥಾವಸ್ತುವನ್ನು ಅರ್ಥ ಮಾಡಿಕೊಂಡಿದ್ದಾದರೆ ಮನುಷ್ಯಾತ್ಮರಿಗೆ ತುಂಬಾ ಖುಷಿಯಾಗುತ್ತದೆ.

ಸೃಷ್ಟಿ ನಾಟಕದ ನಾಲ್ಕು ಭಾಗಗಳು:- ಚಿತ್ರದಲ್ಲಿ ಸ್ವಸ್ತಿಕ್ ಚಿನ್ಹೆಯು ಸೃಷ್ಟಿ ಚಕ್ರವನ್ನು ನಾಲ್ಕು ಭಾಗ- ಸತಯುಗ, ತ್ರೇತಾಯುಗ, ದ್ವಾಪರಯುಗ ಮತ್ತು ಕಲಿಯುಗಗಳೆಂದು ವಿಂಗಡಿಸುತ್ತದೆ.

ಪ್ರತಿಯೊಂದು ಆತ್ಮನು ತನ್ನ ನಿಶ್ಚಿತವಾದ ಸಮಯಕ್ಕನುಸಾರವಾಗಿ ಪರಮಧಾಮದಿಂದ ಈ ಸೃಷ್ಟಿ ನಾಟಕ ರಂಗಮಂಟಪಕ್ಕೆ ಬರುತ್ತಾನೆ. ಪ್ರಪ್ರಥಮವಾಗಿ ಸತಯುಗ ಮತ್ತು ತ್ರೇತಾಯುಗದ ಸುಂದರ ದೃಶ್ಯವು ಮುಂದೆ ಬರುತ್ತದೆ. ಈ ಎರಡೂ ಯುಗದಲ್ಲಿ ಸಂಪೂರ್ಣವಾದ ಸುಖವಿರುತ್ತದೆ. ಅಲ್ಲಿ ಒಂದೇ ಒಂದು 'ಆದಿ ಸನಾತನ ದೇವಿ ದೇವತಾ ಧರ್ಮ' ದಲ್ಲಿ ಮನುಷ್ಯಾತ್ಮರು ಪಾತ್ರಮಾಡುತ್ತಾರೆ. ಇನ್ನುಳಿದ ಎಲ್ಲಾ ಧರ್ಮದ ಆತ್ಮಗಳು ಪರಮಧಾಮದಲ್ಲೇ ಇರುತ್ತವೆ. ಈ ಎರಡೂ ಯುಗದಲ್ಲಿ ದೇವತೆ ಮತ್ತು ಕ್ಷತ್ರಿಯ ವಂಶದ ಮನುಷ್ಯಾತ್ಮರು ತಂತಮ್ಮ ಪವಿತ್ರತೆಯ ಸ್ಥಿತಿಗನುಸಾರವಾಗಿ ಬರುತ್ತಾರೆ. ಆದುದರಿಂದ ಈ ಎರಡೂ ಯುಗದಲ್ಲಿ ಎಲ್ಲರೂ ಒಂದೇ ಧರ್ಮದವರೂ,ನಿರ್ವೈರ ಸ್ವಭಾವದವರೂ ಆಗಿರುತ್ತಾರೆ. ಇದನ್ನೇ 'ಸ್ವರ್ಗ'(ರಾಮರಾಜ್ಯ)ವೆಂದು ಕರೆಯುತ್ತಾರೆ.

ದ್ವಾಪರ ಯುಗದಲ್ಲಿ ಈ ಧರ್ಮವು ರಜೋಗುಣಕ್ಕೊಳಗಾದಾಗ ಇಬ್ರಾಹೀಂನಿಂದ 'ಇಸ್ಲಾಂ ಧರ್ಮ', ಬುದ್ಧನಿಂದ 'ಬೌದ್ಧ ಧರ್ಮ', ಏಸುಕ್ರಿಸ್ತನಿಂದ 'ಕ್ರಿಶ್ಚಿಯನ್ ಧರ್ಮ', ಶಂಕರಾಚಾರ್ಯರಿಂದ 'ಸಂನ್ಯಾಸ ಧರ್ಮ'ಗಳು ಸ್ಥಾಪನೆಯಾಗುತ್ತವೆ. ಆದುದರಿಂದ ಈ ನಾಲ್ಕು ಮುಖ್ಯ ಧರ್ಮಗಳ ಪಿತರು ಜಗತ್ತಿನ ಮುಖ್ಯ ಪಾತ್ರಧಾರಿಗಳು. ಈ ನಾಲ್ಕು ಧರ್ಮಗಳ ಶಾಸ್ತ್ರಗಳೂ ಮುಖ್ಯ. ಇದರ ಜೊತೆಗೆ 'ಮುಸಲ್ಮಾನ ಧರ್ಮ' ಸ್ಥಾಪಕ ಮುಹಮದ್ ಮತ್ತು 'ಸಿಖ್ ಧರ್ಮ' ಸ್ಥಾಪಕ ಗುರುನಾನಕರೂ ಕೂಡ ಈ ವಿಶ್ವ ನಾಟಕದ ಮುಖ್ಯ ಪಾತ್ರಧಾರಿಗಳಾಗಿದ್ದಾರೆ. ಹೀಗೆ ಅನೇಕ ಮತಗಳು ಸ್ಥಾಪನೆಯಾದ್ದರಿಂದ ದ್ವಾಪರ ಹಾಗೂ ಕಲಿಯುಗದ ಸೃಷ್ಟಿಯಲ್ಲಿ ಭಿನ್ನತೆ, ಜಗಳ, ಯುದ್ಧ ಹಾಗೂ ದು:ಖಗಳು ಆರಂಭವಾದವು.


ಕಲಿಯುಗದ ಅಂತಿಮದಲ್ಲಿ ಅತಿಯಾದ ಧರ್ಮ ಗ್ಲಾನಿಯಾದಾಗ ಅಂದರೆ ವಿಶ್ವದ ಪ್ರಪ್ರಥಮವಾದ ದೇವಿ ದೇವತಾ ಧರ್ಮವು ಸಂಪೂರ್ಣವಾಗಿ ಕ್ಷೀಣಿಸಲಾರಂಭಿಸಿದಾಗ, ಮಾನವಾತ್ಮರು ಸಂಪೂರ್ಣ ಪತಿತರಾದಾಗ, ಈ ಸೃಷ್ಟಿನಾಟಕದ ರಚಯಿತ ಮತ್ತು ನಿರ್ದೇಶಕನಾದ ಪರಮಾತ್ಮ ಶಿವನು ಪ್ರಜಾಪಿತ ಬ್ರಹ್ಮಾರವರಲ್ಲಿ (ಪ್ರವೇಶಿಸಿ)ಅವತರಿಸಿ, ಅವರ ಮುಖ ಕಮಲದ ಮುಖಾಂತರ ಕುಮಾರಿ ಜಗದಂಬಾ ಸರಸ್ವತಿ ಹಾಗೂ ಬ್ರಹ್ಮಾಕುಮಾರ ಮತ್ತು ಕುಮಾರಿಯರನ್ನು ರಚಿಸಿದನು. ಅವರ ಮುಖಾಂತರ ಎಲ್ಲರಿಗೂ ಅಲೌಕಿಕ ಮಾತಾ-ಪಿತರ ರೂಪದಲ್ಲಿ ಪಾಲನೆ ನೀಡುವನು. ಹಾಗೂ ಜ್ಞಾನದ ಮುಖಾಂತರ ಅವರಿಗೆ ಮಾರ್ಗ ದರ್ಶನವನ್ನು ನೀಡುತ್ತಾ ಮುಕ್ತಿ ಹಾಗೂ ಜೀವನ್ಮುಕ್ತಿಯ ಜನ್ಮ ಸಿದ್ಧ ಅಧಿಕಾರವನ್ನಿತ್ತನು. ಪ್ರಜಾಪಿತ ಬ್ರಹ್ಮಾ ಹಾಗೂ ಜಗದಂಬಾ ಸರಸ್ವತಿ (ಏಡಮ್ ಹಾಗೂ ಈವ್ ಅಥವಾ ಆದಮ್ ಹಾಗೂ ಹವ್ವಾ) ಇವರೇ ಈ ಸೃಷ್ಟಿ ನಾಟಕದ ಪ್ರಧಾನ ಪಾತ್ರಧಾರಿಗಳು. ಏಕೆಂದರೆ ಪರಮಾತ್ಮ ಶಿವನೇ ಇವರ ಮುಖಾಂತರ ಮತ್ತೆ ಸ್ವರ್ಗವನ್ನು ಸ್ಥಾಪಿಸುತ್ತಾನೆ. ಪರಮಾತ್ಮ ಶಿವನು ಅವತರಿಸುವ ಈ ಪುಟ್ಟದಾದ ಸಂಗಮ ಯುಗವು ಅತ್ಯಂತ ಮಹತ್ವಿಕೆಯಿಂದ ಕೂಡಿದೆ.

ವಿಶ್ವದ ಇತಿಹಾಸ ಮತ್ತು ಭೂಗೋಳವು ಪುನರಾವರ್ತಿಸುತ್ತದೆ:- ಈ ಕಲಿಯುಗದ ಅಂತ್ಯದಲ್ಲಿ ಪರಮಾತ್ಮ ಶಿವನು ಮಹಾದೇವ ಶಂಕರನ ಮೂಲಕ ಸೃಷ್ಟಿಯ ಪರಿವರ್ತನೆಯನ್ನು ಮಾಡಿಸುತ್ತಾನೆ. ಆಗ ಎಲ್ಲಾ ಆತ್ಮ(ಪಾತ್ರಧಾರಿ)ಗಳು ತಮ್ಮ ಪ್ರಿಯಧಾಮವಾದ ಮುಕ್ತಿ(ಪರಮಧಾಮ)ಗೆ ಹೋಗುವರು ಮತ್ತು ಸತಯುಗದ ಆದಿಯಲ್ಲಿ ಆದಿಸನಾತನ ದೇವಿ ದೇವತಾ ಧರ್ಮದ ಆತ್ಮಗಳೂ ಈ ಸೃಷ್ಟಿ ನಾಟಕದ ರಂಗಮಂಟಪಕ್ಕೆ ಮತ್ತೆ ಬರಲಾರಂಭಿಸುತ್ತವೆ. ಪುನ: 2500 ವರ್ಷಗಳ ನಂತರ ದ್ವಾಪರದಲ್ಲಿ ಇಸ್ಲಾಂ, ಬೌದ್ಧ, ಕ್ರಿಶ್ಚಿಯನ್ ಹಾಗೂ ಸಂನ್ಯಾಸ ಧರ್ಮದ ಆತ್ಮಗಳು ತಂತಮ್ಮ ಸಮಯಕ್ಕನುಸಾರವಾಗಿ ಸೃಷ್ಟಿ ನಾಟಕ ರಂಗಮಂಟಪಕ್ಕೆ ಬರಲಾರಂಭಿಸುವರು. ಹೀಗೆ ಈ ಅನಾದಿ-ಅವಿನಾಶಿ-ನಿಶ್ಚಿತವಾದ ಈ ಸೃಷ್ಟಿನಾಟಕವು ಅನಾದಿ ಕಾಲದಿಂದಲೂ ಪ್ರತಿ 5000 ವರ್ಷಕ್ಕೊಮ್ಮೆ ಮತ್ತೆ...ಮತ್ತೆ...ಪುನರಾವರ್ತಿಸುತ್ತಿರುತ್ತದೆ.

# ಸೃಷ್ಟಿ ನಾಟಕದ ರಚಯಿತ ಹಾಗೂ ನಿರ್ದೇಶಕರು ಯಾರು?



# ಕಲಿಯುಗವು ಈಗ ಮಗುವಲ್ಲ, ಮುದಿಯಾಗಿದೆ!



# ಕಲಿಯುಗವು ಈಗ ಮಗುವಲ್ಲ, ಮುದಿಯಾಗಿದೆ!

## ಇದರ ವಿನಾಶವು ಈಗ ಅತಿ ಹತ್ತಿರದಲ್ಲಿದೆ ಮತ್ತು ಶೀಘ್ರದಲ್ಲಿ ಸತ್ಯಯುಗವು ಬರಲಿದೆ.....

'ಕಲಿಯುಗೇ ಪ್ರಥಮ ಪಾದೇ' ಇದಕ್ಕಿನ್ನೂ ಲಕ್ಷಾಂತರ ವರ್ಷಗಳಿವೆ, ಶಾಸ್ತ್ರಕ್ಕನುಸಾರವಾಗಿ ವಿನಾಶವು ಇನ್ನೂ ತುಂಬಾ ಮುಂದಿದೆ ಎಂದು ಇಂದಿಗೂ ತುಂಬಾ ಜನರು ಹೇಳುತ್ತಿದ್ದಾರೆ. ಆದರೆ ಪರಮಪಿತ ಶಿವ ಪರಮಾತ್ಮನು ಕಲಿಯುಗವು ಮುದಿಯಾಗಿದೆ! ಈಗ ಸೃಷ್ಟಿಯ ಮಹಾವಿನಾಶದ ಕ್ಷಣಗಳು ತುಂಬಾ ಹತ್ತಿರದಲ್ಲಿವೆ. ಇಂದು ಮನುಷ್ಯ ಸೃಷ್ಟಿಯು ಕಾಮ, ಕ್ರೋಧ, ಲೋಭ, ಮೋಹ ಹಾಗೂ ಅಹಂಕಾರಗಳ ಚಿತೆಯಲ್ಲಿ ಬೆಂದು ಬೂದಿಯಾಗುತ್ತಿದೆ. ಸೃಷ್ಟಿಯ ಮಹಾ ವಿನಾಶಕ್ಕಾಗಿ ಅಣ್ವಸ್ತ್ರಗಳು ತಯಾರಾಗಿವೆ. ಆದುದರಿಂದ ಈಗಲೂ ಯಾರಾದರೂ ಮಹಾ ವಿನಾಶವು ತುಂಬಾ ದೂರವಿದೆ ಎಂದರೆ ಅವರು ಘೋರವಾದ ಅಜ್ಞಾನದ-ಅಂಧಕಾರದಲ್ಲಿ ಹಾಗೂ ಕುಂಭಕರ್ಣನ ಮಹಾ ನಿದ್ರೆಯಲ್ಲಿ ಚೆನ್ನಾಗಿ ಮಲಗಿ ಬಿಟ್ಟಿದ್ದಾರೆ ಎಂದರ್ಥ. ಏಕೆಂದರೆ ಅವರು ತಮ್ಮ ಅಕಲ್ಯಾಣವನ್ನು ತಮಗೆ ತಾವೇ ತಮ್ಮ ಕೈಯಿಂದಲೇ ಮಾಡಿಕೊಳ್ಳುತ್ತಿದ್ದಾರೆ. ಈಗ ಪರಮಾತ್ಮ ಶಿವನು ಅವತರಿಸಿ ಜ್ಞಾನಾಮೃತವನ್ನು ದಯಪಾಲಿಸುತ್ತಿದ್ದಾನೆ.

ಇಂದಿನ ವಿಜ್ಞಾನಿಗಳು ಜನಸಂಖ್ಯೆಯ ವೇಗವು ಅತಿಯಾಗಿ ಬೆಳೆಯುತ್ತಿರುವುದನ್ನು ಗಮನಿಸಿ, ಆಹಾರವು ಅಷ್ಟೇ ಪ್ರಮಾಣದಲ್ಲಿ ಉತ್ಪಾದನೆಯಾಗುತ್ತಿಲ್ಲ, ಆದುದರಿಂದ ಮುಂದೆ ಅತ್ಯಂತ ಭೀಕರವಾದ ಕ್ಷಾಮವು ವ್ಯಾಪಿಸುವುದರಿಂದ ಮಹಾ ವಿನಾಶವು ಹತ್ತಿರವಾಗುತ್ತಿದೆ, ಎಂದು ಘೋಷಿಸಿದ್ದಾರೆ. ವಾತಾವರಣದ ಮಾಲಿನ್ಯ ಹಾಗೂ ಪೆಟ್ರೋಲ್, ಕಲ್ಲಿದ್ದಲು ಇತ್ಯಾದಿಗಳೂ ಕೆಲವೇ ವರ್ಷಗಳಲ್ಲಿ ಖಾಲಿಯಾಗುವುದೆಂದು ವಿಜ್ಞಾನಿಗಳು ಹೇಳಿಕೆಯನ್ನಿತ್ತಿದ್ದಾರೆ. ಮತ್ತೆ ಕೆಲವರು ಭೂಮಿಯಲ್ಲಿ ಶೀತವು ಹೆಚ್ಚುವುದರಿಂದ ಹಿಮಪಾತವಾಗುವುದೆಂದು ಹೇಳಿದ್ದಾರೆ. ಇಂದು ರಷ್ಯಾ ಹಾಗೂ ಅಮೇರಿಕಾದ ಬಳಿ ಲಕ್ಷಾಂತರ ಟನ್ ಅಣ್ವಸ್ತ್ರಗಳಿವೆ. ಇಂದು ಎಲ್ಲೆಲ್ಲೂ ಸ್ವಾರ್ಥ-ಸಂಕುಚಿತ ಭಾವನೆ; ದ್ವೇಷಾಸೂಯೆಗಳ ಜ್ವಾಲೆಯು ಪ್ರಜ್ವಲಿಸಲಿದೆ!! ಇದರ ಜೊತೆಗೆ ಇಂದಿನ ಜೀವನವು ವಿಕಾರಿ ಹಾಗೂ ಒತ್ತಡದಿಂದ ಕೂಡಿದೆ. ಅಂದರೆ ಇನ್ನೂ ಎಷ್ಟೋ ವರ್ಷಗಳಿವೆ ಅಂದರೆ ಈ ಎಲ್ಲಾ ಮಾತುಗಳನ್ನು ಕೇಳಿದರೂ ಕೇಳದಂತಹ ಕಿವುಡರಾಗಿದ್ದಾರೆ.

ಆದುದರಿಂದ ಸಾರ್ವಭೌಮಿಕ-ಸಾರ್ವಜನಿಕ-ಸತ್ಯವಾದ ವಿಚಾರವು ಎಲ್ಲರಿಗೂ ನೆನಪಿರಲಿ- ಅದೇನೆಂದರೆ ಪರಮಪ್ರಿಯ ಪರಮಾತ್ಮ ಶಿವನು ಸತಯುಗೀ ಪಾವನ ಹಾಗೂ ದೈವಿ ಸೃಷ್ಟಿಯನ್ನು ಮತ್ತೆ ಸ್ಥಾಪಿಸುತ್ತಿದ್ದಾನೆ!. ಮಾನವರನ್ನು ದೇವತೆಗಳನ್ನಾಗಿ ಅಥವಾ ಪತಿತರನ್ನು ಪಾವನರನ್ನಾಗಿ ಮಾಡುತ್ತಿದ್ದಾನೆ!!. ಆದುದರಿಂದ ಪರಮಾತ್ಮನು ನೀಡುತ್ತಿರುವ ಸಹಜ ರಾಜಯೋಗ ಹಾಗೂ ಜ್ಞಾನ-ಈ ಅಮೂಲ್ಯವಾದ ವಿದ್ಯೆಯನ್ನು ಕಲಿತು ಜೀವನವನ್ನು ಪಾವನ, ಸತೋಪ್ರಧಾನ ಹಾಗೂ ಆನಂದಮಯವನ್ನಾಗಿ ಮಾಡಿಕೊಳ್ಳಲು ಸರ್ವೋತ್ತಮವಾದ ಸಾಧನೆಯನ್ನು ಕೈಗೊಳ್ಳಬೇಕಾಗಿದೆ. ಅಂದಮೇಲೆ ಈಗಲೂ ಈ ಕಲಿಯುಗವು ಮಗುವೆಂದು ಹೇಳುತ್ತಾ ಕುಳಿತಿದ್ದರೆ ತಮ್ಮ ಭಾಗ್ಯವನ್ನು ತಾವೇ ತಿರಸ್ಕರಿಸಿದಂತಾಗುತ್ತದೆಯಲ್ಲವೆ

ಈಗ ಕಲಿಯುಗೀ ಸೃಷ್ಟಿಯು ಕೊನೆಯ ಉಸಿರನ್ನೆಳೆಯುತ್ತಿದೆ!! ಕಾರಣ, ಕಾಮ, ಕ್ರೋಧ, ಲೋಭ, ಮೋಹ ಹಾಗೂ ಅಹಂಕಾರ ಇತ್ಯಾದಿ ಮಹಾ ರೋಗಗಳಲ್ಲಿ ಸಿಲುಕಿಕೊಂಡು ನರಳುತ್ತಿದೆ!!.ಆದುದರಿಂದ ಈ ಸೃಷ್ಟಿಯ ಆಯಸ್ಸನ್ನು ಲಕ್ಷಾಂತರ ವರ್ಷಗಳೆಂದು ಹೇಳುವುದು ತಪ್ಪಾಗುತ್ತದೆ. ಈ ಕಲಿಯುಗವು ಇನ್ನೂ ಮಗುವೆಂದು ತಿಳಿದುಕೊಂಡು ಅಜ್ಞಾನ ನಿದ್ರೆಯಲ್ಲಿ ಮಲಗಿರುವವರೇ ನಿಜವಾದ 'ಕುಂಭಕರ್ಣ'ರಾಗಿದ್ದಾರೆ! ಯಾವ ಮನುಷ್ಯಾತ್ಮರು ಈ ಸಂದೇಶವನ್ನು ಒಂದು ಕಿವಿಯಲ್ಲಿ ಕೇಳಿ ಮತ್ತೊಂದು ಕಿವಿಯಲ್ಲಿ ಬಿಡುವವರ ಕಿವಿಗಳೂ ಕೂಡ ಅಂತಹ ಗಡಿಗೆ (ಕುಂಭ) ಯಂತೆ ಅಂದರೆ ಅವರು ಮಹಾ-ಮಹಾನ್ ಬುದ್ಧಿಹೀನರಾಗಿದ್ದಾರೆ.

# ರಾವಣನಿಗೆ ಹತ್ತು ತಲೆಗಳಿದ್ದವೇನು? ರಾವಣನು ಯಾವುದರ ಸಂಕೇತ?

ಪ್ರತಿ ವರ್ಷವೂ ಭಾರತೀಯರು ರಾವಣನನ್ನು ಸುಡುತ್ತಾರೆ. ಹತ್ತು ತಲೆಗಳುಳ್ಳ ರಾವಣನು ಲಂಕೆಯಲ್ಲಿ ರಾಜನಾಗಿದ್ದನು. ಅವನು ಮಹಾ ರಾಕ್ಷಸ, ಸೀತೆಯನ್ನು ಕದ್ದವನು. ಮತ್ತೊಂದು ಕಡೆ ರಾವಣನು ತುಂಬಾ ದೊಡ್ಡ ವಿದ್ವಾಂಸನಾಗಿದ್ದ. ಆದ್ದರಿಂದ ಅವನ ಕೈಯಲ್ಲಿ ವೇದ ಶಾಸ್ತ್ರಗಳನ್ನು ತೋರಿಸುತ್ತಾರೆ. ಅವನ ತಲೆಯ ಮೇಲಿರುವ ಕಿರೀಟದಲ್ಲಿ ಕತ್ತೆಯ ಸಂಕೇತವಿದೆ. ಅಂದರೆ ಅವನೊಬ್ಬ ಹಠದ ಸ್ವಭಾವ ಹಾಗೂ ಮತಿಹೀನನಾಗಿದ್ದನೆಂದು ಅರ್ಥ ಮಾಡುತ್ತಾರೆ. ಪರಮಾತ್ಮ ಶಿವನು ಹತ್ತು ತಲೆಯುಳ್ಳಂತಹ ಯಾವ ರಾಕ್ಷಸನೂ ಇರಲಿಲ್ಲ. ರಾವಣ ಎಂದರೆ ರಾಕ್ಷಸ ಅಂದರೆ ಪಂಚ ವಿಕಾರಗಳ ಸಂಕೇತ, ಐದು ವಿಕಾರಗಳು ಪುರುಷರಲ್ಲಿ ಮತ್ತು ಐದು ವಿಕಾರಗಳು ಸ್ತ್ರೀಯರಲ್ಲಿವೆ ಎಂಬುದನ್ನು ಪ್ರತ್ಯಕ್ಷಪಡಿಸುತ್ತದೆ. ರಾವಣನು ವಿಕಾರಿ ಸ್ತ್ರೀ-ಪುರುಷ ಸಮಾಜದ ಪ್ರತಿನಿಧಿಯಾಗಿದ್ದಾನೆ. ಈ ಸಮಾಜದಲ್ಲಿ ಅನೇಕರು ಶಾಸ್ತ್ರ ಗ್ರಂಥಗಳನ್ನು ಓದಿದ್ದರೂ, ವಿಜ್ಞಾನದಲ್ಲಿ ಉನ್ನತವಾದ ಪದವಿಯನ್ನು ಪಡೆದುಕೊಂಡಿದ್ದರೂ, ಹಿಂಸೆ ಹಾಗೂ ವಿಕಾರಗಳಿಗೆ ಗುಲಾಮರಾಗಿದ್ದಾರೆ! ಹೀಗೆ ಅವರ ಪಾಂಡಿತ್ಯವು ಕೇವಲ ಅವರ ತಲೆಯ ಮೇಲಿನ ಹೊರೆ ಮಾತ್ರ,. ಅವರು ಮಹಾ ಮೂರ್ಖರಾಗಿದ್ದಾರೆ. ಅವರ ಕಿವಿಗಳಿಗೆ ಸತ್ಯವಾದ ವಿಚಾರಗಳು ಕೇಳುವುದೇ ಇಲ್ಲ! ರಾವಣ ಅಂದರೆ ತಾನೂ ಅತ್ತು, ಅನ್ಯರನ್ನು ಅಳಿಸುವವನು. ಆದ್ದರಿಂದ ರಾವಣನು ಕೆಟ್ಟ ಕರ್ಮಗಳ ಸಂಕೇತವಾಗಿದ್ದಾನೆ!. ಏಕೆಂದರೆ ಇಂದು ಮಾನವರು ಪಾಪಕರ್ಮಗಳಿಂದ ದು:ಖದ-ನೋವಿನ ಕಣ್ಣೀರನ್ನು ಸುರಿಸುತ್ತಿದ್ದಾರೆ. ಸೀತೆಯ ಅಪಹರಣ ಅಂದರೆ ಸತ್ಯವಾಗಿಯೂ ಆತ್ಮದಲ್ಲಿರುವ ಶುದ್ಧ ಭಾವನೆಗಳನ್ನು ಅಪಹರಿಸಿರುವುದರ ಸಂಕೇತವಾಗಿದೆ. ಅದೇ ರೀತಿ ಕುಂಭಕರ್ಣನು ಸೋಮಾರಿತನದ ಪೂರ್ಣ ಪ್ರಮಾಣದ ಸಂಕೇತವಾದರೆ, ಮೇಘನಾದನು ಕಟುವಚನದ ಕರಾಳ ಸಂಕೇತವಾಗಿದ್ದಾನೆ. ಇಂದು ಇಡೀ ಜಗತ್ತೇ ಮಹಾದ್ವೀಪವಾಗಿದೆ ಅಥವಾ ಮಾನವನ ಮನಸ್ಸೇ ಲಂಕೆಯಾಗಿದೆ.

ಈ ಸೃಷ್ಟಿ ಚಕ್ರದ ದ್ವಾಪರ-ಕಲಿಯುಗದ(ರಾವಣ ರಾಜ್ಯ) ಮಾನವರು ವಿಕಾರ(ಮಾಯೆ)ಗಳಿಗೆ ಅಧೀನರಾಗಿದ್ದಾರೆ, ಶಾಸ್ತ್ರಗಳನ್ನು ಓದುತ್ತಿದ್ದಾರೆ, ಪೂಜೆ-ಪಾಠಗಳನ್ನು ಪಠಿಸುತ್ತಿದ್ದಾರೆ. ಆದರೂ ಕೂಡ ವಿಕಾರಿ ಜೀವನದಲ್ಲಿ ಮುಳುಗಿ,ಅಧರ್ಮಿಗಳೂ, ಭ್ರಷ್ಟಾಚಾರಿಗಳು ಆಗಿದ್ದಾರೆ! ಎಲ್ಲೆಡೆ ದುಃಖ, ಅಶಾಂತಿ, ರೋಗ, ಶೋಕಗಳು ವ್ಯಾಪಿಸಿವೆ. ಅನ್ನ ಪಾನೀಯಗಳು ಅಸುರೀಯತೆಯಿಂದ ಕೂಡಿವೆ! ವಿಕಾರಗಳಿಗೆ ಅಧೀನರಾಗಿ ತಾವೂ ದುಃಖಿಗಳಾಗಿ, ಅನ್ಯರಿಗೂ ದು:ಖವನ್ನು ಕೊಡುತ್ತಿದ್ದಾರೆ. ಇದಕ್ಕೆ ವಿರುದ್ಧವಾಗಿ ಸತ್ಯ-ತ್ರೇತಾಯುಗಗಳಲ್ಲಿ ರಾಮರಾಜ್ಯವಿತ್ತು. ಅಂದರೆ ರಾಮ ಅಂದರೆ ರಮಣಿಕನಾದ ಪರಮಾತ್ಮನು ಸುಖದಾತನಾಗಿದ್ದಾನೆ. ಪತಿವ್ರತೆ, ಸುಖ ಶಾಂತಿ, ಸಂತೋಷದಿಂದ ಸಂಪನ್ನವಾದ ದೈವಿ ರಾಜ್ಯವನ್ನು ಮತ್ತೆ ಸ್ಥಾಪಿಸುತ್ತಿದ್ದಾನೆ. ಅಲ್ಲಿ ಹಾಲು-ತುಪ್ಪದ ಹೊಳೆಯೇ ಹರಿಯುತ್ತಿತ್ತು. ಹಸು-ಹುಲಿ ಒಂದೇ ದಡದಲ್ಲಿ ನೀರನ್ನು ಕುಡಿಯುತ್ತಿದ್ದವು ಎಂದಿದ್ದಾರೆ. ಇದೇ 'ರಾಮ ರಾಜ್ಯ'ದ ಸಂಕೇತ.


ಇಂದು ಕೈಗಾರಿಕೆಗಳು ಸಾಕಷ್ಟು ಬೆಳೆದಿವೆ. ಶ್ರೀಮಂತಿಕೆಯೂ ಇದೆ. ಶಿಕ್ಷಣವು ಸಾಕಷ್ಟು ಬೆಳೆದಿದೆ, ಆಸ್ತಿ, ಅಂತಸ್ತು, ಸುಖ ಸಂಪತ್ತುಗಳಿದ್ದರೂ ಕೂಡ ಸತ್ಯವಾದ ಸುಖ, ಶಾಂತಿ ಹಾಗೂ ನೆಮ್ಮದಿಯಿಂದ ವಂಚಿತರಾಗಿದ್ದಾರೆ. ಮನೆ-ಮನೆಯಲ್ಲಿ ಕಲಹ ಕ್ಲೇಷಗಳು, ದು:ಖ, ಅಶಾಂತಿ, ಭ್ರಷ್ಟಾಚಾರ, ಕಲಬೆರಕೆ, ಅಧರ್ಮ, ಅನ್ಯಾಯ, ಅಸತ್ಯಗಳು ವ್ಯಾಪಿಸಿವೆ, ಇದನ್ನೇ ರಾವಣ ರಾಜ್ಯವೆನ್ನುವರು.

ಈಗ ಪರಮ ಪ್ರಿಯ ಪರಮಾತ್ಮನು ಗೀತೆಯಲ್ಲಿ ನೀಡಿರುವ ವಾಗ್ದಾನಕ್ಕನುಸಾರವಾಗಿ ಸತ್ಯ ಗೀತಾಜ್ಞಾನ ಹಾಗೂ ಸಹಜ ರಾಜಯೋಗದ ಶಿಕ್ಷಣವನ್ನು ನೀಡುತ್ತಿದ್ದಾನೆ. ಮಾನವಾತ್ಮರ ಮನೋವಿಕಾರಗಳನ್ನು ನಾಶಗೊಳಿಸಿ ಮತ್ತೆ ದಿವ್ಯಗುಣಗಳನ್ನು ವರದಾನವಾಗಿ ನೀಡುತ್ತಿದ್ದಾನೆ. ಈಗ ಮತ್ತೆ ವಿಶ್ವದಲ್ಲಿ ಪೂಜ್ಯ ಗಾಂಧೀಜಿಯವರ ಕನಸಿನ ರಾಮರಾಜ್ಯವನ್ನು ಸ್ಥಾಪಿಸುತ್ತಿದ್ದಾನೆ. ಆದುದರಿಂದ ಈಗ ನಾವೆಲ್ಲರೂ ಸತ್ಯ ಧರ್ಮ ಹಾಗೂ ನಿರ್ವಿಕಾರಿ ಮಾರ್ಗವನ್ನು ಸ್ವೀಕರಿಸಿ, ಭಾಗ್ಯವಿಧಾತ ಭಗವಂತನ ಈ ಮಹಾನ್ ಇಲ್ಲಿ ಸಹಯೋಗಿಗಳಾಗಬಹುದಲ್ಲವೇ?

## ರಾವಣನಿಗೆ ಹತ್ತು ತಲೆಗಳಿದ್ದವೇನು? ರಾವಣನು ಯಾವುದರ ಸಂಕೇತ?



# ಮಾನವ-ಜೀವನದ ಲಕ್ಷ್ಯವೇನು?



# ಮಾನವ-ಜೀವನದ ಲಕ್ಷ್ಯವೇನು?

ಇಂದು ಮಾನವ ಜೀವನವು ಅತ್ಯಮೂಲ್ಯವಾಗಿದೆ. ಏಕೆಂದರೆ ಈ ಸಂಗಮ ಯುಗದಲ್ಲಿ ಸರ್ವೋತ್ತಮ ಪುರುಷಾರ್ಥವನ್ನು ಮಾಡಿ ಜನ್ಮಜನ್ಮಾಂತರಕ್ಕಾಗಿ ಸರ್ವೋತ್ತಮವಾದ ಭಾಗ್ಯವನ್ನು ಮಾಡಿಕೊಳ್ಳಬಹುದು ಮತ್ತು ಅಕ್ಷಯ ಭಂಡಾರವನ್ನು ಸಂಪಾದಿಸಿಕೊಳ್ಳಬಹುದು. ಈ ಜನ್ಮದಲ್ಲೇ ಜಗತ್ ಜೀತರಾಗುವಂತಹ ಸಾಧನೆ ಮಾಡಬಹುದು. ಆದರೆ ಇಂದು ಮಾನವರಿಗೆ ಲಕ್ಷ್ಯದ ಅರಿವು ಇಲ್ಲದಿರುವುದರಿಂದ ಸರ್ವೋತ್ತಮವಾದ ಪುರುಷಾರ್ಥವನ್ನು ಮಾಡುವುದಕ್ಕೆ ಬದಲಾಗಿ ವಿಷಯ ವಿಕಾರಗಳಲ್ಲಿ ಮುಳುಗಿ ಅಲ್ಪಕಾಲದ ಸುಖದ ಪ್ರಾಪ್ತಿಯನ್ನು ಪಡೆದುಕೊಳ್ಳುವುದರಲ್ಲೇ ಮಗ್ನರಾಗಿ ಬಿಟ್ಟಿದ್ದಾರೆ. ಆದರೆ ಇಂದು ಲೌಕಿಕ ಶಿಕ್ಷಣವನ್ನು ಪಡೆದುಕೊಂಡು ವಕೀಲರು, ಇಂಜಿನಿಯರ್, ಡಾಕ್ಟರ್‌ಗಳಾಗುತ್ತಾರೆ. ರಾಜಕೀಯದಲ್ಲಿ ಭಾಗವಹಿಸಿ ದೇಶದ ನಾಯಕರಾಗಬಹುದು. ಮತ್ತೆ ಕೆಲವರು ಎಲ್ಲವನ್ನು ತ್ಯಾಗ ಮಾಡಿ ಸನ್ಯಾಸಿಗಳಾಗಬಹುದು. ಆದರೆ ಇಂದಿನ ಜೀವನದಲ್ಲಿ ನಿಜವಾದ ಸುಖ ಶಾಂತಿಯು ಯಾರಿಗಾದರೂ ಸಿಕ್ಕಿರುವುದೇನು? ಎಲ್ಲರೂ ದೈಹಿಕವಾಗಿ ರೋಗಿಗಳು, ಮಾನಸಿಕವಾಗಿ ಅಶಾಂತರು, ಹಣದ ಕೊರತೆಯುಳ್ಳವರಾಗಿದ್ದಾರೆ. ಪ್ರಕೃತಿಯ ಪ್ರಕೋಪದಿಂದಲೂ ಒಂದಲ್ಲಾ ಒಂದು ದು:ಖವನ್ನು ಅನುಭವಿಸುತ್ತಿದ್ದಾರೆ. ಆದುದರಿಂದ ಈ ಸಾಧನೆಗಳಿಂದ ಮಾನವನು ಜೀವನದಲ್ಲಿ ಗುರಿಯನ್ನು ಮುಟ್ಟಿದಂತಾಯಿತೇನು? ಏಕೆಂದರೆ ಜೀವನದಲ್ಲಿ ಸಂಪೂರ್ಣವಾದ ಪವಿತ್ರತೆ, ಸುಖ, ಶಾಂತಿ ಹಾಗೂ ಸಂತೋಷದ ಅನುಭವವವನ್ನು ಮಾಡುವುದೇ ನಿಜವಾದ ಲಕ್ಷ್ಯ(ಗುರಿ)ವಾಗಿದೆ.

ಚಿತ್ರದಲ್ಲಿ ತೋರಿಸಿರುವಂತೆ ಮಾನವಾತ್ಮನ ಜೀವನದ ಲಕ್ಷ್ಯವೇನೆಂದರೆ ಜೀವನ್ಮುಕ್ತಿಯ ಪ್ರಾಪ್ತಿ ಅಥವಾ ಸ್ವರ್ಗದಲ್ಲಿ ಸಂಪೂರ್ಣ ಸುಖ-ಶಾಂತಿಯಿಂದ ಸಂಪನ್ನರಾದ ಶ್ರೀನಾರಾಯಣ ಅಥವಾ ಶ್ರೀ ಲಕ್ಷ್ಮಿ ಪದವಿಯನ್ನು ಪ್ರಾಪ್ತಿ ಮಾಡಿಕೊಳ್ಳುವುದು. ಏಕೆಂದರೆ ರಾಮರಾಜ್ಯದಲ್ಲಿ ದೇವತೆಗಳು ಅಮರರಾಗಿರುತ್ತಾರೆ. ಅವರಿಗೆ ಯಾವುದೇ ಕೊರತೆ ಇರುವುದಿಲ್ಲ. ಅವರು ಸಂಪೂರ್ಣ ಆರೋಗ್ಯ, ಆಯಸ್ಸು ಹಾಗೂ ಐಶ್ವರ್ಯಶಾಲಿಗಳಾಗಿರುತ್ತಾರೆ. ಪರಮಾತ್ಮನ ಶಿಕ್ಷಣದಿಂದ ಈ ಪದವಿಗೆ ಬೇಕಾದ ಲಕ್ಷಣವು ಪ್ರಾಪ್ತಿಯಾಗುತ್ತದೆ.

ಈ ಪ್ರಾಪ್ತಿಯನ್ನು ಯಾವುದೇ ಮನುಷ್ಯಾತ್ಮರು ಮಾಡಿಸಲಾರರು. ಪರಮಪ್ರಿಯ ಪರಮಾತ್ಮ ಶಿವನು ಪ್ರಜಾಪಿತ ಬ್ರಹ್ಮಾರವರ ಮುಖಾಂತರ ನೀಡುತ್ತಿರುವ ಈಶ್ವರೀಯ ಜ್ಞಾನ ಹಾಗೂ ಸಹಜ ರಾಜಯೋಗದ ಶಿಕ್ಷಣದ ಅಭ್ಯಾಸವನ್ನು ಮಾಡುತ್ತಾ, ಎಲ್ಲಾ ನರ-ನಾರಿಯರು ಮನೆಯಲ್ಲೇ ಇದ್ದುಕೊಂಡು, ಕಾರ್ಯವ್ಯವಹಾರವನ್ನು ಮಾಡುತಿದ್ದರೂ ಪ್ರತಿದಿನವೂ 1-2 ಗಂಟೆಗಳ ಕಾಲ ಬಿಡುವು ಮಾಡಿಕೊಂಡು, ತಮಗಾಗಿ, ತಮ್ಮ ಪರಿವಾರಕ್ಕಾಗಿ, ತಮ್ಮ ಮಕ್ಕಳಿಗಾಗಿ, ತಮ್ಮ ಆರೋಗ್ಯಕ್ಕಾಗಿ, ತಮ್ಮ ಭವಿಷ್ಯಕ್ಕಾಗಿ ಕಲ್ಯಾಣ ಮಾಡಿಕೊಳ್ಳಲು ಸರ್ವೋತ್ತಮವಾದ ಸಮಯ ಅಂದರೆ ಇದೊಂದೇ ಆಗಿದೆ!

ಈ ಶಿಕ್ಷಣವನ್ನು ಪಡೆಯಲು ಯಾವುದೇ ಬಗೆಯ ಫೀಸಿನ ಅಗತ್ಯವಿಲ್ಲ. ಆದುದರಿಂದ ಬಡವರು, ಮಕ್ಕಳು ಹಾಗು ಮಹಿಳೆಯರೂ, ಮುದುಕರೂ, ಅವಿದ್ಯಾವಂತರೂ ಒಟ್ಟಿನಲ್ಲಿ ಇದನ್ನು ಪಡೆದುಕೊಳ್ಳಲು ಎಲ್ಲರಿಗೂ ಅಧಿಕಾರವಿದೆ. ಏಕೆಂದರೆ ಆತ್ಮದ ದೃಷ್ಟಿಯಿಂದ ಎಲ್ಲರೂ ಪರಮಾತ್ಮನ ಸಂತಾನರಲ್ಲವೇ? ಇದು ಅಮೂಲ್ಯವಾದ ಸಮಯ ಹಾಗೂ ಅಂತಿಮ ಜನ್ಮ. ಇಲ್ಲಿ ಅತ್ಯದ್ಭುತವಾದ ಸಾಧನೆ ಮಾಡಬಹುದು!! ಈಗ ಮಾಡಲಿಲ್ಲವೆಂದರೆ ಇನ್ನೆಂದಿಗೂ ಮಾಡಲಾಗುವುದಿಲ್ಲ!! ಏಕೆಂದರೆ ಸ್ವಯಂ ಜ್ಞಾನಸಾಗರ ಪರಮಾತ್ಮನಿಂದ ಪ್ರಾಪ್ತಿಯಾಗುತ್ತಿರುವ ಸತ್ಯವಾದ ಗೀತಾಜ್ಞಾನವು ಕಲ್ಪದಲ್ಲಿ ಒಮ್ಮೆ ಮಾತ್ರ ಈ ಕಲ್ಯಾಣಕಾರಿ ಸಂಗಮಯುಗದಲ್ಲಿ ವರದಾನವಾಗಿ ಸಿಗುತ್ತಿದೆ!!

# ಭವಿಷ್ಯದಲ್ಲಿ ಶ್ರೀ ಕೃಷ್ಣನು ಬರುತ್ತಿದ್ದಾನೆ

ಪ್ರತಿದಿನವೂ ವರ್ತಮಾನ ಪತ್ರಿಕೆಗಳಲ್ಲಿ, ಭ್ರಷ್ಟಾಚಾರ, ಅತ್ಯಾಚಾರ, ಅನಾಚಾರ, ಕೊಲೆ, ಮೋಸ, ಪ್ರವಾಹ, ಜಗಳ ಹಾಗೂ ,ಯುದ್ಧ ಇತ್ಯಾದಿಗಳ ಸಮಾಚಾರವು ಕೇಳಿ ಬರುತ್ತಿದೆ. ಪ್ರಕೃತಿಯ ಐದು ತತ್ವಗಳೂ ಕೂಡ ಮನುಷ್ಯಾತ್ಮರಿಗೆ ದು:ಖವನ್ನು ಕೊಡುತ್ತಿವೆ. ಎಲ್ಲಾ ಬಗೆಯ ಮಾಲಿನ್ಯವು ಹೆಚ್ಚುತ್ತಿದೆ. ವಿಕಾರಗಳು, ದುರ್ವ್ಯಸನ ಹಾಗೂ ಅಧರ್ಮಗಳು ಮಿತಿಮೀರುತ್ತಿವೆ. ಆದುದರಿಂದ ಈ ಜಗತ್ತು ಮುಳ್ಳಿನ ಕಾಡಾಗಿದೆ. ಒಂದು ಕಾಲದಲ್ಲಿ ಸಂಪೂರ್ಣವಾದ ಸುಖ-ಶಾಂತಿಯ ಸಾಮ್ರಾಜ್ಯವಿತ್ತು. ಅದನ್ನು 'ಹೂವಿನ ತೋಟ'ವೆಂದು ಕರೆಯುತ್ತಾರೆ. ಪ್ರಕೃತಿಯು ಸತೋಪ್ರಧಾನವಾಗಿತ್ತು. ಮಾನವನು ದೈವಿಗುಣಗಳಿಂದ ಸಂಪನ್ನನಾಗಿದ್ದು, ಸದಾ ಸಂತೋಷದಿಂದಿರುತ್ತಿದ್ದನು. ಇದೇ ಸತಯುಗ ಅಥವಾ ಸ್ವರ್ಗವಾಗಿತ್ತು. ಅಂದು ರಾಜರೂ ಮತ್ತು ಪ್ರಜೆಗಳು ಎಲ್ಲರೂ ಪವಿತ್ರತೆ ಹಾಗೂ ಶ್ರೇಷ್ಠಾಚಾರಿಗಳಾಗಿದ್ದರು. ಅವರ ತಲೆಯ ಮೇಲೆ ರತ್ನ ಖಚಿತವಾದ ಕಿರೀಟದ ಜೊತೆಗೆ ಪವಿತ್ರತೆಯ ಕಿರೀಟವೂ ಇತ್ತು. ಶ್ರೀ ರಾಧಾ ಮತ್ತು ಶ್ರೀ ಕೃಷ್ಣರು ಸತಯುಗದ ಪ್ರಪ್ರಥಮ ಮಹಾ ರಾಜಕುಮಾರ-ಮಹಾರಾಜ ಕುಮಾರಿಯರು ಸ್ವಯಂವರದ ನಂತರ ಅವರೇ ಶ್ರೀ ಲಕ್ಷ್ಮಿ ಮತ್ತು ಶ್ರೀ ನಾರಾಯಣ- ವಿಶ್ವ ಮಹಾರಾಣಿ ಹಾಗೂ ವಿಶ್ವ ಮಹಾರಾಜರು ಆದರು. ಅಲ್ಲಿ ಸಂಪೂರ್ಣ ಅಹಿಂಸಕರೂ, ನಿರ್ವಿಕಾರಿಗಳೂ, ಮರ್ಯಾದಾ ಪುರುಷೋತ್ತಮರೂ ಆಗಿದ್ದರು. ಆದ್ದರಿಂದ ಅವರನ್ನು ದೇವತೆಗಳು ಎಂದು ಕರೆದರು. ಇವರುಗಳ ಹೋಲಿಕೆಯಲ್ಲಿ ಇಂದಿನ ಮಾನವರು ವಿಕಾರಿಗಳೂ, ದು:ಖಿ, ಅಶಾಂತರೂ ಆಗಿದ್ದಾರೆ. ಆದ್ದರಿಂದ ಇಂದಿನ ಜಗತ್ತು ರೌರವ ನರಕವಾಗಿದೆ. ಅಂದರೆ ಎಲ್ಲರೂ ಮಾಯಾಧೀನರಾಗಿದ್ದಾರೆ.

ಈ ಸಂಗಮ ಯುಗದಲ್ಲಿ ಪರಮಪಿತ, ಪರಮ ಶಿಕ್ಷಕ, ಪರಮ ಸದ್ಗುರು, ಪರಮ ಮಿತ್ರನಾದ ಶಿವ ಪರಮಾತ್ಮನು, 'ಹೇ ಮಕ್ಕಳೇ, ನಮ್ಮನ್ನು ದು:ಖ ಅಶಾಂತಿಯಿಂದ ಬಿಡಿಸಿ, ನಮ್ಮನ್ನು ಮುಕ್ತಿ ಅಥವಾ ಸ್ವರ್ಗಕ್ಕೆ ಕರೆದುಕೊಂಡು ಹೋಗು ಎಂದು ಕರೆಯುತ್ತಿದ್ದಿರಿ. ಈಗ ನಾನು ಮುಕ್ತಿಗೆ ಕರೆದೊಯ್ಯಲು ಬಂದಿದ್ದೇನೆ. ಈ ಜಗತ್ತನ್ನು ಪಾವನ ಮಾಡಲು ಬಂದಿದ್ದೇನೆ. ಮಕ್ಕಳೇ, ಇಂದು ಎಲ್ಲರ ಜನ್ಮವು ಅಮೂಲ್ಯವೂ ಹಾಗೂ ಅಂತಿಮವೂ ಆಗಿದೆ. ಮುಂಬರುವ ಸತಯುಗಕ್ಕೆ ಹೋಗಲು ಸಿದ್ಧರಾಗಿ. ಅಂದರೆ ಪವಿತ್ರರೂ, ಯೋಗಯುಕ್ತರೂ ಆಗಿರಿ. ಏಕೆಂದರೆ ಭವಿಷ್ಯದಲ್ಲಿ ಶ್ರೀ ಕೃಷ್ಣನ ರಾಜ್ಯವು ಬರುತ್ತಿದೆ. ಮತೊಂದು ಕಡೆ ಗೃಹಯುದ್ಧ, ಪ್ರಾಕೃತಿಕ ಪ್ರಕೋಪ, ಅಣ್ವಸ್ತ್ರಗಳು ಮಹಾ ವಿನಾಶಕ್ಕಾಗಿ ಕಾತರಿಸುತ್ತಿವೆ. ಚಿತ್ರದಲ್ಲಿ ವಿಶ್ವದ ಗೋಲದ ಮೇಲೆ ಮಧುರವಾದ ಮುರುಳಿಯನ್ನು ನುಡಿಸುತ್ತಿರುವ ಶ್ರೀ ಕೃಷ್ಣನನ್ನು ತೋರಿಸಲಾಗಿದೆ ಅಂದರೆ ಸಮಸ್ತ ವಿಶ್ವವು ಶ್ರೀ ಕೃಷ್ಣನೊಬ್ಬನ ಅಧಿಕಾರದಲ್ಲಿರುತ್ತದೆ. ಅಲ್ಲಿ ಒಂದೇ ಧರ್ಮ, ಒಂದೇ ಭಾಷೆ, ಒಂದೇ ಮತವಿರುತ್ತದೆ. ಮುರುಳಿಯು ಸಂಪೂರ್ಣ ಸುಖ-ಸಮೃದ್ಧಿ-ಸಂತಸದ ಸಂಕೇತವಾಗಿದೆ.


ಅನೇಕರು ಶ್ರೀ ಕೃಷ್ಣನು ದ್ವಾಪರದ ಅಂತಿಮದಲ್ಲಿದ್ದನು ಎನ್ನುತ್ತಾರೆ. ಆದರೆ ಶ್ರೀ ಕೃಷ್ಣನು ಸರ್ವಗುಣ ಸಂಪನ್ನ, ಸಂಪೂರ್ಣ ನಿರ್ವಿಕಾರಿ, ಅಹಿಂಸಾ ಪರಮೋಧರ್ಮಿ, ಮರ್ಯಾದಾ ಪುರುಷೊತ್ತಮ, 16 ಕಲಾ ಸಂಪನ್ನ ಹಾಗೂ ಸಂಪೂರ್ಣ ಪವಿತ್ರನಾಗಿದ್ದನು. ಆದ್ದರಿಂದ ಅವನ ಜನ್ಮವು ದ್ವಾಪರ ಯುಗದ ರಜೋ ಪ್ರಧಾನವಾದ ಜಗತ್ತಿನಲ್ಲಾಗಲು ಸಾಧ್ಯವಿಲ್ಲ. ಶ್ರೀ ಕೃಷ್ಣನ ದರ್ಶನಕ್ಕಾಗಿ ಸೂರದಾಸನು ತನ್ನ ಅಪವಿತ್ರ ದೃಷ್ಟಿಯನ್ನು ತೆಗೆಸಿಹಾಕಿದನು. ಶ್ರೀ ಕೃಷ್ಣನ ಅನನ್ಯ ಭಕ್ತಳಾದ ಮೀರಾಬಾಯಿಯು ಪವಿತ್ರ ಜೀವನವನ್ನು ನಡೆಸಲು ವಿಷವನ್ನು ಸೇವಿಸಲು ಸಿದ್ಧಳಾಗಿ ನಿಂತಳು. ಅಂದಮೇಲೆ ಅಪವಿತ್ರ ದೃಷ್ಟಿ-ವೃತ್ತಿಯ ಸೃಷ್ಟಿಯಲ್ಲಿ ದೇವತಾ ಶ್ರೀ ಕೃಷ್ಣನು ಹೇಗೆ ತಾನೆ ಹುಟ್ಟಿ ಬರಲು ಸಾಧ್ಯ?. ಶ್ರೀ ಕೃಷ್ಣನು ಸ್ವಯಂವರದ ನಂತರ ಶ್ರೀ ನಾರಾಯಣನಾದನು. ಅದುದರಿಂದಲೇ ಎಲ್ಲಿಯೂ ಶ್ರೀ ಕೃಷ್ಣನ ವೃದ್ಧಾವಸ್ಥೆಯ ಚಿತ್ರವಿಲ್ಲ. ಆದುದರಿಂದ ಶ್ರೀ ಕೃಷ್ಣ ಅಂದರೆ ಶ್ರೀ ನಾರಾಯಣನು ಸತಯುಗೀ ಪಾವನ ಸೃಷ್ಟಿಯ ಆರಂಭದಲ್ಲಿ ಮತ್ತೆ ಬರಲಿದ್ದಾನೆ.

# ಭವಿಷ್ಯದಲ್ಲಿ ಶ್ರೀ ಕೃಷ್ಣನು ಬರುತ್ತಿದ್ದಾನೆ



# ಸರ್ವಶಾಸ್ತ್ರ ಶಿರೋಮಣಿ ಶ್ರೀಮದ್‌ಭಗವದ್ಗೀತೆಯ ಜ್ಞಾನದಾತನು ಯಾರು?

## श्री कृष्ण देवता और शिव परमात्मा हैं
## SHRI KRISHNA IS A DEITY & SHIVA IS GOD



# ಸರ್ವಶಾಸ್ತ್ರ ಶಿರೋಮಣಿ ಶ್ರೀಮದ್‌ಭಗವದ್ಗೀತೆಯ ಜ್ಞಾನದಾತನು ಯಾರು?

ಪರಮಪ್ರಿಯ ಪರಮಪಿತ ಶಿವನು ಜ್ಞಾನ ಸಾಗರನೂ, ಕಲ್ಯಾಣಕಾರಿಯೂ ಆಗಿದ್ದಾನೆ. ಮಾನವರ ಕಲ್ಯಾಣಕ್ಕಾಗಿ ಜ್ಞಾನವನ್ನಿತ್ತನು. ಅದು ಯಾವ ಶಾಸ್ತ್ರವೆಂದು ಯಾರಿಗೂ ಗೊತ್ತಿಲ್ಲದಿರುವುದು ಆಶ್ಚರ್ಯಕರವಾದ ಸಂಗತಿಯಾಗಿದೆ. ಭಾರತದಲ್ಲಿ ಗೀತಾ ಜ್ಞಾನವನ್ನು ಭಗವಂತನೇ ತಿಳಿಸಿದನೆಂದು ಎಲ್ಲರೂ ಹೇಳುತ್ತಾರೆ. ಆದರೆ ಇಂದು ಗೀತಾ ಜ್ಞಾನವನ್ನು ಶ್ರೀ ಕೃಷ್ಣನು ದ್ವಾಪರ ಯುಗದ ಅಂತಿಮದಲ್ಲಿ ಯುದ್ಧದ ಮೈದಾನದಲ್ಲಿ ಅರ್ಜುನನ ರಥದಲ್ಲಿ ಕುಳಿತು ನೀಡಿದನೆಂದು ಎಲ್ಲರೂ ಹೇಳುತ್ತಾರೆ.

ಚಿತ್ರದಲ್ಲಿ ಅದ್ಭುತವಾದ ಈ ರಹಸ್ಯವನ್ನು ಸ್ಪಷ್ಟೀಕರಿಸಲಾಗಿದೆ. ಗೀತಾಜ್ಞಾನವನ್ನು ನಿರಾಕಾರನಾದ ಪರಮ ಪ್ರಿಯ ಪರಮಾತ್ಮನು ನೀಡಿದನು, ಇದರಿಂದ ಶ್ರೀ ಕೃಷ್ಣನು ಸತ್ಯಯುಗದಲ್ಲಿ ಜನ್ಮವನ್ನು ಪಡೆದುಕೊಂಡನು. ಗೋಪೇಶ್ವರನಾದ ಪರಮಾತ್ಮ ಶಿವನು ಶ್ರೀ ಕೃಷ್ಣನಿಗೂ ಪಾರಲೌಕಿಕ ತಂದೆಯಾಗಿದ್ದಾನೆ ಮತ್ತು ಗೀತೆಯೇ ಶ್ರೀ ಕೃಷ್ಣನ ತಾಯಿಯಾಗಿದೆ.....ಎಂತಹ ಅದ್ಭುತವಾದ ಸತ್ಯ.

ಜಗತ್ತಿನಲ್ಲಿ ಮತ್ತೆ ಧರ್ಮ ಸ್ಥಾಪನೆ ಮಾಡಬೇಕೆಂಬ ಉದ್ದೇಶದಿಂದ ಗೀತೆಯನ್ನು ಕರುಣಿಸಲಾಯಿತು ಎಂದು ಎಲ್ಲರೂ ಒಪ್ಪುತ್ತಾರೆ. ನಾನು ಅಧರ್ಮವನ್ನು ವಿನಾಶಗೊಳಿಸಿ, ಸದ್ಧರ್ಮವನ್ನು ಸ್ಥಾಪಿಸಲು ಅವತರಿಸುತ್ತೇನೆ ಎಂದು ಗೀತೆಯಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾನೆ. ಆದ್ದರಿಂದ ಭಗವಂತನು ಅವತರಿಸುವುದು ಹಾಗೂ ಗೀತಾಜ್ಞಾನವನ್ನು ಕರುಣಿಸುವುದು ನಂತರ ದೈವೀ ರಾಜ್ಯದ ಸ್ಥಾಪನೆಯಾಗುವುದು ಎಲ್ಲರಿಗೂ ಗೊತ್ತಿದೆ. ಹಾಗೂ ಎಲ್ಲರೂ ಒಪ್ಪಿದ್ದಾರೆ, ಅಂದರೆ ದ್ವಾಪರ ಯುಗದ ನಂತರ ಕಲಿಯುಗವು ಬರುತ್ತದೆ. ಇಲ್ಲಿ ಹೆಚ್ಚು ಧರ್ಮಗ್ಲಾನಿಯಾಗಿರುತ್ತದೆ. ಮನುಷ್ಯಾತ್ಮರ ಸ್ವಭಾವವು ತಮೋ ಪ್ರಧಾನ ಅಥವಾ ಆಸುರಿಯಾಗಿರುತ್ತದೆ. ದ್ವಾಪರದ ಅಂತ್ಯದಲ್ಲಿ ಗೀತಾ ಜ್ಞಾನವನ್ನಿತ್ತನು ಎಂದರೆ...ಸ್ವಲ್ಪ ಯೋಚಿಸಿ ನೋಡಿ..... ಏನೆಂದರೆ ಗೀತಾ ಜ್ಞಾನವನ್ನು ಭಗವಂತನು ನೀಡಿದ ನಂತರ ಅಧರ್ಮದ ಯುಗವು ಬರುವುದೇನು? ಇದು ಭಗವಂತನು ಅವತರಿಸಿದುದರ ಫಲವೇನು? ಈಗಲಾದರೂ ಸತ್ಯವನ್ನು ಅರಿತು ವಿಜಯಿಗಳಾಗಬಹುದಲ್ಲವೆ?

ಭಗವಂತನು ಅವತರಿಸಿದ ನಂತರ ಕಲಿಯುಗದ ಆರಂಭವಾಯಿತೆಂದು ಹೇಳುವುದು ಭಗವಂತನಿಗೆ ನಿಂದಿಸಿದಂತಾಗುವುದಿಲ್ಲವೆ? ಅವತಾರ ಅಂದರೆ ಅಸುರಿ ಶಕ್ತಿಗಳನ್ನು ನಾಶ ಮಾಡಿ, ಸದ್ಧರ್ಮದ ಸಂಪೂರ್ಣ ಕಲೆಯನ್ನು ಸ್ಥಾಪಿಸುತ್ತಾನೆ. ನರನಿಂದ ನಾರಾಯಣನನ್ನಾಗಿ ಮಾಡಿ ಮಾನವತ್ಮರಿಗೆ ಸದ್ಗತಿಯನ್ನು ನೀಡುತ್ತಾನೆ. ಅವನೇ ಈ ಸೃಷ್ಟಿಯ ಬೀಜ ಸ್ವರೂಪಿ. ಆದ್ದರಿಂದ ಭಗವಂತನು ಅವತರಿಸಿದ ನಂತರ ಹೊಸ ಸೃಷ್ಟಿಯ ವೃಕ್ಷ ಅಂದರೆ ಸತಯುಗೀ ಸೃಷ್ಟಿಯು ಆರಂಭವಾಗುತ್ತದೆ. ಹಾಗೇನಾದರೂ ದ್ವಾಪರದ ಅಂತಿಮದಲ್ಲಿ ಅವತರಿಸಿದನು ಅಂದರೆ ಕಲಿಯುಗದ ತಮೋಪ್ರಧಾನವಾದ ಕಾಲದಲ್ಲಿ ಭಗವಂತನ ಭಾಗ್ಯವನ್ನು ಅನುಭವಿಸುವುದಕ್ಕಾಗುವುದಿಲ್ಲ. ಇಂದೂ ಕೂಡ ದೀಪಾವಳಿಯಲ್ಲಿ ಶ್ರೀ ಲಕ್ಷ್ಮಿಯನ್ನು ಆಹ್ವಾನಿಸಲು ತಮ್ಮ ಮನೆಯನ್ನು ಸ್ವಚ್ಛಗೊಳಿಸಿ ದೀಪವನ್ನು ಹಚ್ಚುವರು. ಅಪವಿತ್ರತೆ ಹಾಗೂ ಅಂಧಕಾರದಲ್ಲಿ ದೇವತೆಗಳು ಕಾಲಿಡುವುದಿಲ್ಲವೆಂಬ ಮಾತು ಇದರಿಂದಲೂ ಸ್ಪಷ್ಟವಾಗುತ್ತದೆ. ಆದುದರಿಂದ ಶ್ರೀ ಕೃಷ್ಣನ ಜನ್ಮವು ದ್ವಾಪರದಲ್ಲಿ..ಅಲ್ಲ...ಸತಯುಗದಲ್ಲಾಗುತ್ತದೆ. ಏಕೆಂದರೆ ಆಗ ಸೃಷ್ಟಿಯು ಸತೋಪ್ರಧಾನವಾಗಿತ್ತು. ಎಲ್ಲರ ಆತ್ಮ ಜ್ಯೋತಿಯು ಜಾಗೃತವಾಗಿತ್ತು..

ಇದರಿಂದ ಶ್ರೀಕೃಷ್ಣನು ದ್ವಾಪರ ಯುಗದಲ್ಲಿ ಬರಲಿಲ್ಲ ಹಾಗೂ ಗೀತಾ ಜ್ಞಾನವನ್ನು ದ್ವಾಪರ ಯುಗದ ಅಂತ್ಯದಲ್ಲಿ ನೀಡಲಿಲ್ಲ. ಆದರೆ ನಿರಾಕಾರನಾದ ಪರಮಾತ್ಮ ಶಿವನು ಕಲಿಯುಗದ ಅಂತ್ಯ ಹಾಗೂ ಸತಯುಗದ ಆದಿಯಾದ ಸಂಗಮ ಯುಗದಲ್ಲಿ ಅತಿ ಧರ್ಮಗ್ಲಾನಿಯಾದಾಗ, ಬ್ರಹ್ಮಾರವರಲ್ಲಿ ಅವತರಿಸಿ, ಗೀತಾಜ್ಞಾನವನ್ನಿತ್ತು, ಸತಯುಗವನ್ನು ಸ್ಥಾಪಿಸಿ ಮತ್ತೆ ಶ್ರೀ ಕೃಷ್ಣನಿಗಾಗಿ ಸ್ವರಾಜ್ಯವನ್ನು ಸ್ಥಾಪಿಸಿದನು. ಶ್ರೀ ಕೃಷ್ಣನಿಗೆ ತನ್ನ ದೈಹಿಕ ಮಾತಾ-ಪಿತಾ, ಶಿಕ್ಷಕ ಹಾಗೂ ಸದ್ಗುರು ಇದ್ದರು. ಆದರೆ ಪರಮಾತ್ಮ ಶಿವನು ಸರ್ವ ಆತ್ಮಗಳ ಮಾತಾ-ಪಿತ, ಪರಮ ಶಿಕ್ಷಕ ಹಾಗೂ ಪರಮ ಸದ್ಗುರುವಾಗಿ ಗೀತಾ ಜ್ಞಾನವನ್ನಿತ್ತನು.

# ಗೀತಾಜ್ಞಾನವನ್ನು ಹಿಂಸಾತ್ಮಕವಾದ ಯುದ್ಧವನ್ನು ಮಾಡಲು ದಯಪಾಲಿಸಲಿಲ್ಲ

ಇಂದು ಪರಮಾತ್ಮನ ದಿವ್ಯ ಜನ್ಮ ಹಾಗೂ ರಥದ ಬಗ್ಗೆ ಸರಿಯಾದ ಅರಿವು ಇಲ್ಲದೇ ಇರುವುದರಿಂದ ಜನರು ಶ್ರೀ ಕೃಷ್ಣನು ಅರ್ಜುನನ ರಥದಲ್ಲಿ ಕುಳಿತು ಯುದ್ಧದ ಮೈದಾನದಲ್ಲಿ ಗೀತಾ ಜ್ಞಾನವನ್ನಿತ್ತನೆಂದು ಎಲ್ಲರೂ ನಂಬಿಕೊಂಡಿದ್ದಾರೆ. ಅಹಿಂಸೆಯೇ ಪರಮ ಧರ್ಮವೆಂದು ಎಲ್ಲರೂ ಒಪ್ಪಿದ್ದಾರೆ. ಧರ್ಮಾತ್ಮರು, ಮಹಾತ್ಮರು ಅಹಿಂಸೆಯನ್ನೇ ಬೋಧಿಸುತ್ತಾರೆ. ಹಾಗೂ ಪಾಲಿಸುತ್ತಾರೆ. ಅಂದಮೇಲೆ ಭಗವಂತನು ಹಿಂಸಾತ್ಮಕವಾದ ಯುದ್ಧವನ್ನು ಮಾಡಲು ಶಿಕ್ಷಣವನ್ನು ಕೊಡುವನೇನು? ಲೌಕಿಕ ಮಾತಾ-ಪಿತರು ಕೂಡ ಪರಸ್ಪರ ಜಗಳವಾಡಬಾರದು ಎಂದೇ ಹೇಳಿಕೊಡುತ್ತಾರೆ. ಸೃಷ್ಟಿಯ ಪರಮಪಿತ, ಶಾಂತ ಸಾಗರನಾದ ಪರಮಾತ್ಮನು ಯುದ್ಧ ಮಾಡಿಸುವನೇನು? ಇಲ್ಲ... ಖಂಡಿತಾ ಇಲ್ಲ.. ಈ ಮಾತನ್ನು ಎಂದಿಗೂ ಯಾರೂ ಒಪ್ಪುವುದಿಲ್ಲ.... ಭಗಂತನು ದೈವಿ ಸ್ವಭಾವದ ಸಂಪ್ರದಾಯವನ್ನು ಹಾಗೂ ಸರ್ವೋತ್ತಮವಾದ ಧರ್ಮವನ್ನು ಸ್ಥಾಪಿಸಲು ಹಾಗೂ ಮಾನವನು ರಾಗ-ದ್ವೇಷ, ಹಿಂಸೆ, ಕ್ರೋಧಗಳ ಮೇಲೆ ವಿಜಯಗಳಿಸಲೆಂದು ಗೀತಾ ಜ್ಞಾನವನ್ನಿತ್ತನು ಎಂಬ ಸತ್ಯವು ಎಲ್ಲರಿಗೂ ಅರ್ಥವಾಗುತ್ತದೆ.

ಆದುದರಿಂದ ವಾಸ್ತವಿಕವಾಗಿ ನಿರಾಕಾರ ಪರಮಪಿತ ಶಿವನು ಈ ಸೃಷ್ಟಿ ಎಂಬ ಕರ್ಮಕ್ಷೇತ್ರ ಅಥವಾ ಕುರುಕ್ಷೇತ್ರದಲ್ಲಿ, ಪ್ರಜಾಪಿತ ಬ್ರಹ್ಮಾರವರ ದೇಹವೆಂಬ ರಥದಲ್ಲಿ ಕುಳಿತು ಮಾಯೆ ಅಥವಾ ವಿಕಾರಗಳ ಜೊತೆ ಯುದ್ಧ ಮಾಡಲು ಶಿಕ್ಷಣವನ್ನಿತ್ತನು. ಆದರೆ ಲೇಖಕನು ಕಾಲಕ್ರಮೇಣ ಅಲಂಕಾರಿಕ ಭಾಷೆಯಲ್ಲಿ ಇದನ್ನು ವರ್ಣನೆ ಮಾಡಿದನು ಹಾಗೂ ಚಿತ್ರಕಾರನು ನಂತರ ಶರೀರವನ್ನು ರಥದ ರೂಪದಲ್ಲಿ ಚಿತ್ರಿಸಿ ಪ್ರಜಾಪಿತ ಬ್ರಹ್ಮಾರವರ ಆತ್ಮವನ್ನು ಆ ರಥದಲ್ಲಿ ಒಬ್ಬ ಮನುಷ್ಯ (ಅರ್ಜುನ)ನ ರೂಪದಲ್ಲಿ ಚಿತ್ರಿಸಿದನು. ನಂತರ ವಾಸ್ತವಿಕ ರಹಸ್ಯವು ಲುಪ್ತವಾಯಿತು ಮತ್ತು ವಾಚ್ಯಾರ್ಥವು ಪ್ರತ್ಯಕ್ಷವಾಯಿತು..

ಸಂಗಮ ಯುಗದಲ್ಲಿ ಭಗವಾನ್ ಶಿವನು ಪ್ರಜಾಪಿತ ಬ್ರಹ್ಮಾರವರ ದೇಹವೆಂಬ ರಥದಲ್ಲಿ ಅವತರಿಸಿ ಜ್ಞಾನವನ್ನಿತ್ತನು ಮತ್ತು ಧರ್ಮವನ್ನು ಸ್ಥಾಪಿಸಿದನು. ನಂತರ ಕಲಿಯುಗಿ ಸೃಷ್ಟಿಯು ಮಹಾವಿನಾಶವಾಗಿ ಸತಯುಗವು ಸ್ಥಾಪನೆಯಾಯಿತು. ಈ ಎಲ್ಲಾ ಮಹಾನ್ ಪರಿವರ್ತನೆಯ ನಂತರ ಈ ಸತ್ಯವಾದ ರಹಸ್ಯವು ಪ್ರಾಯಃಲೋಪವಾಯಿತು. ಮತ್ತು ದ್ವಾಪರ ಯುಗದ ಭಕ್ತಿಯ ಕಾಲದಲ್ಲಿ ಗೀತೆಯು ಬರೆಯಲ್ಪಟ್ಟಿತು. ಹಿಂದಿನ ಸಂಗಮದಲ್ಲಿ ನಡೆದ ಘಟನೆಯನ್ನು ವ್ಯಾಸರು ವರ್ತಮಾನ ಕಾಲವೆಂದು ಬಳಸಿದರು..ಕಾಲ ಚಕ್ರವು ಉರುಳಿದಂತೆ ವ್ಯಾಸರು ತಮ್ಮ ಜೀವನ ಕಾಲದಲ್ಲಿ ಅಂದರೆ ದ್ವಾಪರ ಯುಗದಲ್ಲಿ ಗೀತಾ ಜ್ಞಾನವನ್ನು ಬರೆದರೆಂದು ಎಲ್ಲರೂ ಒಪ್ಪಿದ್ದಾರೆ. ಈ ಮರೆವಿನಿಂದ ಜಗತ್ತಿಗೆ ತುಂಬಾ ನಷ್ಟವಾಯಿತು ಏಕೆಂದರೆ ಹಾಗೇನಾದರೂ ಜನರು ಗೀತಾ ಜ್ಞಾನವನ್ನು ಶ್ರೀಕೃಷ್ಣನಿಗೂ ಪಾರಲೌಕಿಕ ತಂದೆಯಾದ ನಿರಾಕಾರ ಪರಮಾತ್ಮ ಶಿವನು ನೀಡಿದನೆಂದು ಗೊತ್ತಾಗಿದ್ದರೆ. ಎಲ್ಲಾ ಧರ್ಮದ ಅನುಯಾಯಿಗಳಿಗೂ ಪರಮ ಪೂಜ್ಯ , ಸರ್ವರ ಸದ್ಗತಿದಾತ, ರಾಜ್ಯದ ಭಾಗ್ಯವನ್ನೀಯುವನೆಂಬ ಅರಿವಾಗಿದ್ದರೆ, ಗೀತೆಯನ್ನು ಜಗತ್ತಿನ 'ಸರ್ವೋತ್ತಮ ಶಾಸ್ತ್ರವೆಂದು ಎಲ್ಲರೂ ಒಪ್ಪುತ್ತಿದ್ದರು. ಆ ಮಹಾ ವಾಕ್ಯಗಳನ್ನು 'ಪರಮಾತ್ಮನ ಮಹಾವಾಕ್ಯ'ವೆಂದು ಎಲ್ಲರೂ ಸ್ವೀಕರಿಸುತ್ತಿದ್ದರು. ಭಾರತವನ್ನು 'ಸರ್ವೋತ್ತಮವಾದ ತೀರ್ಥಸ್ಥಾನ'ವೆಂದೂ ಹಾಗೂ 'ಶಿವ ಜಯಂತಿ'ಯನ್ನು 'ಗೀತಾ ಜಯಂತಿ'ಯ ರೂಪದಲ್ಲಿ ಮತ್ತು ಗೀತಾ ಜಯಂತಿಯನ್ನು ಶಿವ ಜಯಂತಿಯ ರೂಪದಲ್ಲಿ ಆಚರಿಸುತ್ತಿದ್ದರು. ಪರಮ ಜ್ಯೋತಿ ಶಿವ ಪರಮಾತ್ಮನನ್ನೇ ನೆನಪು ಮಾಡುತ್ತಿದ್ದರು.... ಅವನಿಂದ ಪವಿತ್ರತೆ, ಸುಖ ಮತ್ತು ಶಾಂತಿಯ ಆಸ್ತಿಯನ್ನು ಪಡೆದುಕೊಳ್ಳುತ್ತಿದ್ದರು.

ಆದರೆ ಮೇಲಿನ ಸತ್ಯವಾದ ರಹಸ್ಯವು ಮರೆತು ಹೋದುದರಿಂದ ಗೀತಾ ಮಾತೆಯ ಪತಿ ಸರ್ವಮಾನ್ಯನೂ ಹಾಗೂ ಸರ್ವಶ್ರೇಷ್ಠನೂ ಆದ ನಿರಾಕಾರ ಪರಮಾತ್ಮನ ಸ್ಥಾನದಲ್ಲಿ ಗೀತಾ ಪುತ್ರನಾದ ದೇವತಾ ಶ್ರೀಕೃಷ್ಣನ ಹೆಸರು ಬರೆದಿದ್ದರಿಂದ ಗೀತೆಯು ತನ್ನ ಮಹಾನ್ ಗೌರವವನ್ನು ಕಳೆದುಕೊಂಡಿತು. ಜಗತ್ತಿನಲ್ಲಿ ಘೋರವಾದ ಅನರ್ಥ, ಪಾಪಾಚಾರ, ಭ್ರಷ್ಟಾಚಾರಗಳು ಅತಿಯಾದವು. ಪರಮಾತ್ಮ ಶಿವನ ಆಜ್ಞೆಯಾದ 'ಮನ್‌ಮನಾಭವ' ಅಂದರೆ ನನ್ನೊಬ್ಬನನ್ನೇ ನೆನಪು ಮಾಡಿ ಎಂಬ ಮಾತನ್ನು ಮರೆತಿದ್ದರಿಂದ ಬುದ್ಧಿಯು ಮಲೀನವಾಗಿ ಹೋಯಿತು. ಈಗಲಾದರೂ ಮತ್ತೆ ಮೇಲಿನ ರಹಸ್ಯವನ್ನು ಅರಿತುಕೊಂಡು ಪರಮಾತ್ಮ ಶಿವನನ್ನು ಅರ್ಥಸಹಿತವಾಗಿ ನೆನಪು ಮಾಡಿ ಮತ್ತೆ ಈ ಭಾರತವನ್ನು ಸುಖದಾಮ (ಸ್ವರ್ಗ)ವನ್ನಾಗಿ ಮಾಡಲು ಕಂಕಣ ಬದ್ಧರಾಗಬಹುದಲ್ಲವೇ?

# ಗೀತಾಜ್ಞಾನವನ್ನು ಹಿಂಸಾತ್ಮಕವಾದ ಯುದ್ಧವನ್ನು ಮಾಡಲು ದಯಪಾಲಿಸಲಿಲ್ಲ



# ಜೀವನವನ್ನು ಕಮಲದ ಪುಷ್ಪದಂತೆ ಮಾಡಿಕೊಳ್ಳುವುದು ಹೇಗೆ?



# ಜೀವನವನ್ನು ಕಮಲದ ಪುಷ್ಪದಂತೆ ಮಾಡಿಕೊಳ್ಳುವುದು ಹೇಗೆ?

ಸ್ನೇಹ ಮತ್ತು ಸೌಹಾರ್ಧತೆಯ ಅಭಾವದಿಂದ ಇಂದು ಮಾನವನು ಮನೆಯನ್ನು, ಮನೆಯಂತೆ ಅನುಭವ ಮಾಡುತ್ತಿಲ್ಲ. ಒಂದು ಸಣ್ಣದಾದ ಕಾರಣಕ್ಕಾಗಿ ಮನೆಯ ವಾತಾವರಣವು ಕೆಡುತ್ತಿದೆ. ಮಾನವನಲ್ಲಿ ಇಂದು ಪ್ರಾಮಾಣಿಕತೆ ಹಾಗೂ ವಿಶ್ವಾಸವು ಅಸ್ಥಿರವಾಗಿದೆ. ನೈತಿಕ ಮೌಲ್ಯಗಳ ಕೊರತೆಯು ಎದ್ದು ಕಾಣುತ್ತಿದೆ. ಮನೆಯಾಗಿರಲಿ, ಕಛೇರಿಯಾಗಿರಲಿ, ಪ್ರತಿಯೊಂದು ಕ್ಷೇತ್ರದಲ್ಲೂ ಪರಸ್ಪರ ಸಂಬಂಧಗಳ ಸುಧಾರಣೆಯಾಗದೆ, ಹೊಂದಾಣಿಕೆಯಿಲ್ಲದೆ ಹೋರಾಟವು ನಡೆಯುತ್ತಿದೆ. ತನ್ನ ಸ್ಥಿತಿಯನ್ನು ನಿರ್ದೋಷ ಹಾಗೂ ಸಮತೋಲನೆಯಾಗಿಟ್ಟುಕೊಳ್ಳಲು ಮಾನವನಿಗೆ ಇಂದು ಮನೋಬಲದ ಅವಶ್ಯಕತೆ ಇದೆ. ಇದಕ್ಕಾಗಿ ರಾಜಯೋಗವು ಸಹಕಾರ ನೀಡುತ್ತಿದೆ.

ಇಂದು ಬ್ರಹ್ಮಾಕುಮಾರ-ಕುಮಾರಿಯರು ಅನ್ಯರಿಗೆ ಶಾಂತಿಯ ಮಾರ್ಗದ ಅನುಭೂತಿ ಮಾಡಿಸುವುದೂ ಕೂಡ ಒಂದು ಮಹಾ ಸೇವೆ ಅಥವಾ ಕರ್ತವ್ಯವೆಂದು ನಂಬಿದ್ದಾರೆ. ಪವಿತ್ರ ಜೀವನದ ಫಲವೇ ಶಾಂತಿ ಎಂದು ಜನರಿಗೆ ಅರಿವು ಮಾಡಿಸುತ್ತಿದ್ದಾರೆ. ಜೊತೆಗೆ ಪವಿತ್ರತೆ ಹಾಗೂ ಶಾಂತಿಗಾಗಿ ಪರಮಪ್ರಿಯ ಪರಮಾತ್ಮನ ಪರಿಚಯ ಹಾಗೂ ಅವನ ಜೊತೆ ಮಾನಸಿಕ ಸಂಬಂಧವನ್ನು ಬೆಸೆದುಕೊಳ್ಳುವುದು ಅತಿ ಅಗತ್ಯವೆಂದೇ ಹೇಳುತ್ತಾರೆ. ಅದಕ್ಕಾಗಿ ಈಶ್ವರೀಯ ವಿಶ್ವವಿದ್ಯಾಲಯಕ್ಕೆ ಆಹ್ವಾನಿಸುತ್ತಾರೆ. ಇಲ್ಲಿ ಅಗತ್ಯವಾದ ಗೀತಾ ಜ್ಞಾನ ಮತ್ತು ರಾಜಯೋಗವನ್ನು ಅಭ್ಯಾಸ ಮಾಡುವುದು ಹೇಗೆ? ಇದರಿಂದ ಜೀವನವನ್ನು ಕಮಲದ ಪುಷ್ಪದಂತೆ ಮಾಡಿಕೊಳ್ಳುವುದು ಹೇಗೆ? ಎಂದು ಅಭ್ಯಾಸ ಮಾಡಿಸುತ್ತಾಗೆ. ಈ ಜ್ಞಾನ ಮತ್ತು ರಾಜಯೋಗದ ಅಭ್ಯಾಸದಿಂದ ಅವರು ಕಾರ್ಯಾಲಯದಲ್ಲಿರಲೀ, ಮನೆಯಲ್ಲಿರಲಿ ಎಲ್ಲೇ ಇದ್ದರೂ ಶಾಂತಿ ಸಾಗರ ಪರಮಾತ್ಮನ ಜೊತೆ ಸ್ನೇಹದ ಸಂಬಂಧವನ್ನಿಟ್ಟುಕೊಳ್ಳುತ್ತಾರೆ. ಇದರಿಂದ ಇಡೀ ಪರಿವಾರದವರು ಶಾಂತಿ ಹಾಗೂ ಸಂತೋಷದಿಂದಿರುತ್ತಾರೆ. ಆಗಲೇ ಪರಿವಾರದಲ್ಲಿ ವ್ಯವಸ್ಥಿತವಾದ ಹಾಗೂ ಸಂಘಟಿತವಾದ ಭಾವನೆಗಳು ಬರುತ್ತವೆ.

ದಿವ್ಯಜ್ಞಾನದ ಅನುಭೂತಿಯಿಂದ ಮಾನವನು ವಿಕಾರಗಳನ್ನು ತ್ಯಜಿಸಿ ದಿವ್ಯಗುಣಗಳಿಂದ ಸಂಪನ್ನನಾಗುತ್ತಾನೆ. ಅದಕ್ಕಾಗಿ ಮನೋಬಲವು ಬೇಕು. ಅದು ಭಗವಂತನು ಕಲಿಸುತ್ತಿರುವ ರಾಜಯೋಗದಿಂದ ಮಾತ್ರ ಪ್ರಾಪ್ತಿಯಾಗುತ್ತದೆ. ಈ ರೀತಿ ಮಾನವನು ತನ್ನ ಜೀವನವನ್ನು ಕಮಲದ ಹೂವಿನಂತೆ ಮಾಡಿಕೊಳ್ಳಲು ಸಮರ್ಥನಾಗುತ್ತಾನೆ.

ಕಮಲದ ಹೂವಿನ ವಿಶೇಷತೆ ಅಂದರೆ ನೀರಿನಲ್ಲಿದ್ದರೂ ಅದು ಅದರಿಂದ ಭಿನ್ನವಾಗಿರುತ್ತದೆ. ಅಷ್ಟೆ ಅಲ್ಲ ಕಮಲದ ಇನ್ನಿತರ ಸಂಬಂಧಿಗಳಾದ ದಂಟು, ಎಲೆ, ಬೇರು ಎಲ್ಲದರಿಂದಲೂ ಭಿನ್ನವಾಗಿರುತ್ತದೆ. ಅದೇ ರೀತಿ ನಾವು ಕೂಡ ಮಿತ್ರ-ಸಂಬಂಧಿಗಳ ಜೊತೆಯಲ್ಲಿದ್ದರೂ ಭಿನ್ನರೂ ಅಂದರೆ ಮೋಹ ಜೀತರೂ ಆಗಬಹುದು.

ಕೆಲವರು ಗೃಹಸ್ಥದಲ್ಲಿ ಈ ರೀತಿ ಇರಲು ಸಾಧ್ಯವೇ ಇಲ್ಲವೆಂದು ಹೇಳಿಬಿಡುತ್ತಾರೆ. ಉದಾ : ಆಸ್ಪತ್ರೆಯಲ್ಲಿ ದಾಯಿಯು ಅನೇಕ ಮಕ್ಕಳನ್ನು ನೋಡಿಕೊಳ್ಳುತ್ತಿದ್ದರೂ ಅವರ್‍ಯಾರ ಜೊತೆಯಲ್ಲೂ ಮೋಹವಿರುವುದಿಲ್ಲ. ಹಾಗೆಯೇ ನಾವು ಕೂಡ ಎಲ್ಲರನ್ನೂ ಪರಮಾತ್ಮನ ಮಕ್ಕಳೆಂದು ತಿಳಿದುಕೊಂಡು ನಿಮಿತ್ತರಾಗಿ ವ್ಯವಹರಿಸುವ ಅಭ್ಯಾಸವಾಗಿಬಿಡುತ್ತದೆ. ಮತ್ತೊಂದು ಉದಾ : ನ್ಯಾಯಾಧೀಶರು ಸುಖ ಅಥವಾ ದು:ಖದ ನಿರ್ಣಯವನ್ನಿತ್ತರೂ, ಅವರು ಯಾರ ಪ್ರಭಾವಕ್ಕೂ ಒಳಗಾಗುವುದಿಲ್ಲ. ಹಾಗೆಯೇ ನಾವುಗಳೂ ಕೂಡ ಸುಖ-ದು:ಖದ ಪರಿಸ್ಥಿತಿಗಳು ಬಂದರೂ ಸಾಕ್ಷಿ ಸ್ಥಿತಿಯಲ್ಲಿರುವುದನ್ನು ರಾಜಯೋಗದ ಅಭ್ಯಾಸದಿಂದ ಕಲಿಯಬಹುದು.

# ರಾಜಯೋಗದ ಆಧಾರ ಮತ್ತು ವಿಧಿ

ಮಾನವನು ಸಂಪೂರ್ಣ ಸ್ಥಿತಿಯನ್ನೂ ಹಾಗೂ ಆಧ್ಯಾತ್ಮಿಕವಾಗಿ ಉನ್ನತಿಯನ್ನು ಬಹುಬೇಗ ಪಡೆಯಲು ರಾಜಯೋಗವನ್ನು ನಿರಂತರವಾಗಿ ಅಭ್ಯಾಸ ಮಾಡಬೇಕಾದ ಅಗತ್ಯವಿದೆ. ಅಂದರೆ ಏನೇ ಕಾರ್ಯ ವ್ಯವಹಾರಗಳನ್ನು ಮಾಡುತ್ತಿದ್ದರೂ, ಓಡಾಡುತಿದ್ದರೂ ಪರಮಾತ್ಮನನ್ನು ನೆನಪು ಮಾಡುವುದು ಅತಿ ಅಗತ್ಯ.

ಅಂದರೆ ನಿರಂತರವಾಗಿ ಯೋಗವನ್ನು ಮಾಡುವುದರಿಂದ ತುಂಬಾ ಲಾಭವಿದೆ ಮತ್ತು ಸರ್ವೋತ್ತಮ ಸ್ಥಿತಿಯನ್ನು ಪ್ರಾಪ್ತಿ ಮಾಡಿಕೊಳ್ಳಬಹುದು. ಅದಕ್ಕಾಗಿ ವಿಶೇಷವಾಗಿ ಯೋಗದ ಅಭ್ಯಾಸವನ್ನು ಅಳವಡಿಸಿಕೊಳ್ಳಬೇಕಾಗಿದೆ. ಆದುದರಿಂದ ಚಿತ್ರದಲ್ಲಿ ತೋರಿಸಿರುವಂತೆ ನಮ್ಮ ಬುದ್ಧಿಯನ್ನು ಎಲ್ಲಾ ಕಡೆಗಳಿಂದಲೂ ಬಿಡಿಸಿ ಜ್ಯೋತಿರ್ ಬಿಂದು ಪರಮಾತ್ಮನೊಬ್ಬನಲ್ಲಿಡಬೇಕು. ಮನಸ್ಸು ಚಂಚಲವಾಗಿರುವುದರಿಂದ ಕಾಮ, ಕ್ರೋಧ, ಲೋಭ, ಮೋಹ, ಅಹಂಕಾರ ಹಾಗೂ ಶಾಸ್ತ್ರಗಳ ಕಡೆಗೆ ಓಡುತ್ತದೆ. ಆದರೆ ಅಭ್ಯಾಸ ಮಾಡಿದಾಗ ಪರಮಾತ್ಮನಲ್ಲೇ ಸ್ಥಿರಗೊಳಿಸಬಹುದು. ದೇಹ ಸಹಿತ ದೇಹದ ಸರ್ವ ಸಂಬಂಧವನ್ನು ಮರೆತು ಆತ್ಮ ಸ್ವರೂಪದಲ್ಲಿ ಸ್ಥಿತರಾಗಿ, ಬುದ್ಧಿಯಲ್ಲಿ ಪರಮಜ್ಯೋತಿ ಶಿವ ಪರಮಾತ್ಮನನ್ನು ಪ್ರೀತಿಯಿಂದ ನೆನಪು ಮಾಡುವುದೇ ನಿಜವಾದ ರಾಜಯೋಗ.

ಅನೇಕರು ರಾಜಯೋಗವನ್ನು ಕಷ್ಟವೆಂದು ಹೇಳುತ್ತಾರೆ.ಏಕೆಂದರೆ ಅವರು ಅನೇಕ ಬಗೆಯ ಆಸನ ಹಾಗೂ ಪ್ರಾಣಾಯಾಮಗಳ ಅಭ್ಯಾಸ ಮಾಡಿರುತ್ತಾರೆ. ಆದರೆ ಈ ಯೋಗವು ತುಂಬಾ ಸಹಜ. ಉದಾ: ಒಂದು ಮಗುವು ತನ್ನ ದೇಹಧಾರಿ ತಂದೆಯನ್ನು ತುಂಬಾ ಸಹಜವಾಗಿ ತಾನಾಗಿಯೇ ನೆನಪು ಮಾಡುತ್ತದೆ. ಹಾಗೆಯೇ ಆತ್ಮಗಳ ತಂದೆ ಪರಮಾತ್ಮನ ನೆನಪೂ ಕೂಡ ತುಂಬಾ ಸಹಜ ಹಾಗೂ ತಾನಾಗಿಯೇ ನೆನಪಿಗೆ ಬರಬೇಕು. ಈ ಅಭ್ಯಾಸಕ್ಕಾಗಿ–ನಾನು ಒಂದು ಆತ್ಮನಾಗಿದ್ದೇನೆ, ನಾನು ಜ್ಯೋತಿ ಬಿಂದು ಪರಮಾತ್ಮ ಶಿವನ ಅವಿನಾಶಿ ಸಂತಾನನಾಗಿದ್ದೇನೆ. ಪರಮಾತ್ಮನು ಬ್ರಹ್ಮ ಲೋಕ ನಿವಾಸಿಯಾಗಿದ್ದಾನೆ. ಶಾಂತ ಸಾಗರ, ಆನಂದ ಸಾಗರ, ಪ್ರೇಮ ಸಾಗರ, ಸರ್ವ ಶಕ್ತಿವಂತ ನಾಗಿದ್ದಾನೆ.......... ಹೀಗೆ ಚಿಂತನೆ ಮಾಡುತ್ತಾ ಬುದ್ಧಿಯನ್ನು ಬ್ರಹ್ಮ ಲೋಕದಲ್ಲಿರುವ ಪರಮಾತ್ಮನಲ್ಲಿ ನಿಲ್ಲಿಸಬೇಕು. ಮತ್ತು ಪರಮಾತ್ಮನ ದಿವ್ಯಗುಣ ಹಾಗೂ ಕರ್ತವ್ಯಗಳನ್ನು ನೆನಪು ಮಾಡುವ ಅಭ್ಯಾಸವನ್ನು ಬೆಳೆಸಿಕೊಳ್ಳಬೇಕು.


ಮನಸ್ಸು ಹೀಗೆ ನೆನಪಿನಲ್ಲಿ ಮಗ್ನವಾದಾಗ ಜಗತ್ತಿನ ಸಂಬಂಧಗಳ ಹಾಗೂ ವಸ್ತುಗಳ ಆಕರ್ಷಣೆಯಾಗುವುದಿಲ್ಲ. ಪರಮಾತ್ಮನು ಕಲಿಸುತ್ತಿರುವ ಜ್ಞಾನದ ಬಗ್ಗೆ ನಿಶ್ಚಯವಾದಷ್ಟು, ಜಗತ್ತಿನ ವಿಚಾರಗಳು ಹಾಗೂ ಸಂಬಂಧಗಳು ಮನಸ್ಸಿಗೆ ಬರುವುದಿಲ್ಲ. ಜೊತೆಗೆ ಸ್ವ ಸ್ವರೂಪದ ಹಾಗೂ ಪರಮಪ್ರಿಯ ಪರಮಾತ್ಮನ ಗುಣಗಳ ಅನುಭವವಾಗುವುದು.

ಅನೇಕರು ನಮ್ಮ ಮನಸ್ಸು ಪರಮಾತ್ಮನಲ್ಲಿ ನಿಲ್ಲುತ್ತಿಲ್ಲವೆನ್ನುತ್ತಾರೆ. ಇದಕ್ಕೆ ಮೂಲ ಕಾರಣ ಆತ್ಮ ನಿಶ್ಚಯದ ಸ್ಥಿತಿಯ ಅಭಾವವೆನ್ನಬಹುದು. ಉದಾ: ಎರಡು ವಿದ್ಯುತ್ ತಂತಿಗಳನ್ನು ಸೇರಿಸಲು ಮೊದಲಿಗೆ ಅದರ ಮೇಲಿನ ರಬ್ಬರನ್ನು ತೆಗೆದುಹಾಕಬೇಕು. ಆಗ ವಿದ್ಯುತ್ ಪ್ರವಹಿಸುತ್ತದೆ. ಅದೇರೀತಿ ದೇಹಾಭಿಮಾನದಿಂದ ಮುಕ್ತರಾದಾಗ , ಅವ್ಯಕ್ತ ಅನುಭೂತಿಯಾದಾಗ ಸಹಜವಾಗಿ ಪರಮಾತ್ಮನಲ್ಲಿ ಸಂಬಂಧವು ಬೆಳೆಯುತ್ತದೆ.


ಎರಡನೇ ಮಾತು, ಪರಮಾತ್ಮನನ್ನು ಸರ್ವವ್ಯಾಪಿ ಮತ್ತು ನಾಮ–ರೂಪಗಳಿಂದ ಭಿನ್ನನಾಗಿದ್ದಾನೆ ಎಂದು ತಿಳಿದು ಕೊಂಡಿರುವುದರಿಂದ ಮನಸ್ಸಿಗೆ ನೆಲೆ ಸಿಗುವುದಿಲ್ಲ, ಅದಕ್ಕಾಗಿ ಪರಮಾತ್ಮನ ಪೂರ್ಣ ಪರಿಚಯವಾದಾಗ ಮನಸ್ಸು ಸ್ಥಿರವಾಗಿ ನಿಲ್ಲುತ್ತದೆ.

ಮೂರನೇ ಮಾತು, ಪರಮಾತ್ಮ ತಂದೆಯ ಜೊತೆ ಅತಿ ಹತ್ತಿರದ ಸ್ನೇಹ–ಸಂಬಂಧದ ಅಗತ್ಯವಿದೆ. ಈ ಜ್ಞಾನವು ನಮ್ಮ ಬುದ್ಧಿಗೆ ಎಷ್ಟು ಅರ್ಥವಾಗುತ್ತದೋ ಅಷ್ಟೇ ಅನುಭೂತಿಯು ಹೆಚ್ಚಾಗುತ್ತದೆ.

# ರಾಜಯೋಗದ ಆಧಾರ ಮತ್ತು ವಿಧಿ



# ರಾಜಯೋಗದ ಅಧಾರ ಸ್ಥಂಭ ಅಥವಾ ನಿಯಮ



# ರಾಜಯೋಗದ ಅಧಾರ ಸ್ಥಂಭ ಅಥವಾ ನಿಯಮ

ವಾಸ್ತವಿಕವಾಗಿ ಯೋಗ ಅಂದರೆ ಜ್ಞಾನಸಾಗರ, ಶಾಂತಸಾಗರ. . . .ಪರಮಪಿತ ಶಿವನ ಜೊತೆ ಆತ್ಮದ ಸಂಬಂಧವನ್ನು ಬೆಳೆಸುವುದು. ಆಗಲೇ ಆತ್ಮಕ್ಕೆ ಶಾಂತಿ, ಆನಂದ, ಪವಿತ್ರತೆ ಇತ್ಯಾದಿ ದಿವ್ಯಗುಣಗಳು ಪ್ರಾಪ್ತಿಯಾಗುತ್ತವೆ.

ಯೋಗಾಭ್ಯಾಸವನ್ನು ಸಹಜ ಮಾಡಿಕೊಳ್ಳಲು ಕೆಲವು ನಿಯಮಗಳೂ ಬೇಕಾಗಿವೆ. ಅಂದರೆ ಯೋಗದ ಉದ್ದೇಶ–ಮಾನಸಿಕ ಸ್ವಚ್ಛತೆ, ದೃಷ್ಟಿಕೋಣದಲ್ಲಿ ಪರಿವರ್ತನೆ, ಚಿತ್ತವನ್ನು ಸದಾ ಪ್ರಸನ್ನವಾಗಿಟ್ಟುಕೊಳ್ಳುವುದು. ಜೊತೆಗೆ ಯೋಗದಲ್ಲಿ ಉನ್ನತ ಸ್ಥಿತಿಯನ್ನು ಅನುಭೂತಿ ಮಾಡಲು ಕೆಲವು ವಿಧಿಗಳನ್ನು ಅನುಸರಿಸುವುದು ಅತಿ ಅಗತ್ಯ.

ಇದರಲ್ಲಿ ಒಂದು – ಪವಿತ್ರತೆ ಅಥವಾ ಬ್ರಹ್ಮಚರ್ಯ , ಯೋಗಿಯ ಮನಸ್ಸು ದೈಹಿಕ ಸೌಂದರ್ಯ ಅಥವಾ ವಾಸನೆಗಳ ಆಕರ್ಷಣೆಗೊಳಗಾಗುವುದಿಲ್ಲ. ಏಕೆಂದರೆ ಅವನ ದೃಷ್ಟಿಕೋಣವು ಬದಲಾಗಿದೆ. ಅವನು ಆತ್ಮದ ಸುಂದರತೆಯ ಕಡೆಗೆ ಗಮನ ಹರಿಸುತ್ತಾನೆ. ಅವನ ಮನಸ್ಸು ಬ್ರಹ್ಮದಲ್ಲಿ ಸ್ಥಿರವಾಗುತ್ತದೆ. ದೇಹವನ್ನು ಮರೆತು ವಿದೇಹಿ ಸ್ಥಿತಿಯ ಅನುಭವ ಮಾಡುತ್ತಾನೆ. ಎಲ್ಲರನ್ನೂ ಸಹೋದರ–ಸಹೋದರ ದೃಷ್ಟಿಯಲ್ಲಿ ನೋಡುತ್ತಾನೆ. ಅಂದರೆ ಅತ್ಮೀಯ ಪ್ರೀತಿ ಹಾಗೂ ಆನಂದದ ಅನುಭೂತಿ ಮಾಡುತ್ತಾನೆ. ಇದೇ ಬ್ರಹ್ಮಚರ್ಯದ ವಾಸ್ತವಿಕ ಅರ್ಥ. ಇಲ್ಲಿ ಆತ್ಮಿಕ ಸ್ಮೃತಿ ಮತ್ತು ಬ್ರಹ್ಮಚರ್ಯದಿಂದ ಮಾನಸಿಕ ಶಕ್ತಿ, ಕಾರ್ಯದಕ್ಷತೆ, ನೈತಿಕ ಬಲ ಹಾಗೂ ಆತ್ಮಿಕ ಶಕ್ತಿಯು ಹೆಚ್ಚುತ್ತದೆ. ಮನೋಬಲವು ವೃದ್ಧಿಯಾಗುತ್ತದೆ. ಮಾನಸಿಕ ಸಮತೋಲನೆ ಹಾಗೂ ಕುಶಲತೆಯು ಬೆಳೆಯುತ್ತದೆ.

ಎರಡು– ಸಾತ್ವಿಕ ಆಹಾರ. ಮಾನವನು ಎಂತಹ ಆಹಾರವನ್ನು ಸೇವಿಸುವನೋ ಅವನ ಮೆದುಳಿನ ಮೇಲೆ ಅಂತದೇ ಪ್ರಭಾವವು ಬೀರುತ್ತದೆ. ಆದುದರಿಂದ ಯೋಗಿಯು ಮಾಂಸ, ಮಧ್ಯಪಾನ, ತಂಬಾಕು, ಮೊಟ್ಟೆ ಇತ್ಯಾದಿಗಳನ್ನು ಸೇವಿಸುವುದಿಲ್ಲ. ತನ್ನ ಹೊಟ್ಟೆ(ಸ್ಮಶನದ ಕಟ್ಟೆ)ಯನ್ನು ಸಾಕಲು ಅನ್ಯ ಪ್ರಾಣಿಗಳನ್ನು ಕೊಲೆ ಮಾಡುವುದಿಲ್ಲ ಹಾಗೂ ಅನೈತಿಕವಾಗಿ ಹಣವನ್ನು ಸಂಪಾದಿಸುವುದಿಲ್ಲ. ಅವನು ಪ್ರತಿ ನಿತ್ಯವು ಸಾತ್ವಿಕ ಆಹಾರವನ್ನು ಭಗವಂತನಿಗೆ ನೈವೇದ್ಯದ ರೂಪದಲ್ಲಿ ಅರ್ಪಿಸಿ ಅದನ್ನು ಪ್ರಸಾದದಂತೆ ಸ್ವೀಕರಿಸುವನು. ಭಗವದರ್ಪಣೆ ಮಾಡಿದ ಆಹಾರವನ್ನು ಸೇವಿಸುವುದರಿಂದ ಮನಸ್ಸಿಗೆ ಶಾಂತಿ, ಪವಿತ್ರತೆ ದೊರೆಯುತ್ತದೆ. 'ಅನ್ನದಂತೆ ಮನಸ್ಸು' ಎಂಬ ಲೋಕೋಕ್ತಿಗನುಸಾರವಾಗಿ ಅವನ ಮನಸ್ಸು ಶುದ್ಧವಾಗುತ್ತದೆ. ಅವನಲ್ಲಿ ಕಲ್ಯಾಣದ ಭಾವನೆ ಹಾಗೂ ಶುಭ ಭಾವನೆಯು ಬೆಳೆಯುತ್ತದೆ.

ಮೂರು– ಸತ್ಸಂಗ, 'ಸಂಗದಂತೆ ಸ್ವಭಾವ' ವೆನ್ನುತ್ತಾರೆ. ಇದಕ್ಕನುಸಾರವಾಗಿ ಯೋಗಿಯು ಸದಾ ಸತ್–ಚಿತ್–ಆನಂದ ಸ್ವರೂಪಿ ಪರಮಾತ್ಮನ ಸಂಗದಲ್ಲಿರುತ್ತಾನೆ. ಅವನು ಎಂದಿಗೂ ಕುಸಂಗ, ಕುವಿಚಾರ ಅಶ್ಲೀಲ ಸಾಹಿತ್ಯಗಳಲ್ಲಿ ಮನಸ್ಸನ್ನು ಇಡುವುದಿಲ್ಲ. ಪರಮಾತ್ಮನೊಬ್ಬನ ನೆನಪಿನಲ್ಲಿ ಮಗ್ನನಾಗಿರುತ್ತಾನೆ. ಅಜ್ಞಾನಿ, ವಿಕಾರಿ, ಮಿಥ್ಯಾಭಿಮಾನಿಗಳಾದ ಯಾವ ದೇಹದಾರಿಗಳನ್ನು ನೆನಪು ಮಾಡುವುದಿಲ್ಲ.

ನಾಲ್ಕು– ದಿವ್ಯ ಗುಣ. ಯೋಗಿಯು ಸದಾ ಅನ್ಯ ಆತ್ಮಗಳನ್ನು ತನ್ನ ದಿವ್ಯಗುಣ, ದಿವ್ಯ ವಿಚಾರ, ದಿವ್ಯ ಕರ್ಮಗಳಿಂದ (ಅಗರಭತ್ತಿಯ ಪರಿಮಳದಂತೆ) ಎಲ್ಲರಿಗೂ ಪ್ರೇರಣೆ ನೀಡುತ್ತಾನೆ. ನಮ್ರತೆ, ಸಂತೋಷ, ಅಂತರ್ಮುಖತೆ, ಗಂಭೀರತೆ,ಸರಳತೆ ಇತ್ಯಾದಿ ದಿವ್ಯಗುಣಗಳಿಂದ ಸಂಪನ್ನನಾಗಿರುತ್ತಾನೆ.

ಯೋಗಿಯು ಸದಾ ಈ ಗುಣಗಳನ್ನು ಅಳವಡಿಸಿಕೊಳ್ಳುತ್ತಾ ದು:ಖ, ಅಶಾಂತಿ ಹಾಗೂ ಅಲೆಯುತ್ತಿರುವ ಆತ್ಮಗಳಿಗೆ ಗುಣಗಳನ್ನು ದಾನಮಾಡುತ್ತಾ, ಅನ್ಯರಿಗೂ ಸತ್ಯವಾದ ಸುಖ–ಶಾಂತಿಯನ್ನು ಪ್ರಾಪ್ತಿ ಮಾಡಿಸುತ್ತಾನೆ. ಈ ನಿಯಮಗಳನ್ನು ಪಾಲಿಸುವುದರಿಂದ ಮಾನವನು ಸತ್ಯವಾದ ಯೋಗಿ ಜೀವನವನ್ನು ಅನುಭವ ಮಾಡುತ್ತಾನೆ. ರೋಗ–ಶೋಕ–ದು:ಖ–ಅಶಾಂತಿಗಳಿಂದ ಮುಕ್ತನಾಗುತ್ತಾ ಹೋಗುತ್ತಾನೆ.

# ರಾಜಯೋಗದಿಂದ ಪ್ರಾಪ್ತಿ- ಅಷ್ಟ ಶಕ್ತಿಗಳು

ರಾಜ ಯೋಗದ ಅಭ್ಯಾಸದಿಂದ ಅಂದರೆ ಮನಸ್ಸಿನ ಸಂಬಂಧವನ್ನು 'ಸತ್ಯಂ ಶಿವಂ ಸುಂದರಂ' ಭಗವಂತನೊಡನೆ ಬೆಸದುಕೊಂಡಾಗ ಅವಿನಾಶಿಯಾದ ಸುಖ-ಶಾಂತಿಯು ಪ್ರಾಪ್ತಿಯಾಗುತ್ತದೆ. ಜೊತೆಗೆ ಅನೇಕ ಬಗೆಯ ಅಧ್ಯಾತ್ಮಿಕ ಶಕ್ತಿಗಳು ಪ್ರಾಪ್ತಿಯಾಗುತ್ತವೆ. ಇದರಲ್ಲಿ ಮಹತ್ವ ಪೂರ್ಣವಾದ ಎಂಟು ಶಕ್ತಿಗಳು ಪ್ರಾಪ್ತಿಯಾಗುತ್ತವೆ.

೧. ಸಂಕುಚಿತ ಮತ್ತು ವಿಸ್ತರಿಸುವ ಶಕ್ತಿ :- ಆಮೆಯು ತನ್ನ ಇಂದ್ರಿಯಗಳನ್ನು ಒಳಕ್ಕೆ ಸೆಳೆದುಕೊಳ್ಳುತ್ತದೆ. ಬೇಕೆಂದಾಗ ಹೊರಕ್ಕೆ ಹಾಕುತ್ತದೆ. ಹಾಗೆಯೇ ರಾಜ ಯೋಗಿಯು ಇಚ್ಛೆಗನುಸಾರವಾಗಿ ಕರ್ಮೇಂದ್ರಿಯಗಳಿಂದ ಕರ್ಮ ಮಾಡುತ್ತಾನೆ. ಬೇಡವೆಂದಾಗ ವಿದೇಹಿ ಹಾಗೂ ಶಾಂತಸ್ಥಿತಿಯಲ್ಲಿರುತ್ತಾನೆ. ಈ ಸ್ಥಿತಿಯಲ್ಲಿದ್ದರೆ ಮಾಯೆಯ ಪ್ರಭಾವವಿರುವುದಿಲ್ಲ.

೨. ಸಂಕ್ಷಿಪ್ತಗೊಳಿಸುವ ಶಕ್ತಿ:- ಈ ಜಗತ್ತು ಒಂದು ಪ್ರವಾಸಿ ಮಂದಿರವಿದ್ದಂತೆ. ಕೆಲವರು ವ್ಯವಹಾರಿಕ ಜೀವನದಲ್ಲಿ ತಮ್ಮ ಬುದ್ಧಿಯನ್ನು ಎಷ್ಟು ವಿಸ್ತಾರಗೊಳಿಸುತ್ತಾರೆ ಅಂದರೆ ಬುದ್ಧಿಯನ್ನು ಸಂಕ್ಷಿಪ್ತಗೊಳಿಸಿಕೊಳ್ಳಲು ಪ್ರಯತ್ನಿಸಿದರೂ ಆಗುವುದಿಲ್ಲ. ಆದರೆ ಯೋಗಿಯು ಇದೇ ಪ್ರಪಂಚದಲ್ಲಿ ಇದ್ದರೂ ತನ್ನ ಬುದ್ಧಿಯನ್ನು ಆತ್ಮಿಕ ಸ್ಥಿತಿಯಲ್ಲಿದ್ದುಕೊಂಡು ಸರ್ವಶಕ್ತಿವಾನ್ ಪರಮಾತ್ಮನಲ್ಲಿಡುತ್ತಾನೆ. ಅವನು ಈ ಕಲಿಯುಗಿ ಜಗತ್ತಿನಿಂದ ತನ್ನ ಬುದ್ಧಿ ಮತ್ತು ಸಂಕಲ್ಪದ ಹಾಸಿಗೆ ಮತ್ತು ಪೆಟ್ಟಿಗೆಯನ್ನು ಸಂಕ್ಷಿಪ್ತಗೊಳಿಸಿಕೊಂಡು ಮನೆ ಪರಮಧಾಮಕ್ಕೆ ಹೋಗಲು ಸಿದ್ಧತೆ ಮಾಡಿಕೊಳ್ಳುತ್ತಾನೆ.

೩. ಸಹನಾ ಶಕ್ತಿ:- ಮರಕ್ಕೆ ಕಲ್ಲನ್ನು ಹೊಡೆದರೂ ಅದು ಸಿಹಿಯಾದ ಹಣ್ಣನ್ನು ಕೊಡುತ್ತದೆ. ಅಪಕಾರ ಮಾಡುವವರಿಗೂ ಉಪಕಾರ ಮಾಡುತ್ತದೆ. ಹಾಗೆಯೇ ಯೋಗಿಯು ಸದಾ ಅಪಕಾರ ಮಾಡುವವರ ಮೇಲೆ ಉಪಕಾರದ ಶುಭ ಭಾವನೆ ಹಾಗೂ ಶುಭ ಕಾಮನೆಗಳನ್ನು ಹರಿಸುತಿರುತ್ತಾನೆ.

೪. ಅಳವಡಿಸಿಕೊಳ್ಳುವ ಶಕ್ತಿ:- ಯೋಗದ ಅಭ್ಯಾಸದಿಂದ ಬುದ್ಧಿಯು ವಿಶಾಲವಾಗುತ್ತದೆ. ಆಗ ಮಾನವನು ಗಂಭೀರತೆ ಹಾಗೂ ಮರ್ಯಾದೆಯ ಗುಣಗಳನ್ನು ತುಂಬಿಕೊಳ್ಳುತ್ತಾನೆ. ಅಧಿಕಾರ, ಹೆಸರು, ಅಂತಸ್ತಿಗೊಳಗಾಗಿ ಅಭಿಮಾನ ಪಡುವುದಿಲ್ಲ. ಮತ್ತು ಏನಾದರೂ ಕೊರತೆಯಾದರೆ ಹಾಗೂ ತೊಂದರೆಯಾದರೆ ದು:ಖಕ್ಕೊಳಗಾಗುವುದಿಲ್ಲ. ಸಮುದ್ರದಂತೆ ತನ್ನ ದೈವಿಕುಲದ ಮರ್ಯಾದೆಯೊಳಗಿರುತ್ತಾನೆ. ಅನ್ಯರಲ್ಲಿ ಅವಗುಣಗಳನ್ನು ಕಂಡರೂ ದಿವ್ಯ ಗುಣಗಳನ್ನೇ ನೋಡುತ್ತಿರುತ್ತಾನೆ.


೫. ಪರೀಕ್ಷಿಸುವ ಶಕ್ತಿ:- ಚಿನ್ನದ ವ್ಯಾಪಾರಿಯು ಒರೆಗಲ್ಲಿನಿಂದ ಅದರ ಸತ್ಯಾಸತ್ಯತೆಯನ್ನು ಕಂಡುಕೊಳ್ಳುತ್ತಾನೆ. ಹಾಗೆಯೇ ಯೋಗಿಯು ಕೂಡ ಯಾವುದೇ ಮನುಷ್ಯರು ತನ್ನ ಹತ್ತಿರ ಬರುತ್ತಿದ್ದಂತೆ ಅರ್ಥ ಮಾಡಿಕೊಳ್ಳುತ್ತಾನೆ. ಏಕೆಂದರೆ ಅವನ ಮುಂದೆ ಸತ್ಯ ಮತ್ತು ಅಸತ್ಯತೆಯನ್ನು ಮುಚ್ಚಿಡಲು ಆಗುವುದಿಲ್ಲ. ಅವನು ಸತ್ಯದ ರತ್ನಗಳನ್ನೇ ಸ್ವೀಕರಿಸುತ್ತಾನೆ ಮತ್ತು ಅಜ್ಞಾನದ ಕೊಳಕನ್ನು ಬುದ್ಧಿಯಲ್ಲಿಟ್ಟುಕೊಳ್ಳುವುದಿಲ್ಲ.

೬. ನಿರ್ಣಯಿಸುವ ಶಕ್ತಿ:- ಇದು ಯೋಗದ ಅಭ್ಯಾಸದಿಂದ ತಾನಾಗಿಯೇ ಪ್ರಾಪ್ತಿಯಾಗುತ್ತದೆ. ಸತ್ಯ-ಅಸತ್ಯತೆಗಳ ವಿಚಾರಗಳನ್ನು ತಕ್ಷಣ ನಿರ್ಣಯಿಸಿ ಬಿಡುತ್ತಾನೆ. ವ್ಯರ್ಥ ಮತ್ತು ಪರ ಚಿಂತೆಯಿಂದ ಮುಕ್ತನಾಗಿ ಭಾಗ್ಯವಿಧಾತ ಭಗವಂತನ ಚಿಂತನೆಯಲ್ಲಿರುತ್ತಾನೆ.

೭. ಎದುರಿಸುವ ಶಕ್ತಿ:- ಯೋಗಿಯು ಮುಂದೆ ಬಿರುಗಾಳಿಯಂತಹ ಸಮಸ್ಯೆಗಳೇ ಬರಲಿ, ಹತ್ತಿರದ ಸಂಬಂಧಿಗಳ ಮೃತ್ಯುವೇ ಆಗಿರಲಿ, ಅವನು ವಿಚಲಿತನಾಗುವುದಿಲ್ಲ. ಏಕೆಂದರೆ ಅವನ ಆತ್ಮಜ್ಯೋತಿಯು ಸದಾ ಬೆಳಗುತ್ತಿರುತ್ತದೆ. ಅನ್ಯರಿಗೆ ಮಾರ್ಗದರ್ಶಕನಾಗಿ ನಿಂತು ಮುನ್ನಡೆಯುತ್ತಾನೆ. ರಾಜ ಯೋಗದಿಂದ ಮನೋಬಲವು ಬರುತ್ತದೆ.

೮. ಸಹಕಾರ ಶಕ್ತಿ:- ಯೋಗಿಯು ತನ್ನ ತನು-ಮನ-ಧನದಿಂದ ಈಶ್ವರೀಯ ಸೇವೆ ಮಾಡುತ್ತಾನೆ. ಇದರಿಂದ ಅನ್ಯ ಆತ್ಮಗಳಿಗೂ ತಾನಾಗಿಯೇ ಸಹಕಾರವು ಸಿಗುತ್ತದೆ. ಅದಕ್ಕಾಗಿ ಕಲಿಯುಗದ ವಿಕಾರಿ-ಪರ್ವತವನ್ನು ಎತ್ತಿ ಉರುಳಿಸಲು ತನ್ನ ಪವಿತ್ರ ಜೀವನವೆಂಬ ಬೆರಳನ್ನಿತು ಸ್ವರ್ಗದ ಸ್ಥಾಪನೆಯಂತಹ ಪರಮಾತ್ಮನ ಬೃಹತ್ ಕಾರ್ಯಕ್ಕೆ ಸಹಕಾರ ನೀಡುತ್ತಾನೆ. ಅವನ ಸಹಕಾರವು ತನಗೆ ಹಾಗೂ ಅನ್ಯರಿಗೆ ಜನ್ಮ ಜನ್ಮಾಂತರಕ್ಕಾಗಿ ಭಾಗ್ಯವನ್ನೀಯುತ್ತದೆ.

# ರಾಜಯೋಗದಿಂದ ಪ್ರಾಪ್ತಿ- ಅಷ್ಟ ಶಕ್ತಿಗಳು



# ರಾಜಯೋಗದ ಯಾತ್ರೆ- ಸ್ವರ್ಗದೆಡೆಗೆ ಓಟ



# ರಾಜಯೋಗದ ಯಾತ್ರೆ- ಸ್ವರ್ಗದೆಡೆಗೆ ಓಟ

ರಾಜಯೋಗವನ್ನು ನಿರಂತರವಾಗಿ ಅಭ್ಯಾಸ ಮಾಡುವುದರಿಂದ ಮನುಷ್ಯಾತ್ಮರಿಗೆ ಅನೇಕ ಬಗೆಯ ಶಕ್ತಿಗಳು ಪ್ರಾಪ್ತಿಯಾಗುತ್ತವೆ. ಇವುಗಳಿಂದ ಜಗತ್ತಿನ ಅಡ್ಡಿ-ಆತಂಕಗಳನ್ನು ಸಹಜವಾಗಿ ದಾಟುತ್ತಾ ಆಧ್ಯಾತ್ಮಿಕ ಮಾರ್ಗದಲ್ಲಿ ಉನ್ನತಿಗೇರುತ್ತಾನೆ. ಇಂದು ಮಾನವನು ಅನೇಕ ಬಗೆಯ ಚಿಂತೆ, ಒತ್ತಡ, ರೋಗ, ಶೋಕಗಳಲ್ಲಿ ಸಿಲುಕಿಕೊಂಡಿದ್ದಾನೆ. ಈ ಜಗತ್ತು ನರಕವಾಗಿದೆ. ಇದರಿಂದ ಮುಕ್ತರಾಗಿ ಸ್ವರ್ಗದೆಡೆಗೆ ಸಾಗಲು ಪ್ರತಿಯೊಂದು ಪ್ರಾಣಿಯು ತವಕಪಡುತ್ತದೆ. ಆದರೆ ಮಾರ್ಗದಲ್ಲಿ ಅನೇಕ ಬಗೆಯ ಅಡೆತಡೆಗಳು ಬಂದೇ ಬರುತ್ತವೆ. ಕಾಮ, ಕ್ರೋಧ, ಲೋಭ, ಮೋಹ, ಅಹಂಕಾರಗಳು ಮುಖ್ಯವಾದ ಹಾಗೂ ಪ್ರಬಲವಾದ ಅಡೆತಡೆಗಳಾಗಿವೆ. ಈ ಪುರುಷೋತ್ತಮ ಸಂಗಮ ಯುಗದಲ್ಲಿ ಸರ್ವ ಶಕ್ತಿವಾನ್ ಪರಮಾತ್ಮ ಶಿವನು ಬ್ರಹ್ಮಾರವರ ಮೂಲಕ ರಾಜಯೋಗದ ಶಿಕ್ಷಣವನ್ನು ನೀಡುತ್ತಿದ್ದಾನೆ. ಇದರಿಂದ ಮಾನವನು ಪಂಚವಿಕಾರಗಳೆಂಬ ಪ್ರಬಲವಾದ ಶತೃಗಳ ಮೇಲೆ ವಿಜಯಗಳಿಸುತ್ತಾನೆ.

ಚಿತ್ರದಲ್ಲಿ ಮೊದಲಿಗೆ ಮಾನವನು 'ಕಾಮ'ವಿಕಾರವೆಂಬ ಎತ್ತರವಾದ ಗೋಡೆಯನ್ನು ದಾಟಬೇಕಾಗುತ್ತದೆ. ಗೋಡೆಯಲ್ಲಿ ಗಾಜಿನ ಚೂರುಗಳಿವೆ. ದೇಹಾಭಿಮಾನದ ಕಾರಣ ಇದರಿಂದ ಪಾರಾಗಲು ಆಗುತ್ತಿಲ್ಲ. ಗಾಜಿನ ಮೇಲೆ ಬಿದ್ದು ಗಾಯಗೊಳ್ಳುತ್ತಿದ್ದಾನೆ. ವಿಕಾರಿ ದೃಷ್ಟಿ, ವೃತ್ತಿ, ಕೃತಿಯಿಂದ ಪಾರಾಗುವುದು ಕಷ್ಟಸಾಧ್ಯವೆನಿಸುತ್ತದೆ. ಆದುದರಿಂದ ಆತ್ಮಾಭಿಮಾನಿಯಾಗಿ ಪವಿತ್ರ ದೃಷ್ಟಿಯಿಂದ ಪಾರಾಗುತ್ತಾನೆ.

'ಕ್ರೋಧಾಗ್ನಿ'ಯು ಭಯಾನಕವಾಗಿದೆ. ಈ ಭೂತಕ್ಕೆ ವಶನಾದರೆ ಸತ್ಯಾಸತ್ಯತೆಯ ಅರಿವಾಗುವುದಿಲ್ಲ. ಜೊತೆಗೆ ಈರ್ಷ್ಯೆ-ದ್ವೇಷಾಸೂಯೆಗಳು ಸೇರಿಕೊಳ್ಳುತ್ತವೆ. ಜೊತೆಗೆ ಇವು ಅನ್ಯರನ್ನೂ ಸುಟ್ಟು ಹಾಕುತ್ತವೆ. ಇದರಿಂದ ಪಾರಾಗಲು ನಾನು ಆತ್ಮ, ನನ್ನ ಸ್ವಧರ್ಮವಾದ ಶಾಂತಿಯ ಸ್ಥಿತಿಯಲ್ಲಿ ಸ್ಥಿತರಾದಾಗ ಜಯಿಸಬಹುದು.

'ಲೋಭ'ವು ಮಾನವನನ್ನು ಸತ್ಯ ಮಾರ್ಗದಿಂದ ದೂರ ಕೊಂಡೊಯ್ಯುತ್ತದೆ. ಲೋಭಿಗೆ ಶಾಂತಿಯು ಸಿಗುವುದಿಲ್ಲ. ಅದಕ್ಕಾಗಿ ಸ್ವರ್ಗದ ಅಪಾರವಾದ ಸಂತೋಷವನ್ನು ಸ್ವೀಕರಿಸಿದಾಗ ಇದರಿಂದ ಸಹಜವಾಗಿ ಪಾರಾಗಬಹುದು.

'ಮೋಹ'ವು ಮನುಷ್ಯನನ್ನು ಬಲೆಯಲ್ಲಿ ಸಿಲುಕಿಸಿ ವಿಲವಿಲನೆ ಒದ್ದಾಡಿ ಸಾಯುವಂತೆ ಮಾಡುತ್ತದೆ. ಸಾಧನೆಯ ಮಾರ್ಗದಲ್ಲಿ ಮುನ್ನಡೆಯಲಾರದವನಾಗಿ ಬಿಡುತ್ತಾನೆ. ಗೀತೆಯಲ್ಲಿ 'ನಷ್ಟ ಮೋಹ ಸ್ಮೃತಿರ್ಲಬ್ಧ' ಅಂದರೆ ದೇಹ ಹಾಗೂ ದೇಹ ಸಹಿತ ಸರ್ವ ಸಂಬಂಧಗಳನ್ನು ಮರೆತು ಪರಮಾತ್ಮನ ನೆನಪಿನಲ್ಲಿ ಮಗ್ನನಾಗಿದ್ದಾದರೆ ಸಹಜವಾಗಿ ಪಾರಾಗಬಹುದು. ಸ್ವರ್ಗದ ಅದ್ಭುತವಾದ ಪ್ರಾಪ್ತಿಯ ಮುಂದೆ ಇವುಗಳಲ್ಲೇನಿದೆ?.

'ಅಹಂಕಾರ'ವು ಉನ್ನತಿಗೇರಲು ಬೆಟ್ಟದಂತೆ ಅಡ್ಡಾವಾಗುತ್ತದೆ. ಅಹಂಕಾರಿಯು ಎಂದಿಗೂ ಪತಿತ ಪಾವನ ಪರಮಾತ್ಮನ ಅನುಭೂತಿಯನ್ನು ಮಾಡಲಾರನು. ಅಹಂಕಾರಿಯು ಬೆಟ್ಟದ ಶಿಖರದಿಂದ ಬಿದ್ದರೆ ಪುಡಿಪುಡಿಯಾಗುವನು. ಸಹಜವಾದ ಯುಕ್ತಿ ಅಂದರೆ ಪರಮಾತ್ಮನಿಂದ ಪ್ರಾಪ್ತಿಯಾಗುತ್ತಿರುವ ಜ್ಞಾನ, ಗುಣ, ಶಕ್ತಿ ವಿಶೇಷತೆಗಳನ್ನು ಅನುಭವ ಮಾಡುತ್ತಾ ಹೋದರೆ ಅಹಂಕಾರವು ಅಳಿದು ನಿರಹಂಕಾರಿಯಾಗುತ್ತಾನೆ.

ಸ್ವರ್ಗದೆಡೆಗೆ ಸಾಗಬೇಕು. ಮಾನವರಿಂದ ದೇವತೆಗಳಾಗಬೇಕು. ಅಂದರೆ ಈ ದುಷ್ಟ ವಿಕಾರಗಳನ್ನು ಗೆಲ್ಲಲೇಬೇಕು. 'ಸತ್ತರೆ ಸ್ವರ್ಗಕ್ಕೆ ಹೋದರು' ಎಂದು ಹೇಳುತ್ತಾರೆ. ಇದು ಅಸತ್ಯ.... ಹಾಗೇನಾದರೂ ಸತ್ತವರೆಲ್ಲಾ ಸ್ವರ್ಗಕ್ಕೆ ಹೋಗಿದ್ದರೆ. ಇಲ್ಲಿನ ಜನಸಂಖ್ಯೆಯು ತುಂಬಾ ಕಡಿಮೆಯಾಗಬೇಕಿತ್ತು. ಆ ಸ್ವರ್ಗದಲ್ಲಿ ಜನಸಂಖ್ಯೆಯು ಹೆಚ್ಚಾಗಿ ಬಿಡುತ್ತಿತ್ತು. ಮತ್ತು ಸತ್ತವರ ಕಡೆಯವರು ಅಳಬೇಕಾದ ಅವಶ್ಯಕತೆಯೇ ಇರುತ್ತಿರಲಿಲ್ಲ. ಎಲ್ಲರಿಗೂ ಸಿಹಿಯನ್ನು ಹಂಚಿಬಿಡುತ್ತಿದ್ದರು. ಪರಮಾತ್ಮ ಶಿವನು ನೀಡುತ್ತಿರುವ ಸತ್ಯಜ್ಞಾನ ಹಾಗೂ ರಾಜಯೋಗದ ಅಭ್ಯಾಸದಿಂದ ಮಾತ್ರ ಸ್ವರ್ಗದ ಪ್ರಾಪ್ತಿಯಾಗುತ್ತದೆ...ಇದು ಸತ್ಯ.

# ಈಶ್ವರೀಯ ವಿಶ್ವವಿದ್ಯಾಲಯದ (ಕರ್ನಾಟಕ) ಕೆಲವು ಪ್ರಮುಖ ಕೇಂದ್ರಗಳು

**ಅಬು ಪರ್ವತ - ಪಾಂಡವಭವನ - 02974 - 238261/238268**

| | | | | | | |
|---|---|---|---|---|---|---|
| ಬಾಗಲಕೋಟೆ | - | ನವನಗರ | - | 08354 | - | 236150 |
| ಬೆಂಗಳೂರು | - | ಬಸವನಗುಡಿ | - | 080 | - | 26674562 |
| ಬೆಂಗಳೂರು | - | ಫೋರ್ಟ ಡಿ ಸ್ಟ್ರೀಟ | - | 080 | - | 26701863 |
| ಬೆಂಗಳೂರು | - | ಕುಮಾರ ಪಾರ್ಕ | - | 080 | - | 23443988 |
| ಬೆಳಗಾವಿ | - | ಮಹಂತೇಶ ನಗರ | - | 0831 | - | 2458666 |
| ಬಳ್ಳಾರಿ | - | ಮೋತಿ ಸರ್ಕಲ್ | - | 08392 | - | 274831 |
| ಬೀದರ | - | ಪಾವನ ಧಾಮ | - | 08482 | - | 226803 |
| ಬಿಜಾಪುರ | - | ಮೀನಾಕ್ಷಿ ಚೌಕ | - | 08352 | - | 251516 |
| ಚಾಮರಾಜನಗರ | - | ಬಿ.ಆರ್.ಹಿಲ್ಸರೋಡ | - | 08226 | - | 222358 |
| ಚಿಕ್ಕಬಳ್ಳಾಪುರ | - | ಕೆ.ಟಿ.ರೋಡ್ | - | 08156 | - | 273936 |
| ಚಿಕ್ಕಮಗಳೂರು | - | ಓಂ ಶಾಂತಿ ರೋಡ | - | 08262 | - | 232432 |
| ಚಿತ್ರದುರ್ಗ | - | ಸರಸ್ವತಿ ಲಾ ಕಾಲೇಜ ಹತ್ತಿರ | - | 08194 | - | 225185 |
| ದಾವಣಗೆರೆ | - | ಪಿ-3, ಶಿವಾಲಯ | - | 08192 | - | 255575 |
| ಧಾರವಾಡ | - | ಮರಾಠ ಕಾಲೋನಿ | - | 0836 | - | 2791447 |
| ಗುಲ್ಬರ್ಗಾ | - | ಆದರ್ಶ ನಗರ | - | 08472 | - | 246419 |
| ಗದಗ | - | ರಾಜಯೋಗ ಭವನ | - | 08372 | - | 277385 |
| ಹಾವೇರಿ | - | ಜಯದೇವ ನಗರ | - | 08375 | - | 234712 |
| ಹಾಸನ | - | ಡೈಮಂಡ್ ಹೌಸ್ | - | 08172 | - | 267655 |
| ಹುಬ್ಬಳ್ಳಿ | - | ಜೆ.ಸಿ.ನಗರ | - | 0836 | - | 2367274 |
| ಕಾರವಾರ | - | ಕೆ.ಹೆಚ್.ಬಿ.ಕಾಲೋನಿ | - | 08382 | - | 221632 |
| ಕೋಲಾರ | - | ಶಿವಶಕ್ತಿ ಭವನ | - | 08152 | - | 223306 |
| ಕೊಪ್ಪಳ | - | ಕುಲಕರ್ಣಿ ಆಸ್ಪತ್ರೆ ಹತ್ತಿರ | - | 08539 | - | 200514 |
| ಮಡಿಕೇರಿ | - | ಲೈಟ್ ಹೌಸ್ | - | 08272 | - | 228923 |
| ಮಂಡ್ಯ | - | ಬನ್ನೂರು ರಸ್ತೆ | - | 08232 | - | 220724 |
| ಮಂಗಳೂರು | - | ಉರ್ವಾ ಸ್ಟೋರ್ಸ್ | - | 0824 | - | 2458141 |
| ಮೈಸೂರು | - | ಯಾದವಗಿರಿ | - | 0821 | - | 2517214 |
| ಮೈಸೂರು | - | ಜ್ಞಾನ ಸರೋವರ | - | 0821 | - | 2402722 |
| ರಾಮನಗರಂ | - | ವಿದ್ಯಾ ನಗರ | - | 080 | - | 27273367 |
| ರಾಯಚೂರು | - | ಟಾಗೂರ್ ಸ್ಕೂಲ ಹತ್ತಿರ | - | 08532 | - | 231888 |
| ಶಿವೊಗ್ಗ | - | ದುರ್ಗಿಗುಡಿ ಬಡಾವಣೆ | - | 08182 | - | 271990 |
| ತುಮಕೂರು | - | ಚಿಕ್ಕಪೇಟೆ | - | 0816 | - | 2274141 |
| ಉಡುಪಿ | - | ಅಜ್ಜರಕಾಡು | - | 0820 | - | 2521264 |
| ಯಾದಗಿರಿ | - | ಬಾಲಾಜ ಮಂದಿರದ ಹತ್ತಿರ | - | 08473 | - | 252720 |

# गीता ज्ञान कब क्यों और किसके द्वारा दिया गया?

# GITA KNOWLEDGE – WHEN, WHY & BY WHOM?




FEARLESSNESS
निर्भयता
INTROVERTNESS
PATIENCE
धैर्यता
PURITY
पवित्रता
HUMILITY
नम्रता
SWEETNESS
मधुरता
TOLERANCE
सहनशीलता
CHEERFULNESS
हर्षितमुखता
कमल पुष्प समान पवित्र बनो
दिव्य गुण
DIVINE VIRTUES